ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 15 ಸೋಮವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 29 | ಪುಟಗಳು: 10
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಡಿ.ಕೆ. ಶಿವಕುಮಾರ್ ಹುಟ್ಟುಹಬ್ಬ



ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆದ ಬೆಂಗಳೂರಿನ ಶಾಂಗ್ರೀಲಾ ಹೋಟೆಲ್‌ನಲ್ಲಿ ಭಾನುವಾರ ಮಧ್ಯ ರಾತ್ರಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕೇಕ್ ಕಟ್ ಮಾಡುವ ಮೂಲಕ ತಮ್ಮ 62ನೇ ಹುಟ್ಟುಹಬ್ಬ ಆಚರಿಸಿದರು. ಈ ವೇಳೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಮಾಜಿ ಸಚಿವ ದಿನೇಶ್ ಗುಂಡೂರಾವ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮ್ಮದ್ ಇತರರು ಶುಭ ಕೋರಿದರು.

ಎಸ್‌ಎಸ್‌ಎಲ್‌ಸಿ: ಉತ್ತಮ ಸಾಧನೆ



ಮೇಘಶ್ರೀ

ಕೊಳ್ಳೇಗಾಲ: ತಾಲೂಕು ಹೊಸಮಾಲಂಗಿ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿ ಮೇಘಶ್ರೀ 625ಕ್ಕೆ 615 ಹಾಗೂ ಬಿ.ತೇಜಸ್ವಿನಿ 625ಕ್ಕೆ 606, ಆಶಾ ಅವರು 625ಕ್ಕೆ 573 ಅಂಕ ಗಳಿಸಿದ್ದಾರೆ. ಅಲ್ಲದೆ, 6 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 23 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 5 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿ, 5 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದು, ಶಾಲೆಗೆ ಶೇ.100ರಷ್ಟು ಫಲಿತಾಂಶ ಬಂದಿದೆ.



ಮಹರ್ಷಿ ಪಬ್ಲಿಕ್ ಶಾಲೆಯ ವಿದ್ಯಾರ್ಥಿ 10ನೇ ತರಗತಿ (ಸಿಬಿಎಸ್‌ಸಿ) ಪರೀಕ್ಷೆಯಲ್ಲಿ ಶೇ.96.2ರಷ್ಟು ಅಂಕ ಪಡೆದ ವೈ.ಸೋಹನ್‌ಕುಮಾರ್‌ನನ್ನು ಶಾಲೆಯ ಮ್ಯಾನೇಜಿಂಗ್ ಟ್ರಸ್ಟಿ ಭವಾನಿ ಶಂಕರ್, ಪ್ರಾಂಶುಪಾಲರಾದ ಗೋಪಾಲ ಸ್ವಾಮಿ, ತೇಜಸ್ ಶಂಕರ್ ಅಭಿನಂದಿಸಿದರು.

ಬಿಗಿ ಭದ್ರತೆಯಲ್ಲಿ ವೇರ್‌ಹೌಸ್ ಸೇರಿದ ಮತಯಂತ್ರ, ವಿವಿ ಪ್ಯಾಟ್

ಮಹಾರಾಣಿ ವಾಣಿಜ್ಯ ಕಾಲೇಜು ಕಟ್ಟಡದಿಂದ ಸಿದ್ದಾರ್ಥನಗರದ ಹೊಸ ಡಿಸಿ ಆಫೀಸ್ ಬಳಿಯಿರುವ ವೇರ್‌ಹೌಸ್‌ಗೆ ಶಿಫ್ಟ್



ಮೈಸೂರು, ಮೇ 14(ಎಂಟಿವೈ)–ವಿಧಾನಸಭಾ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯ 11 ಕ್ಷೇತ್ರಗಳ ಮತದಾನದಲ್ಲಿ ಬಳಸಲಾಗಿದ್ದ ವಿದ್ಯುನ್ಮಾನ ಮತಯಂತ್ರ ಹಾಗೂ ವಿವಿಪ್ಯಾಟ್‌ಗಳನ್ನು ಎಣಿಕಾ ಕೇಂದ್ರದಿಂದ ಬಿಗಿ ಭದ್ರತೆಯಲ್ಲಿ ವೇರ್‌ಹೌಸ್‌ಗೆ ಕೊಂಡೊಯ್ದು ಸುರಕ್ಷಿತವಾಗಿ ಇಡಲಾಯಿತು.

ಮೇ 10ರಂದು ನಡೆದ ಚುನಾವಣೆಯಲ್ಲಿ ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳ ಚುನಾವಣೆಯಲ್ಲಿ 3478 ಬ್ಯಾಲೆಟ್ ಯೂನಿಟ್, 2938 ಕಂಟ್ರೋಲ್ ಯೂನಿಟ್ ಹಾಗೂ 3022 ವಿವಿ ಪ್ಯಾಟ್‌ಗಳನ್ನು ಬಳಸಲಾಗಿತ್ತು. ಜಿಲ್ಲೆಯಲ್ಲಿ 2905 ಮತಗಟ್ಟೆಗಳಿದ್ದರೂ, ಶೇ.20ರಷ್ಟು ಹೆಚ್ಚುವರಿಯಾಗಿ ಇವಿಎಂ ಹಾಗೂ ವಿವಿ ಪ್ಯಾಟ್‌ಗಳನ್ನು ಕಾಯ್ದಿರಿಸಲಾಗಿತ್ತು. ಯಾವುದಾದರೂ ಮತಗಟ್ಟೆಗಳಲ್ಲಿ ಮತಯಂತ್ರ ಹಾಗೂ ಕಂಟ್ರೋಲ್ ಯೂನಿಟ್‌ಗಳಲ್ಲಿ ತಾಂತ್ರಿಕ ದೋಷ ಕಂಡು ಬಂದರೆ ಇವಿಎಂ ಬದಲಿಸಲು ಹೆಚ್ಚುವರಿ ಯಂತ್ರಗಳನ್ನು ಕಾಯ್ದಿರಿಸಲಾಗಿತ್ತು. ಆದರೆ, ಮತಗಟ್ಟೆಗೆ ಒಂದರಂತೆ ಮತಯಂತ್ರ ಬಳಸಲಾಗಿತ್ತು.

ಮೇ 13ರಂದು ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ವಾಣಿಜ್ಯ ಕಾಲೇಜಿನಲ್ಲಿ ಮತ ಎಣಿಕೆ ನಡೆದಿತ್ತು. ಜಿಲ್ಲೆಯಲ್ಲಿ ಮತದಾನ ಹಾಗೂ ಮತ ಎಣಿಕಾ ಕಾರ್ಯ ಸಂಪೂರ್ಣವಾಗಿ ಶಾಂತಿಯುತವಾಗಿ ನೆರವೇರಿತ್ತು. ಮತ ಎಣಿಕಾ ಕಾರ್ಯ ಮುಗಿದ ಬಳಿಕ ಮತಯಂತ್ರಗಳನ್ನು ಸುರಕ್ಷಿತವಾಗಿ ಎಣಿಕಾ ಕೇಂದ್ರದಿಂದ ವೇರ್‌ಹೌಸ್‌ಗೆ ಸಾಗಿಸಲು ಸೂಚನೆ ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ಎಲ್ಲಾ ಮತಯಂತ್ರ, ವಿವಿ ಪ್ಯಾಟ್, ಕಂಟ್ರೋಲ್ ಯೂನಿಟ್‌ಗಳಲ್ಲಿ ಆಯಾ ಕ್ಷೇತ್ರಗಳ ಚುನಾವಣಾಧಿಕಾರಿಗಳ ಸಮ್ಮುಖದಲ್ಲಿ ವೇರ್‌ಹೌಸ್‌ಗೆ ಕೊಂಡೊಯ್ಯಲಾಯಿತು.

ಪಿರಿಯಾಪಟ್ಟಣ ಕ್ಷೇತ್ರದಲ್ಲಿ 235, ಕೆ.ಆರ್.ನಗರದಲ್ಲಿ 250, ಹುಣಸೂರು ಕ್ಷೇತ್ರದಲ್ಲಿ 273, ಹೆಚ್.ಡಿ.ಕೋಟೆ ಕ್ಷೇತ್ರದಲ್ಲಿ 282, ನಂಜನಗೂಡು ಕ್ಷೇತ್ರದಲ್ಲಿ 249, ಚಾಮುಂಡೇಶ್ವರಿ ಕ್ಷೇತ್ರದಲ್ಲಿ 337, ಕೆ.ಆರ್.ಕ್ಷೇತ್ರದಲ್ಲಿ 265, ಚಾಮರಾಜ ಕ್ಷೇತ್ರದಲ್ಲಿ 244, ನರಸಿಂಹರಾಜ ಕ್ಷೇತ್ರದಲ್ಲಿ 282, ವರುಣ ಕ್ಷೇತ್ರದಲ್ಲಿ 261 ಹಾಗೂ ತಿ.ನರಸೀಪುರ ಕ್ಷೇತ್ರದಲ್ಲಿ 227 ಇವಿಎಂ, ವಿವಿ ಪ್ಯಾಟ್ ಹಾಗೂ ಕಂಟ್ರೋಲ್ ಯೂನಿಟ್‌ಗಳನ್ನು ಮಾತ್ರ ಬಳಸಲಾಗಿತ್ತು. ಜಿಲ್ಲೆಯಲ್ಲಿ ಒಟ್ಟು 2905 ಮತಗಟ್ಟೆಗಳಿದ್ದು, ತಲಾ ಒಂದೊಂದು ಇವಿಎಂ, ವಿವಿ ಪ್ಯಾಟ್ ಹಾಗೂ ಕಂಟ್ರೋಲ್ ಯೂನಿಟ್‌ಗಳನ್ನು ಮತದಾನಕ್ಕೆ ಬಳಸಲಾಗಿತ್ತು. ಉಳಿದ ಯಂತ್ರಗಳನ್ನು ಸ್ಟ್ಯಾಂಡ್ ಬೈಗಳಾಗಿ ಕಾಯ್ದಿರಿಸಲಾಗಿತ್ತು.

ಈ ಬಾರಿ ಮತದಾನ ಪ್ರಕ್ರಿಯೆಯಲ್ಲಿ ಮಸ್ಟರಿಂಗ್ ಕೇಂದ್ರ ಮತಗಟ್ಟೆಗಳಿಗೆ 3452 ಇವಿಎಂ, ಮಾಕ್‌ಪೋಲ್ ವೇಳೆ 8 ಇವಿಎಂ, ಮತದಾನ ಆರಂಭವಾದ ನಂತರ ಕೆಲ ಕಾರಣದಿಂದ 18 ಇವಿಎಂ ಬದಲಾಯಿಸಲಾಗಿತ್ತು. ಒಟ್ಟು 3478 ಇವಿಎಂ ಈ ಚುನಾವಣೆಯಲ್ಲಿ ಬಳಸಿಕೊಳ್ಳಲಾಗಿತ್ತು. 2905 ಕಂಟ್ರೋಲ್ ಯೂನಿಟ್, ಮಾಕ್ ಪೋಲ್ ವೇಳೆ 19, ಮತದಾನ ಆರಂಭವಾದ ಬಳಿಕ ಬದಲಾಯಿಸಲಾದ 14 ಸೇರಿದಂತೆ 2938 ಕಂಟ್ರೋಲ್ ಯೂನಿಟ್ ಬಳಸಲಾಗಿದೆ. ಮತಗಟ್ಟೆಗಳಿಗೆ 2905 ವಿವಿ ಪ್ಯಾಟ್, ಮಾಕ್ ಪೋಲ್ ವೇಳೆ 21, ಮತದಾನದ ವೇಳೆ ಬದಲಿಸಲಾದ 96 ವಿವಿ ಪ್ಯಾಟ್ ಸೇರಿದಂತೆ ಜಿಲ್ಲೆಯಲ್ಲಿ 3022 ವಿವಿ ಪ್ಯಾಟ್‌ಗಳನ್ನು ಬಳಸಲಾಗಿತ್ತು. ಈ ಎಲ್ಲಾ ಮತಯಂತ್ರ, ವಿವಿ ಪ್ಯಾಟ್ ಹಾಗೂ ಕಂಟ್ರೋಲ್ ಯೂನಿಟ್‌ಗಳನ್ನು ಸುರಕ್ಷಿತವಾಗಿ ವೇರ್‌ಹೌಸ್‌ಗೆ ಕೊಂಡೊಯ್ದು ಇಡಲಾಯಿತು. ಪ್ರತಿಯೊಂದು ಕ್ಷೇತ್ರವಾರು ಬಳಸಲಾದ ಮತಯಂತ್ರಗಳನ್ನು ವೇರ್‌ಹೌಸ್‌ನಲ್ಲಿ ಪ್ರತ್ಯೇಕವಾಗಿಡಲಾಗಿದೆ. ಮತಯಂತ್ರಗಳ ಸ್ಥಳಾಂತರದ ವೇಳೆ ಹಾಗೂ ಮತಯಂತ್ರಗಳಿರುವ ಹಿನ್ನೆಲೆಯಲ್ಲಿ ವೇರ್‌ಹೌಸ್ ಬಳಿ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದ್ದು, ಸೂಕ್ತ ಬಂದೋಬಸ್ತ್ ಏರ್ಪಡಿಸಲಾಗಿದೆ. ಅಲ್ಲದೆ, ಸಿಸಿ ಕ್ಯಾಮರಾ ಕಣ್ಗಾವಲು ಹಾಕಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.5.2023 ಸೋಮವಾರ, ಮಳೆ ನಕ್ಷತ್ರ: ಕೃತ್ತಿಕ, 11.05.2023ರಿಂದ 24.05.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಪೂಭಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಆಲ್ಫಾ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣಾ ಶಿಬಿರ (ಶುಗರ್, ಬಿಪಿ, ಪೈಲ್ಸ್, ಫಿಸ್ತುಲ, ಉಬ್ಬಿರುವ ರಕ್ತನಾಳದ ತಪಾಸಣೆ), ಸ್ಥಳ: ಆಸ್ಪತ್ರೆ ಆವರಣ, ಸುಭಾಷ್‌ನಗರ, ಬನ್ನಿಮಂಟಪ, ಮಧ್ಯಾಹ್ನ 1 ಗಂಟೆಯಿಂದ.
- **ಮೈಸೂರ್ ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ :** ಸಿಇಟಿ ಅಣಕು ಪರೀಕ್ಷೆ, ಇ–ಮೇಲ್: www.mycem.edu.in, ರಿಜಿಸ್ಟ್ರೇಷನ್ ಲಿಂಕ್: http://tinyurl.com/36+4zwy+
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪ್ರಸಿದ್ಧ ಪ್ರವಚನಕಾರರಾದ ಪಂಡಿತ್ ನರಸಿಂಹಚಾರ್ಯ ಘೋಟೆ ಅವರಿಂದ ಭಗವದ್ಗೀತೆ 83ನೇ ಅಧ್ಯಯನ ಕುರಿತು ಪ್ರವಚನ ಕಾರ್ಯಕ್ರಮ, ಸ್ಥಳ: ಮಠದ ಆವರಣ, ಜಯಲಕ್ಷ್ಮಿಪುರಂ, ಸಂಜೆ 5 ಗಂಟೆಗೆ.
- **ಶ್ರೀ ಉತ್ತರಾದಿ ಮಠ :** ಶ್ರೀ ಭಗವದ್ಗೀತಾ ಅಭಿಯಾನ, ರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಸತ್ಯ ಸಂಕಲ್ಪತೀರ್ಥರು ಹಾಗೂ ಶ್ರೀ ಸತ್ಯ ಸಂತುಷ್ಟ ತೀರ್ಥರ ಸನ್ನಿಧಾನ, ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀ ಪಾದಂಗಳವರ ಆಜ್ಞೆ ಹಾಗೂ ಅನುಗ್ರಹದಿಂದ ಹೆಸರಾಂತ ಪ್ರವಚನಕಾರ ಪಂ. ಶ್ರೀ ನರಸಿಂಹಾಚಾರ್ಯ ಘೋಟೆ ಅವರಿಂದ ಭಗವದ್ಗೀತೆ ಅಧ್ಯಾಯ 8 ಕುರಿತು ಪ್ರವಚನ, ಸ್ಥಳ: ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: "ಮಹಾ ಮೋಜಣಿ" ಭರತ ಭೂಮಿಯನ್ನು ಆಳಿದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ–ಡಾ.ಗಜಾನನ ಶರ್ಮ, 6.40 ಪದಸಂಸ್ಕೃತಿ "ಕನ್ನಡ ಪದಗಳ ಬಳಕೆ" ಕಲಿಕೆಯ ವಿಶಿಷ್ಠ ಬಾನುಲಿ ಸರಣಿ, ಪ್ರಸ್ತುತಿ–ಪ್ರೊ.ಲಕ್ಷ್ಮೀನಾರಾಯಣ ಅರೋರಾ, 7.15 ಭಾವಗೀತೆಗಳು–ಸಿ.ಅಶ್ವಥ್, 8.30 ರೂಪಕ, 10.00 ಲಯ ಸಂಭ್ರಮ, ಪಾಶ್ಚಾತ್ಯ ಲಯ ವಾದ್ಯಗಳ ಪರಿಚಯ, ಭಾಗವಹಿಸುವವರು– ವಿದ್ವಾನ್ ಪ್ರಮಥ್ ಕಿರಣ್, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 11.00 ಸ್ಪೆಷಲ್ ಚುರುಮುರಿ: ಪ್ರಸ್ತುತಿ–ಪಿ.ಸಿ.ಮಳಿಮಠ ಮತ್ತು ಕೆ.ಬಿ.ಮೀನಾ, 11.30 ಮಿಶ್ರ ಮಾಧುರ್ಯ, 11.40 ಬೆಳ್ಳಿ ಬೆರಗು 'ಹುಣಸೂರು ಕೃಷ್ಣಮೂರ್ತಿ' ಹಾಗೂ ಕುರಿತ ಕಾರ್ಯಕ್ರಮ, ಲೇಖನ–ಗಣೇಶ್ ಅಮೀನ್, ನಿರ್ಮಾಣ–ಜಿ.ಎನ್.ಮಂಜುನಾಥ್. **ಮಧ್ಯಾಹ್ನ:** 12.30 ದೇವರ ನಾಮ: ಡಾ. ಆರ್.ಎನ್.ಶ್ರೀಲತಾ, ಎಸ್. ಶಂಕರ್, 12.45 ನಮ್ಮ ಆರೋಗ್ಯ: ಗರ್ಭಿಣಿಯರಲ್ಲಿ ಅಧಿಕ ರಕ್ತದೊತ್ತಡ ಕುರಿತು ಡಾ.ಶಿಲ್ಪಾ, ಎನ್.ವಿಜಯ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆ–ಬಿ.ಸುನಂದಾ ದಿಲೀಪ್, 3.00 ಮೈಸೂರು ಎ.ಚಂದನ್‌ಕುಮಾರ್–ವೇಣುವಾದನ. **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ, 4.30 ಝೇಂಕಾರ: ಕವಿ– ಕೆ.ಬಿ. ಪ್ರಭುಪ್ರಸಾದ್, ಸಂಗೀತ– ಎಸ್.ಜಿ.ರಘುರಾಂ, ಭಾಗವಹಿಸುವವರು ರಂಗರಾವ್ ಅಂಧಶಾಲೆಯ ಮಕ್ಕಳು, 4.45 ಹಿಂದಿ ಪಾಠ: ಪ್ರಸ್ತುತಿ–ಡಾ.ಸ್ಮಿತಾ ಚಿಪ್ಳೂಣ್‌ಕರ್, 6.50 ಕೃಷಿರಂಗ: ಕಿಸಾನ್ ವಾಣಿ– ಕಬ್ಬಿನಲ್ಲಿ ಅಧಿಕ ಇಳುವರಿಗಾಗಿ ಅನುಸರಿಸಬೇಕಾದ ಇ ಉತ್ಪದನಾ ತಾಂತ್ರಿಕತೆಗಳು ಕುರಿತು ಡಾ.ಟಿ.ತಿಮ್ಮೇಗೌಡ ಅವರೊಂದಿಗೆ ಸಂದರ್ಶನ. **ರಾತ್ರಿ:** 9.30 ಹಳ್ಳಿ ಹಾಡು: ಭಾಗವಹಿಸುವವರು ಪಾಳ್ಯದ ಸೋಬಾನೆ ಶಿವಮ್ಮ ಅವರೊಂದಿಗೆ ಸಂದರ್ಶನ, 10.00 ನಾಟಕ, 10.30 ಸವಿನೆನಪು.

ಕ್ಯಾತನಹಳ್ಳಿಯಲ್ಲಿ ಇಂದು

ಪ್ರಣತಿ ಟ್ರಸ್ಟ್, ಸಂಕಲನ ಮೈಸೂರು: ಚಿಣ್ಣರ ಮೇಳ–2023 ಮಕ್ಕಳ ರಂಗ ತರಬೇತಿ ಶಿಬಿರ ಸಮಾರೋಪ ಸಮಾರಂಭ, ಚಾಲನೆ: ಶಾಸಕ ಅನಿಲ್ ಚಿಕ್ಕಮಾದು, ಸಮಾರೋಪ ನುಡಿ: ಹಿರಿಯ ರಂಗಕರ್ಮಿ ಹೆಚ್. ಜನಾರ್ಧನ್ (ಜನ್ನಿ), ಅಧ್ಯಕ್ಷತೆ: ಕ್ಯಾತನಹಳ್ಳಿ ಗ್ರಾಪಂ ಅಧ್ಯಕ್ಷ ಬಸವರಾಜು, ಸ್ಥಳ: ಪ್ರಣತಿ ವಿದ್ಯಾಸಂಸ್ಥೆ ಆವರಣ, ಕ್ಯಾತನಹಳ್ಳಿ, ಸಂಜೆ 4.30 ಗಂಟೆಗೆ.

ಜನಾಕ್ರೋಶವೇ ಬಿಜೆಪಿ ಸೋಲಿಗೆ ಕಾರಣ

ಎಸ್‌ಯುಸಿಐ ಕಾರ್ಯದರ್ಶಿ ರವಿ

ಮೈಸೂರು, ಮೇ 14(ಎಸ್‌ಪಿಎನ್)– ಭ್ರಷ್ಟಾಚಾರ, ಬೆಲೆ ಏರಿಕೆ, ನಿರುದ್ಯೋಗ, ಶಿಕ್ಷಣ ಹಾಗೂ ರೈತ ವಿರೋಧಿ ನೀತಿಗಳ ವಿರುದ್ಧದ ತೀವ್ರ ಜನಾಕ್ರೋಶವೇ ಬಿಜೆಪಿ ಹೀನಾಯ ಸೋಲಿಗೆ ಕಾರಣ' ಎಂದು ಎಸ್‌ಯುಸಿಐ ಕಮ್ಯೂನಿಸ್ಟ್ ಪಕ್ಷದ ಜಿಲ್ಲಾ ಘಟಕ ಅಭಿಪ್ರಾಯಪಟ್ಟಿದೆ.

ಆಪರೇಷನ್ ಕಮಲದ ಮೂಲಕ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಜನರ ಸಮಸ್ಯೆಗಳತ್ತ ಗಮನ ಹರಿಸುವಲ್ಲಿ ವಿಫಲವಾಗಿದೆ ಎಂದು ಕಾರ್ಯದರ್ಶಿ ಬಿ.ರವಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಬಂಡವಾಳಶಾಹಿ ಪರ ನಿಲುವು ತೋರಿದೆ. ಪ್ರಧಾನಿ ನರೇಂದ್ರ ಮೋದಿ ತೋರಿಸಿ ಚುನಾವಣೆ ಗೆಲ್ಲಬಹುದೆಂಬ ಬಿಜೆಪಿಯ ಭಂಡ ರಾಜಕಾರಣವನ್ನು ಜನರು ತಿರಸ್ಕರಿಸಿದ್ದಾರೆ. ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಸೇರಿದಂತೆ ಕೇಂದ್ರದ ನಾಯಕರು ರಾಜ್ಯದಲ್ಲಿ ಬೀಡುಬಿಟ್ಟರೂ, ಬಿಜೆಪಿ ಗೆಲ್ಲಿಸಲಾಗಲಿಲ್ಲ ಎಂದು ಟೀಕಿಸಿದ್ದಾರೆ.

ರಾಜ್ಯದಲ್ಲಿ ಬಿಜೆಪಿ ರಾಜಕೀಯವಾಗಿ ಸೋತಿದೆ. ಆದರೂ ಬರುವ ಸರ್ಕಾರವೂ ಕೂಡ ಜನವಿರೋಧಿ ನೀತಿ ತಳೆಯದಂತೆ ತಡೆಯಲು, ಒಡೆದು ಆಳುವ ದುಷ್ಟ ರಾಜಕೀಯ ಹಿಮ್ಮೆಟ್ಟಿಸಲು, ಜನರು ಜಾಗರೂಕರಾಗಬೇಕು ಎಂದು ಜನರಲ್ಲಿ ಮನವಿ ಮಾಡಿದ್ದಾರೆ.

10ನೇ ತರಗತಿಯಲ್ಲಿ ಉನ್ನತ ಶ್ರೇಣಿ



ಮೈಸೂರು, ಮೇ 14–ಮೈಸೂರಿನ ಜೆ.ಪಿ.ನಗರದಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ, ಎ. ರಿಧಿ ಈ ಬಾರಿಯ ಸಿಬಿಎಸ್‌ಸಿ 10ನೇ ತರಗತಿ ಪರೀಕ್ಷೆಯಲ್ಲಿ ಶೇ.94.67ರಷ್ಟು ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡ–100, ಇಂಗ್ಲಿಷ್–92, ಗಣಿತ–84, ವಿಜ್ಞಾನ–95, ಸಮಾಜ ವಿಜ್ಞಾನ–97 ಹಾಗೂ ಇನ್ಫರ್ಮೇಷನ್ ಟೆಕ್ನಾಲಜಿಯಲ್ಲಿ 100 ಅಂಕ ಪಡೆದು ಈ ಸಾಧನೆ ಮಾಡಿದ್ದಾರೆ. ಈಕೆ ಜೆಪಿ ನಗರದ ನಿವಾಸಿ ವೃಷಭೇಂದ್ರಕುಮಾರ್ ಜಿ.(ರಿಷಿ ವಿಶ್ವಕರ್ಮ), ಶ್ರೀಮತಿ ಮಂಜು ಭಾರ್ಗವಿ ದಂಪತಿ ಪುತ್ರಿ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 15 ಸೋಮವಾರ 2023

ಸಂಪುಟ: 44 | ಸಂಚಿಕೆ: 29 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಿಐಎಸ್‌ಸಿಇ 10, 12ನೇ ತರಗತಿ ಫಲಿತಾಂಶ ಪ್ರಕಟ

ನವದೆಹಲಿ: ಕೌನ್ಸಿಲ್ ಫಾರ್ ದಿ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್ಸ್ (ಸಿಐಎಸ್‌ಸಿಇ) ಭಾನುವಾರ ಇಂಡಿಯನ್ ಸರ್ಟಿಫಿಕೇಟ್ ಆಫ್ ಸೆಕೆಂಡರಿ ಎಜುಕೇಶನ್(ಐಸಿಎಸ್‌ಇ 10ನೇ ತರಗತಿ) ಮತ್ತು ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ (ಐಎಸ್‌ಸಿ 12ನೇ ತರಗತಿ) ಫಲಿತಾಂಶ ಪ್ರಕಟಿಸಿದೆ.

ವಿದ್ಯಾರ್ಥಿಗಳು CISCE ವೆಬ್‌ಸೈಟ್ http://cisce.org ಅಥವಾ http://results.cisce.orgಗೆ ಭೇಟಿ ನೀಡುವ ಮೂಲಕ ತಮ್ಮ ಫಲಿತಾಂಶಗಳನ್ನು ಪರಿಶೀಲಿಸಬಹುದು. ಐಸಿಎಸ್‌ಇ 10ನೇ ತರಗತಿ ಪರೀಕ್ಷೆಗಳು ಫೆ.27ರಿಂದ ಮಾ.29 ರವರೆಗೆ ನಡೆದಿತ್ತು. ISC 12ನೇ ತರಗತಿ ಪರೀಕ್ಷೆಯು ಫೆ.13ರಂದು ಪ್ರಾರಂಭವಾಗಿ ಮಾರ್ಚ್ 31ಕ್ಕೆ ಕೊನೆಯ ಪರೀಕ್ಷೆ ನಡೆದಿತ್ತು. ಈ ವರ್ಷ ಸುಮಾರು 2.5 ಲಕ್ಷ ವಿದ್ಯಾರ್ಥಿಗಳು 10, 12ನೇ ತರಗತಿಯ CISCE ಪರೀಕ್ಷೆಗೆ ಹಾಜರಾಗಿದ್ದರು.

ಚುನಾವಣಾ ರಾಜಕೀಯ ನಿವೃತ್ತಿ ಘೋಷಿಸಿದ ರೇಣುಕಾಚಾರ್ಯ

ದಾವಣಗೆರೆ: ಬಿಜೆಪಿ ನಾಯಕ ಎಂಪಿ ರೇಣುಕಾಚಾರ್ಯ ಚುನಾವಣಾ ರಾಜಕೀಯ ನಿವೃತ್ತಿ ಘೋಷಿಸಿದ್ದಾರೆ. ಹೊನ್ನಾಳಿ ಕ್ಷೇತ್ರದಿಂದ ಸ್ಪರ್ಧಿಸಿ, ಕಾಂಗ್ರೆಸ್ ಅಭ್ಯರ್ಥಿ ಡಿ.ಜಿ.ಶಾಂತನಗೌಡ ಅವರ ವಿರುದ್ಧ ಸೋಲು ಕಂಡ ಹಿನ್ನೆಲೆಯಲ್ಲಿ ಅವರು ನಿರ್ಧಾರ ಕೈಗೊಂಡಿದ್ದಾರೆ.



ಮುಂದಿನ ದಿನಗಳಲ್ಲಿ ಚುನಾವಣೆಗೆ ನಿಲ್ಲುವುದಿಲ್ಲ. ಪಕ್ಷ ಯಾರಿಗೆ ಟಿಕೆಟ್ ನೀಡಿದರೂ ಅವರ ಪರ ಕೆಲಸ ಮಾಡುವುದಾಗಿ ಸ್ಪಷ್ಟಪಡಿಸಿದ್ದಾರೆ. 2018ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ರೇಣುಕಾಚಾರ್ಯ 80,624 ಮತಗಳನ್ನು ಪಡೆದಿದ್ದರೆ, ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಶಾಂತನಗೌಡ 76,391 ಮತಗಳನ್ನು ಪಡೆದಿದ್ದರು. ಈ ಮೂಲಕ ರೇಣುಕಾಚಾರ್ಯ ಕೇವಲ 4233 ಮತಗಳಿಂದ ಗೆದ್ದಿದ್ದರು.

ಬಳಿಕ ಸಿಎಂ ರಾಜಕೀಯ ಕಾರ್ಯದರ್ಶಿ ಆಗಿದ್ದರು. ಕೋವಿಡ್ ಸಂದರ್ಭದಲ್ಲಿ ರೇಣುಕಾಚಾರ್ಯ ಉತ್ತಮ ರೀತಿಯಲ್ಲಿ ಕೆಲಸ ಮಾಡಿದ್ದರು. ಹೀಗಾಗಿ ಈ ಬಾರಿಯೂ ಗೆಲ್ಲುವ ವಿಶ್ವಾಸದಲ್ಲಿದ್ದರು. ಆದರೆ, ಈ ಬಾರಿ ಸೋತಿರುವುದರಿಂದ ಚುನಾವಣಾ ರಾಜಕೀಯದಿಂದ ದೂರ ಸರಿಯುವುದಾಗಿ ಹೇಳಿದ್ದಾರೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ

ಖರ್ಗೆ ಹೆಗಲಿಗೆ ಸಿಎಂ ಆಯ್ಕೆ



ಭಾನುವಾರ ಬೆಂಗಳೂರಿನ ಶಾಂಗ್ರೀಲಾ ಹೋಟೆಲ್‌ನಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯಿತು.

ಬೆಂಗಳೂರು, ಮೇ 14–ವಿಧಾನಸಭಾ ಚುನಾವಣೆಯಲ್ಲಿ 135 ಸ್ಥಾನಗಳನ್ನು ಪಡೆದು ಅಧಿಕಾರದ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಸ್ಥಾನಕ್ಕಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಡುವೆ ಜಿದ್ದಾಜಿದ್ದಿ ಪೈಪೋಟಿ ಏರ್ಪಟ್ಟಿದೆ. ಈ ನಡುವೆ ದಲಿತ ಸಿಎಂ ಕೂಗೂ ಕೂಡ ಕೇಳಿ ಬಂದಿದೆ.

ಭಾನುವಾರ ಸಂಜೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆದು ಮುಖ್ಯಮಂತ್ರಿ ಆಯ್ಕೆ ಜವಾಬ್ದಾರಿಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ತೀರ್ಮಾನಕ್ಕೆ ಬಿಡಲಾಗಿದೆ ಎಂದು ವಾಕ್ಯದ ನಿರ್ಣಯ ಕೈಗೊಳ್ಳಲಾಗಿದೆ.

ಇದಕ್ಕೂ ಮುನ್ನ ಮುಖ್ಯಮಂತ್ರಿ ಆಯ್ಕೆಗಾಗಿ ನೂತನ ಶಾಸಕರ ಅಭಿಪ್ರಾಯ ಸಂಗ್ರಹಿಸಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕೇಂದ್ರದ ಮಾಜಿ ಗೃಹ ▶ 8ನೇ ಪುಟಕ್ಕೆ

ಮೇ 17ಕ್ಕೆ ನೂತನ ಸಿಎಂ ಪ್ರಮಾಣ ವಚನ?

ಬೆಂಗಳೂರು, ಮೇ 14–ಕಾಂಗ್ರೆಸ್ ಹೈಕಮಾಂಡ್ ನೂತನ ಮುಖ್ಯಮಂತ್ರಿ ಪ್ರಮಾಣ ವಚನಕ್ಕೆ ಮೇ 17ರಂದು ಮುಹೂರ್ತ ಫಿಕ್ಸ್ ಮಾಡಿದೆ ಎಂದು ಮೂಲಗಳು ತಿಳಿಸಿವೆ. ಸಿಎಂ ಆಯ್ಕೆ ವಿಚಾರಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ವೀಕ್ಷಕರು ನೂತನ ಶಾಸಕರ ಅಭಿಪ್ರಾಯ ಸಂಗ್ರಹಿಸಿ, ನಾಳೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ವರದಿ ಸಲ್ಲಿಸಲಿದ್ದು, ಇದನ್ನಾಧರಿಸಿ ಖರ್ಗೆ ಅವರು ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿಯೊಂದಿಗೆ ಚರ್ಚಿಸಿ ಇನ್ನೆರಡು ದಿನದಲ್ಲಿ ಸಿಎಂ ಯಾರೆಂಬುದನ್ನು ಘೋಷಿಸುತ್ತಾರೆ. ಮೇ 17ರ ಬುಧವಾರದಂದು ನೂತನ ಸಿಎಂ ಪ್ರಮಾಣ ವಚನ ಸ್ವೀಕರಿಸುವರು. ಈ ಕಾರ್ಯಕ್ರಮಕ್ಕೆ ಸೋನಿಯಾ ಗಾಂಧಿ ಕುಟುಂಬದವರು ಹಾಗೂ ಖರ್ಗೆ ಆಗಮಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಸಿಎಂ ಕುರ್ಚಿಗಾಗಿ ಸಿದ್ದರಾಮಯ್ಯ–ಡಿಕೆಶಿ ಪೈಪೋಟಿ

ಈ ನಡುವೆ ಕೇಳಿಬಂತು ದಲಿತ ಸಿಎಂ ಕೂಗು

ಬೆಂಗಳೂರು, ಮೇ 14–ಸಿಎಂ ಕುರ್ಚಿಗಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಶಕ್ತಿ ಪ್ರದರ್ಶನ ಆರಂಭವಾಗಿದೆ. ಸಿದ್ದರಾಮಯ್ಯ ಅವರು ಇಂದು ಬೆಂಗಳೂರಿನ ಕನ್ನಿಂಗ್‌ಹ್ಯಾಂ ರಸ್ತೆಯಲ್ಲಿರುವ ಶಾಸಕ ಭೈರತಿ ಸುರೇಶ್‌ಗೆ ಸೇರಿದ ಕಟ್ಟಡದಲ್ಲಿ ತಮ್ಮ ಬೆಂಬಲಿಗ ಶಾಸಕರ ಸಭೆ ನಡೆಸಿ ಮುಂದಿನ ಕಾರ್ಯತಂತ್ರದ ಬಗ್ಗೆ ಚರ್ಚಿಸಿದರು. ಅದೇ ವೇಳೆ ಡಿ.ಕೆ.ಶಿವಕುಮಾರ್ ತಮ್ಮ ಸದಾಶಿವನಗರ ನಿವಾಸದಲ್ಲಿ ಬೆಂಬಲಿಗ ಶಾಸಕರ ಸಭೆ ನಡೆಸಿ ತಾವು ಸಿಎಂ ಆಗಲು ಕಾರ್ಯತಂತ್ರ ರೂಪಿಸಿದರು. ಮತ್ತೊಂದೆಡೆ ದಲಿತ ಸಿಎಂ ಕೂಗು ಕೇಳಿಬಂದಿದ್ದು, ▶ 8ನೇ ಪುಟಕ್ಕೆ



ಹೋಟೆಲ್ ಮುಂಭಾಗ ಸಿದ್ದರಾಮಯ್ಯ ಬೆಂಬಲಿಗರ ಆಕ್ರೋಶ.

ಸಿಬಿಐ ನಿರ್ದೇಶಕರಾಗಿ ರಾಜ್ಯ ಡಿಜಿ–ಐಜಿಪಿ

ಪ್ರವೀಣ್ ಸೂದ್ ನೇಮಕ

ಬೆಂಗಳೂರು, ಮೇ 14– ರಾಜ್ಯದ ಪೊಲೀಸ್ ಮಹಾನಿರ್ದೇಶಕರಾದ (ಡಿಜಿ ಮತ್ತು ಐಜಿ) ಪ್ರವೀಣ್ ಸೂದ್ ಅವರನ್ನು ಕೇಂದ್ರೀಯ ತನಿಖಾ ದಳದ (ಸಿಬಿಐ) ನಿರ್ದೇಶಕರಾಗಿ ನೇಮಕ ಮಾಡಲಾಗಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ, ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ಲೋಕಸಭೆಯ ವಿರೋಧ ಪಕ್ಷದ (ಕಾಂಗ್ರೆಸ್) ನಾಯಕ ಅಧೀರ್ ರಂಜನ್ ಚೌಧರಿ ಅವರನ್ನೊಳಗೊಂಡ ತ್ರಿಸದಸ್ಯ ನೇಮಕಾತಿ ಸಮಿತಿಯು ಪ್ರವೀಣ್ ಸೂದ್ ಅವರ ಹೆಸರನ್ನು ಸಿಬಿಐ ನಿರ್ದೇಶಕ ಸ್ಥಾನಕ್ಕೆ ಅಂತಿಮಗೊಳಿಸಿತ್ತು. ಈ ಸಮಿತಿ ಶಿಫಾರಸ್ಸಿನ ಆಧಾರದ ಮೇರೆಗೆ ಇಂದು ಕ್ಯಾಬಿನೆಟ್ ನೇಮಕಾತಿ ಸಮಿತಿ (ಎಸಿಸಿ) ಪ್ರವೀಣ್ ಸೂದ್ ಅವರ ನೇಮಕವನ್ನು ಅನುಮೋದಿಸಿದೆ. ಸಿಬಿಐ ನಿರ್ದೇಶಕರ ಅಧಿಕಾರಾವಧಿಯನ್ನು ಎರಡು ವರ್ಷಗಳಿಗೆ ನಿಗದಿಪಡಿಸಲಾಗಿದೆ.



ಪ್ರವೀಣ್ ಸೂದ್, ಐಪಿಎಸ್.

ಸಿಬಿಐ ಹಾಲಿ ನಿರ್ದೇಶಕ ಸುಬೋಧ್ ಕುಮಾರ್ ಜೈಸ್ವಾಲ್ ಅವರ 2 ವರ್ಷದ ಅಧಿಕಾರಾವಧಿ ಮೇ 25ರಂದು ಕೊನೆಗೊಳ್ಳಲಿದ್ದು, ಅವರ ಸ್ಥಳಕ್ಕೆ ಪ್ರವೀಣ್ ಸೂದ್ ಅವರನ್ನು ನೇಮಕ ಮಾಡಲಾಗಿದೆ.

1986ರ ಐಪಿಎಸ್ ಬ್ಯಾಚ್‌ನ ಪ್ರವೀಣ್ ಸೂದ್ ಮೂಲತಃ ಹಿಮಾಚಲ ಪ್ರದೇಶದವರಾಗಿದ್ದು, ಐಪಿಎಸ್‌ನಲ್ಲಿ ಕರ್ನಾಟಕ ಕ್ಯಾಡರ್ ಆಯ್ಕೆ ▶ 8ನೇ ಪುಟಕ್ಕೆ

ಸಿದ್ದರಾಮಯ್ಯ ನನಗೆ ಸಹಕಾರ ಕೊಡುವ ವಿಶ್ವಾಸವಿದೆ

ತುಮಕೂರು: ಪಕ್ಷದ ವಿಚಾರದಲ್ಲಿ ನಾನು ಸೋತು ಸಿದ್ದರಾಮಯ್ಯರಿಗೆ ಸಹಕಾರ ಕೊಟ್ಟಿದ್ದೇನೆ. ಅವರೂ ನನಗೆ ಸಹಕಾರ ಕೊಡುವ ವಿಶ್ವಾಸ ಇದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ತಿಳಿಸಿದರು.



ಅಜ್ಜಯ್ಯನ ದರ್ಶನದ ಬಳಿಕ ಮಾತನಾಡಿದ ಅವರು, ಕೆಲವರು ನನ್ನ ಹಾಗೂ ಸಿದ್ದರಾಮಯ್ಯರ ನಡುವೆ ಭಿನ್ನಾಭಿಪ್ರಾಯ ಇದೆ ಎಂದು ಹೇಳುತ್ತಾರೆ. ಆದರೆ ನಮ್ಮಿಬ್ಬರ ನಡುವೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಹಲವು ಬಾರಿ ಪಕ್ಷದ ವಿಚಾರದಲ್ಲಿ ನಾನು ಸೋತಿದ್ದೇನೆ. ಆರಂಭದಲ್ಲಿ ನನ್ನನ್ನು ಮಂತ್ರಿ ಮಾಡದೇ ಇದ್ದಾಗ ನಾನು ತಾಳ್ಮೆಯಿಂದ ಇರಲಿಲ್ವಾ, ಸಿದ್ದರಾಮಯ್ಯರಿಗೆ ನಾನು ಸಹಕಾರ ಕೊಟ್ಟಿದ್ದೇನೆ ಎನ್ನುವ ಮೂಲಕ ಪರೋಕ್ಷವಾಗಿ ಸಿದ್ದರಾಮಯ್ಯ ತಮಗೆ ಸಿಎಂ ಆಗಲು ಅವಕಾಶ ಕಲ್ಪಿಸಿಕೊಡುವಂತೆ ಹೇಳಿದರು. ನಾನು ಪಕ್ಷಕ್ಕೆ ಜವಾಬ್ದಾರಿಯುತವಾಗಿ ನಡೆದುಕೊಂಡಿದ್ದೇನೆ. ದಿನೇಶ್ ಗುಂಡೂರಾವ್ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟಾಗ, ಸೋನಿಯಾ ಗಾಂಧಿ ಅವರು ನನ್ನ ಹೆಗಲಿಗೆ ಜವಾಬ್ದಾರಿ ಹೊರೆಸಿದರು. ನಾನು ಜೈಲಿಂದ ಹೊರಬರುತ್ತಲೇ ಅಧಿಕಾರ ವಹಿಸಿಕೊಂಡೆ. ಹಗಲು ರಾತ್ರಿ ದುಡಿದಿದ್ದೇನೆ. ಅಜ್ಜಯ್ಯನ ಆಶೀರ್ವಾದದಿಂದ ಇನ್ನೂ ಎತ್ತರಕ್ಕೆ ಏರುತ್ತೇನೆ ಎಂಬ ನಂಬಿಕೆ ಇದೆ. ನೋಡೋಣ, ಅಗ್ತೀನಿ ಅನ್ನೋ ನಂಬಿಕೆ ನನಗಿದೆ ಎಂದರು.

ಪಕ್ಷೇತರ ಶಾಸಕಿ ಲತಾ ಕಾಂಗ್ರೆಸ್‌ಗೆ ಬೆಂಬಲ



ಬೆಂಗಳೂರು, ಮೇ 14– ಹರಪನಹಳ್ಳಿ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಗೆಲುವು ಸಾಧಿಸಿರುವ ಲತಾ ಮಲ್ಲಿಕಾರ್ಜುನ್ ಅವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬೇಷರತ್ ಬೆಂಬಲ ನೀಡಿದ್ದಾರೆ ಎಂದು ಎಐಸಿಸಿ ಕರ್ನಾಟಕ ಉಸ್ತುವಾರಿ ರಂದೀಪ್ ಸಿಂಗ್ ಸುರ್ಜೇವಾಲಾ ಹೇಳಿದ್ದಾರೆ.

ಲತಾ ಮಲ್ಲಿಕಾರ್ಜುನ್ ಅವರು ಹಿರಿಯ ನಾಯಕ ಮತ್ತು ಮಾಜಿ ಡಿಸಿಎಂ ದಿವಂಗತ ಎಂಪಿ ಪ್ರಕಾಶ್ ಅವರ ಪುತ್ರಿ. ಅವರು ತಮ್ಮ ಸೈದ್ಧಾಂತಿಕ ಬೇರುಗಳು ಮತ್ತು ಕಾಂಗ್ರೆಸ್ ಆದರ್ಶಗಳನ್ನು ಪರಿಗಣಿಸಿ ಕಾಂಗ್ರೆಸ್‌ಗೆ ಬೇಷರತ್ ಬೆಂಬಲ ನೀಡಿದ್ದಾರೆ. ನಾನು ಅವರಿಗೆ, ಅವರ ಪತಿ ಮಲ್ಲಿಕಾರ್ಜುನ್ ಮತ್ತು ಎಲ್ಲಾ ಬೆಂಬಲಿಗರು ಮತ್ತು ಹಿತೈಷಿಗಳಿಗೆ ಧನ್ಯವಾದ ಹೇಳುತ್ತೇನೆ ಎಂದು ಸುರ್ಜೇವಾಲಾ ಟ್ವೀಟ್ ಮಾಡಿದ್ದಾರೆ.

ಕಾಂಗ್ರೆಸ್ ನಾಯಕರಿಗೆ ಪ್ರತಾಪ ಸಿಂಹ ಅಭಿನಂದನೆ




ಮೈಸೂರು, ಮೇ 14(ಎಸ್‌ಬಿಡಿ)–ವಿಧಾನಸಭೆ ಚುನಾವಣೆಯಲ್ಲಿ ಜಯಭೇರಿ ಭಾರಿಸಿರುವ ಕಾಂಗ್ರೆಸ್ ನಾಯಕರಿಗೆ ಸಂಸದ ಪ್ರತಾಪ್ ಸಿಂಹ ಅಭಿನಂದನೆ ತಿಳಿಸಿದ್ದಾರೆ. ಕಾಂಗ್ರೆಸ್ ಉತ್ತಮ ಪ್ರದರ್ಶನ ನೀಡಿದೆ. ಸಿದ್ದರಾಮಯ್ಯ ಸರ್, ಡಿ.ಕೆ.ಶಿವಕುಮಾರಣ್ಣ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅಭಿನಂದನೆಗಳು. ಜನಾಭಿಪ್ರಾಯಕ್ಕೆ ಶರಣು ಶರಣು ಎಂದು ಟ್ವೀಟ್ ಮಾಡಿದ್ದಾರೆ. ಜೊತೆಗೆ ನನ್ನ ಪ್ರೀತಿಯ ಬಿಜೆಪಿ ಕಾರ್ಯಕರ್ತರೇ, ಅಧೀರರಾಗಬೇಡಿ. ಮತದಾರರನ್ನು ದೂಷಿಸಬೇಡಿ. ಮತದಾರ ನಮಗಿಂತ ಬುದ್ಧಿವಂತ. ನಮ್ಮನ್ನು 2 ಸಲ ಅಧಿಕಾರಕ್ಕೆ ತಂದವರು ಅವರೇ. ಅವರಿಗೆ ಶರಣಾಗಿ ಮತ್ತೆ ವಿಶ್ವಾಸ ಗಳಿಸೋಣ ಎಂದು ಮತ್ತೊಂದು ಟ್ವೀಟ್ ಮೂಲಕ ಬಿಜೆಪಿ ಕಾರ್ಯಕರ್ತರಿಗೆ ಆತ್ಮವಿಶ್ವಾಸ ತುಂಬಿದ್ದಾರೆ.

ಡಿಕೆಶಿಗೆ ಸಿಎಂ ಸ್ಥಾನಕ್ಕಾಗಿ ಒಕ್ಕಲಿಗ ಮಠಾಧೀಶರ ಆಗ್ರಹ

ಬೆಂಗಳೂರು, ಮೇ 14–ಬೆಂಗಳೂರಿನ ವಿಜಯನಗರ ಆದಿಚುಂಚನಗಿರಿ ಮಠದಲ್ಲಿ ಒಕ್ಕಲಿಗ ಸ್ವಾಮೀಜಿಗಳು ಹಾಗೂ ಮುಖಂಡರ ಸಭೆ ನಡೆದಿದ್ದು, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಒತ್ತಾಯಿಸಿ ನಿರ್ಣಯ ತೆಗೆದುಕೊಳ್ಳಲಾಗಿದೆ. ಈ ಸಭೆಯಲ್ಲಿ ಹಾಜರಿದ್ದ ಮಾಗಡಿ ಕಾಂಗ್ರೆಸ್ ಶಾಸಕ ಬಾಲಕೃಷ್ಣ ಅವರಿಗೆ ಈ ಸಭೆಯ ನಿರ್ಣಯವನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ತಿಳಿಸುವಂತೆ ಸೂಚಿಸಲಾಯಿತು.

ಸಭೆಯಲ್ಲಿ ಮಾತನಾಡಿದ ಆದಿಚುಂಚನಗಿರಿ ಶ್ರೀಗಳಾದ ನಿರ್ಮಲಾನಂದನಾಥ ಸ್ವಾಮೀಜಿ, ಇದು ಬ್ಯಾನರ್ ಇಲ್ಲದ ಕಾರ್ಯಕ್ರಮ. ಇಲ್ಲಿನ ವಿಷಯ ಏನು ಎಂಬುದು ಅಷ್ಟೇ ಮುಖ್ಯ ಎಂದರಲ್ಲದೆ, ನಮ್ಮವರೇ ವ್ಯಕ್ತಿ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಪಕ್ಷವನ್ನು ಮೇಲೆ ಎತ್ತಿ ಅಧಿಕಾರ ಹಿಡಿಯುವಂತೆ ಮಾಡಿದ್ದಾರೆ. ಸಂಪ್ರದಾಯದಂತೆ ಮನೆಯ ಯಜಮಾನ ಯಾರಿರುತ್ತಾರೋ ಅವರೇ ರಾಜ್ಯವನ್ನು ಮುನ್ನಡೆಸುತ್ತಾರೆ. ಹಾಗೆ ಮುನ್ನಡೆಸಿಕೊಂಡು ಹೋಗಿ ಎಂಬುದು ನಮ್ಮ ಆಶಯ ಎಂದು ಹೇಳುವ ಮೂಲಕ ಕೆಪಿಸಿಸಿ ಅಧ್ಯಕ್ಷರಾದವರೇ ಮುಖ್ಯಮಂತ್ರಿ ಆಗಬೇಕು ಎಂಬುದನ್ನು ಪರೋಕ್ಷವಾಗಿ ಹೇಳಿದರು.

ಎಲ್ಲಾ ಮಾನದಂಡಗಳನ್ನು ಆಧರಿಸಿ ಮುಖ್ಯಮಂತ್ರಿಯಾಗಲು ಡಿ.ಕೆ.ಶಿವಕುಮಾರ್ ಅರ್ಹರಾಗಿದ್ದಾರೆ. ಸೋನಿಯಾಗಾಂಧಿ, ಸಿದ್ದರಾಮಯ್ಯ ಮತ್ತು ಖರ್ಗೆ ಅವರೂ ಕೂಡ ಡಿಕೆಶಿ ಅವರಿಗೆ ಸಿಎಂ ಸ್ಥಾನ ಕೊಡುತ್ತಾರೆ ಎಂದು ಭಾವಿಸಿದ್ದೇವೆ. ಶ್ರಮಪಟ್ಟವರಿಗೆ ಫಲ ಸಿಗಬೇಕು. ಪಕ್ಷದ ಅಧ್ಯಕ್ಷರಾದವರನ್ನು ಮುಖ್ಯಮಂತ್ರಿ ಮಾಡಬೇಕು. ಹಾಗೆ ಮಾಡುತ್ತಾರೆ ಎಂದು ಭಾವಿಸುತ್ತೇವೆ. ಸಹಜವಾಗಿ ಡಿಕೆಶಿ ಅವರಿಗೆ ಸ್ಥಾನ ಸಿಗಲಿ. ನಾಳೆ ಅವರ ಹುಟ್ಟುಹಬ್ಬವಿದ್ದು, ಅವರಿಗೆ ಹುಟ್ಟುಹಬ್ಬದ ಉಡುಗೊರೆಯಾಗಿ ಸಿಎಂ ಸ್ಥಾನ ಸಿಗಲಿ ಎಂದರು.



ಇದೇ ಸಮಯದಲ್ಲಿ ಮಾತನಾಡಿದ ಸ್ಫಟಿಕಪುರಿ ಮಹಾಸಂಸ್ಥಾನದ ಪೀಠಾಧ್ಯಕ್ಷ ಶ್ರೀ ನಂಜಾವಧೂತ ಸ್ವಾಮೀಜಿ, ನಾವು ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರಿಗೆ ಹೇಗೆ ಬೆಂಬಲವಾಗಿ ನಿಂತೆವೋ ಅದೇ ರೀತಿ ಡಿ.ಕೆ.ಶಿವಕುಮಾರ್ ಅವರಿಗೂ ಕೂಡ ಬೆಂಬಲವಾಗಿ ನಿಲ್ಲಬೇಕು ಎಂದರು. ಎಸ್.ಎಂ.ಕೃಷ್ಣ ಅವರ ನಂತರ ನಮ್ಮ ಸಮುದಾಯಕ್ಕೆ ದೊಡ್ಡ ಆಡಳಿತಾವಧಿ ಸಿಕ್ಕಿಲ್ಲ. ಹೆಚ್.ಡಿ.ಕುಮಾರಸ್ವಾಮಿ ಮತ್ತು ಡಿ.ವಿ. ಸದಾನಂದಗೌಡರಿಗೆ ಅಲ್ಪಾವಧಿ ಅವಕಾಶ ಮಾತ್ರ ಸಿಕ್ಕಿದೆ. ಕುಮಾರಸ್ವಾಮಿ ಎರಡು ಅವಕಾಶಗಳಲ್ಲಿ ಜನರ ಮೇಲೆ ತೆರಿಗೆ ಹೇರದೇ ರೈತರ ಸಾಲ ಮನ್ನಾ ಮಾಡಿದ್ದರು. ಕೆಂಗಲ್ ಹನುಮಂತಯ್ಯ ಏಕೀಕರಣಕ್ಕಾಗಿ ಹೋರಾಟ ನಡೆಸಿದ್ದರು. ಬೆಂಗಳೂರಿಗೆ ಕಾವೇರಿ ನೀರು ತಂದಿದ್ದು ಹೆಚ್.ಡಿ. ದೇವೇಗೌಡರು. ಬೆಂಗಳೂರಿನ ಅಭಿವೃದ್ಧಿಗೆ ಎಸ್.ಎಂ.ಕೃಷ್ಣ ಸಾಕಷ್ಟು ಕೊಡುಗೆ ನೀಡಿದ್ದಾರೆ. ಸದಾನಂದಗೌಡ ಸಕಾಲ ಮತ್ತು ಎತ್ತಿನಹೊಳೆ ಯೋಜನೆ ಕೊಟ್ಟಿದ್ದಾರೆ. ಇಂತಹ ಶ್ರೇಷ್ಠ ಸಮುದಾಯದಲ್ಲಿ ನಾವು ಹುಟ್ಟಿದ್ದೇವೆ. ಕುಮಾರಸ್ವಾಮಿ ಮುಖ್ಯಮಂತ್ರಿಯಾದಾಗ ಡಿಕೆಶಿ ಒಬ್ಬ ಕಾರ್ಯಕರ್ತನ ರೀತಿ ಕೆಲಸ ಮಾಡಿದ್ದಾರೆ. ಡಿ.ಕೆ.ಶಿವಕುಮಾರ್ ಅವರಿಗೆ ▶ 8ನೇ ಪುಟಕ್ಕೆ

ಅಡ್ವೋಕೇಟ್ ಜನರಲ್ ಪ್ರಭುಲಿಂಗ ನಾವದಗಿ ರಾಜೀನಾಮೆ

ಬೆಂಗಳೂರು, ಮೇ 14– ರಾಜ್ಯ ವಿಧಾನಸಭೆ ಚುನಾವಣೆ ಫಲಿತಾಂಶ ಪ್ರಕಟಗೊಂಡು ಕಾಂಗ್ರೆಸ್‌ಗೆ ಬಹುಮತ ಸಿಗುತ್ತಿದ್ದಂತೆ ಅಡ್ವೋಕೇಟ್ ಜನರಲ್ ಪ್ರಭುಲಿಂಗ ನಾವದಗಿ ರಾಜೀನಾಮೆ ನೀಡಿದ್ದಾರೆ.



ಇಂದು ರಾಜಭವನಕ್ಕೆ ತೆರಳಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ನಾವದಗಿ ರಾಜೀನಾಮೆ ನೀಡಿದರು. 2018ರ ಮೇ 18ರಂದು ನಾವದಗಿ ಅವರು ರಾಜ್ಯದ ಅಡ್ವೋಕೇಟ್ ಜನರಲ್ ಆಗಿ ನೇಮಕಗೊಂಡಿದ್ದರು.

2018ಕ್ಕೂ ಮುನ್ನ ಮಧುಸೂದನ್ ನಾಯಕ್ ಅವರು ಅಡ್ವೋಕೇಟ್ ಜನರಲ್ ಆಗಿದ್ದರು. ಅ ನಂತರ 2019ರಲ್ಲಿ ಜೆಡಿಎಸ್ ಕಾಂಗ್ರೆಸ್ ಸರ್ಕಾರದಲ್ಲಿ ಉದಯ್ ಹೊಳ್ಳ ಅವರು ಅಡ್ವೋಕೇಟ್ ಜನರಲ್ ಆಗಿದ್ದರು. ಈ ಸಮ್ಮಿಶ್ರ ಸರ್ಕಾರ ಪತನಗೊಂಡ ನಂತರ ಉದಯ್ ಹೊಳ್ಳ ರಾಜೀನಾಮೆ ನೀಡಿದ್ದರು.

ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು 135 ಸ್ಥಾನ ಗಳಿಸಿ ಭರ್ಜರಿ ಬಹುಮತ ಪಡೆದಿದೆ. ಬಿಜೆಪಿ 66 ಹಾಗೂ ಜೆಡಿಎಸ್ 19 ಸ್ಥಾನಗಳಿಗೆ ತೃಪ್ತಿಪಟ್ಟುಕೊಂಡಿವೆ. ಇತರರು ಮೂರು ಕಡೆ ಗೆಲುವು ಸಾಧಿಸಿದ್ದಾರೆ.

ಚಿನ್ನದಂತ ಕ್ಷೇತ್ರ ಬಿಟ್ಟು ಹೈಕಮಾಂಡ್ ಆದೇಶದಂತೆ ಹೋಗಿ ಸ್ಪರ್ಧಿಸಿ ಸೋತೆ

ಬೆಂಗಳೂರು, ಮೇ 14– ಈ ಬಾರಿಯ ವಿಧಾನಸಭೆ ಚುನಾವಣೆ ಮತದಾನದ ಫಲಿತಾಂಶದಲ್ಲಿ ವರುಣ ಮತ್ತು ಚಾಮರಾಜನಗರ ಎರಡೂ ಕ್ಷೇತ್ರಗಳಲ್ಲಿ ಸೋತಿರುವ ವಿ.ಸೋಮಣ್ಣ ಭಾನುವಾರ ತಮ್ಮ ನಿವಾಸದಲ್ಲಿ ಸುದ್ದಿಗಾರರ ಜೊತೆ ತಮ್ಮ ಮನದ ಭಾವನೆಗಳನ್ನು ಹಂಚಿಕೊಂಡರು.

'ಸೋತಾಗಿದೆ, ಏನು ಮಾತಾಡಲಿ?' ಮಾತಾಡೋದು ಅಗತ್ಯ ಇಲ್ಲ. ಸೋತಿದ್ದೇನೆ ಅಷ್ಟೇ. ಹೈಕಮಾಂಡ್ ಸೂಚನೆ ಮೇರೆಗೆ ಹೋಗಿ ಸ್ಪರ್ಧಿಸಿದ್ದೆ. ಇದನ್ನು ಚಾಲೆಂಜ್ ಆಗಿ ತೆಗೆದುಕೊಂಡೆ, ಪ್ರತಿಯೊಂದಕ್ಕೂ ಕಾಲ ಅಂತ ಇರುತ್ತದೆ. ನನ್ನ ಕ್ಷೇತ್ರ ಚಿನ್ನದಂತೆ ಇತ್ತು. ಹೈಕಮಾಂಡ್ ಹೇಳಿತೆಂದು ಹೋದೆ. ಇದೀಗ ಜನ ತೀರ್ಮಾನ ಮಾಡಿದ್ದಾರೆ. ಚೆನ್ನಾಗಿ ದುಡಿಯುತ್ತಿದ್ದ ನಾನು ಈಗ ನಿರುದ್ಯೋಗಿಯಾಗಿದ್ದೇನೆ. ಕ್ಷೇತ್ರಕ್ಕಿಂತ ಪಕ್ಷ ದೊಡ್ಡದು, ಪಕ್ಷದ ಮಾತು ಕೇಳಿದೆ ಅಷ್ಟೇ ಎಂದಿದ್ದಾರೆ.

ನಾನೀಗ ನಿರುದ್ಯೋಗಿ: ಮಾಜಿ ಸಚಿವ ಸೋಮಣ್ಣ

ಬಿಜೆಪಿ ಯಡಿಯೂರಪ್ಪನವರನ್ನು ಮೂಲೆಗುಂಪು ಮಾಡಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಯಡಿಯೂರಪ್ಪ ಅವರನ್ನು ಪಕ್ಷ ಮೂಲೆಗುಂಪು ಮಾಡಿಲ್ಲ. ಅವರ ನಾಯಕತ್ವದಲ್ಲಿ ಚುನಾವಣೆ ಮಾಡಿದ್ದೀವಲ್ಲ ಯಡಿಯೂರಪ್ಪ ಹೇಳಿದ್ದಾರಾ ಮೂಲೆಗುಂಪು ಮಾಡಿದ್ದಾರೆ ಅಂತ. ಸೋತ ತಕ್ಷಣ ಎಲ್ಲವೂ ಮುಗಿದು ಹೋಯ್ತಾ, ಪಕ್ಷಕ್ಕೆ ಹಿನ್ನಡೆ ಆಗಿದ್ದು ನಮಗೆಲ್ಲ ಎಚ್ಚರಿಕೆ ಗಂಟೆ, ಜನರ ತೀರ್ಮಾನ ಇದು, ಬದ್ಧರಾಗಬೇಕು. ದೇಶಕ್ಕೆ ಮೋದಿ ಪ್ರಶ್ನಾತೀತ ನಾಯಕರು, ಅವರ ಕೆಲಸಗಳು ಅವಿಸ್ಮರಣೀಯ. ಕಾಂಗ್ರೆಸ್‌ಟಿ ಗ್ಯಾರಂಟಿ ಯೋಜನೆಗಳೇ ಅವರ ಗೆಲುವಿಗೆ ಕಾರಣ ಎಂದಿದ್ದಾರೆ.




ಮಗನಿಗೆ ಸೀಟು ಕೇಳಿದ್ದೆ: ಎಲ್ಲರಂತೆ ನನಗೂ ಆಸೆಯಿದೆ, ಮಗನಿಗೆ ಟಿಕೆಟ್ ಕೊಡಿ ಎಂದು ಕೇಳಿದ್ದೆ. ಕೊಡಲಿಲ್ಲ, ಎಲ್ಲ ವಿಧಿನಿಯಮದಂತೆ ಆಗಿದೆ ಎಂದು ಬೇಸರದಿಂದ ಹೇಳಿಕೊಂಡರು.

ಡಿಕೆಶಿಗೆ ಪರೋಕ್ಷ ಒಲವು: ಇನ್ನು ಇದೇ ವೇಳೆ ಸಿಎಂ ಹುದ್ದೆಗಾಗಿ ಸಿದ್ದರಾಮಯ್ಯ, ಡಿಕೆಶಿ ನಡುವೆ ಪೈಪೋಟಿ ಕುರಿತು, ಅದು ಅವರ ಪಕ್ಷದ ನಿರ್ಧಾರ. ಡಿ.ಕೆ.ಶಿವಕುಮಾರ್ ನಮ್ಮ ತಾಲೂಕಿನವರು. ಸಿದ್ದರಾಮಯ್ಯ ಹಿರಿಯ ನಾಯಕರು, ಜೊತೆಗೆ ಈಗಾಗಲೇ ಒಮ್ಮೆ ಮುಖ್ಯಮಂತ್ರಿ ಆಗಿದ್ದಾರೆ. ಈಗ ಡಿಕೆ ಶಿವಕುಮಾರ್ ಮುಖ್ಯಮಂತ್ರಿ ಆಗಬೇಕಾಗಿರುವವರು. ಯಾರನ್ನು ಸಿಎಂ ಮಾಡಬೇಕೆಂದು ಅವರ ಪಕ್ಷ ನಿರ್ಧಾರ ಕೈಗೊಳ್ಳುತ್ತದೆ ಎನ್ನುವ ಮೂಲಕ ಪರೋಕ್ಷವಾಗಿ ಶಿವಕುಮಾರ್ ಸಿಎಂ ಆಗಬೇಕೆಂಬ ಒಲವು ತೋರಿಸಿದರು ಸೋಮಣ್ಣ.

ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್‌ಗೆ ಸಿಎಂ ಬೊಮ್ಮಾಯಿ ಶುಭಾಶಯ

ಬೆಂಗಳೂರು, ಮೇ 14–ಕಾಂಗ್ರೆಸ್‌ನ ಮುಖ್ಯಮಂತ್ರಿ ಆಕಾಂಕ್ಷಿಗಳಾದ ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಅವರಿಗೆ ಹಂಗಾಮಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶುಭಾಶಯ ತಿಳಿಸಿದ್ದಾರೆ.



ಬಿಜೆಪಿ ಕಚೇರಿಯಲ್ಲಿ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು. ಬಿಜೆಪಿ ಕಚೇರಿಯಲ್ಲಿ ಪ್ರಮುಖರು ಎಲ್ಲರು ಸೇರಿ, ಬಹಳ ದೀರ್ಘವಾಗಿ ಫಲಿತಾಂಶದ ಬಗ್ಗೆ ಚರ್ಚೆ ಮಾಡಿದ್ದೇವೆ. ಫಲಿತಾಂಶದ ಬಗ್ಗೆ ಬೇರೆ ಬೇರೆ ಕಡೆಯಿಂದ ಇನ್ನಷ್ಟು ಮಾಹಿತಿ ತರಿಸಿಕೊಂಡು ಚರ್ಚೆ ಮಾಡುತ್ತೇವೆ. ಒಟ್ಟಾರೆ ಫಲಿತಾಂಶದ ಬಗ್ಗೆ ಹಾಗೂ ವಿಧಾನಸಭೆ ಕ್ಷೇತ್ರವಾರು ಪರಾಮರ್ಶೆ ಮಾಡಬೇಕಿದೆ ಎಂದರು. ನಮ್ಮ ಬಿಜೆಪಿ ಅಧ್ಯಕ್ಷರು ಇನ್ನು 3–4 ದಿನಗಳೊಳಗೆ ಚುನಾಯಿತ ಪ್ರತಿನಿಧಿಗಳ ಸಭೆ ಕರೆಯುತ್ತಿದ್ದಾರೆ. ಮರುದಿನ ಎಲ್ಲಾ ಅಭ್ಯರ್ಥಿಗಳ ಸಭೆ ಕರೆದು ಚರ್ಚೆ ಮಾಡಲಿದ್ದು, ಅಲ್ಲಿ ಕೂಲಂಕಷವಾಗಿ ಚರ್ಚಿಸಿ, ಯಾವ ರೀತಿ ಒಗ್ಗಟ್ಟಾಗಿ ಪಕ್ಷ ಬಲವರ್ಧನೆ ಮಾಡಬೇಕೆಂದು ಚರ್ಚಿಸುತ್ತೇವೆ. ನಮಗೆ ಪಕ್ಷ ಸಂಘಟನೆಗೆ ವಿಶ್ರಮ ಇರುವುದಿಲ್ಲ. ಲೋಕಸಭೆ ಚುನಾವಣೆಗೆ ಒಟ್ಟಾಗಿ ಕೆಲಸ ಮಾಡುತ್ತೇವೆ ಎಂದರು. ಬಿಜೆಪಿಯ ಸೋಲು ಮೋದಿಯ ಸೋಲು ಎಂಬ ಕಾಂಗ್ರೆಸ್ ಆರೋಪ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿದ ಅವರು, ಕಾಂಗ್ರೆಸ್‌ನ ನಾಯಕತ್ವ ಇಡೀ ದೇಶದಲ್ಲಿ ಸೋತಿದೆ. ಮೋದಿಯವರು ರಾಷ್ಟ್ರೀಯ ನಾಯಕರು. ಇಲ್ಲಿ ಮೋದಿಯವರು ಪ್ರಚಾರಕ್ಕಷ್ಟೇ ಬಂದಿದ್ದರು. ಇದು ಅವರ ಸೋಲು ಅನ್ನುವುದು ಸರಿಯಲ್ಲ ಎಂದರು. ಕಾಂಗ್ರೆಸ್ ಚುನಾವಣೆ ಪ್ರಣಾಳಿಕೆಯ ಭರವಸೆಗಳ ಜಾರಿ ಮಾಡುವ ವಿಚಾರಕ್ಕೆ ಪ್ರತಿಕ್ರಿಯಿಸುತ್ತ, ಮೊದಲು ಕಾಂಗ್ರೆಸ್ ಸರ್ಕಾರ ಮಾಡಲಿ. ಆ ನಂತರ ಕ್ಯಾಬಿನೆಟ್ ಕರೆದು ಏನು ಮಾಡುತ್ತಾರೆ ನೋಡೋಣ ಎಂದರು.

ನಕ್ಕರೆ ಅದೇ ಸ್ವರ್ಗ

ಪೊಲೀಸ್: (ಸ್ಪೀಡ್ ಲಿಮಿಟ್ ಹಾಕಿದ್ದ ಬೋರ್ಡ್ ತೋರಿಸಿ) ಬೋರ್ಡ್ ನೋಡಿ ಮೇಡಂ 30ರ ಮೇಲೆ ಗಾಡಿ ಓಡಿಸಬಾರದು?

ಯುವತಿ : ಅಯ್ಯೋ ನನಗಿನ್ನೂ 22 ವರ್ಷ ಅಷ್ಟೇ...

ಮೈಸೂರು ಮಿತ್ರ

ಸೋಮವಾರ, 15 ಮೇ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಫಲಾಪೇಕ್ಷೆ ಬೇಡದೆ ಫಲವನ್ನು ನೀಡುವ ಮಹಾವೃಕ್ಷವೇ ಸದ್ಗುರು. ಕಲ್ಪವೃಕ್ಷ ಕಾಮಧೇನುವಿನಂತೆ ಸರ್ವರ ಒಳಿತಿಗಾಗಿ ಮಾಡುವ ತ್ಯಾಗವೇ ಮಹಾ ಯೋಗ ಸದ್ಭಕ್ತರಿಗೆ. – ರವೀಂದ್ರ ದೇಶಪಾಂಡೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ.

ನಿಮ್ಮ ಪತ್ರಗಳು

ಚುನಾವಣೆಯಲ್ಲಿ ಬಿಜೆಪಿ ಸೋಲಿಗೆ ಕಾರಣಗಳು!

ಮಾನ್ಯರೆ,

ಪ್ರಸಕ್ತ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮತದಾರರು ಅಧಿಕಾರ ನೀಡಿದ್ದಾರೆ. ಇಡೀ ದೇಶದಲ್ಲೇ ಅತ್ಯಂತ ಪ್ರಬುದ್ಧ ಮತದಾರರೆಂಬ ಹೆಗ್ಗಳಿಕೆಗೆಯು ಕರ್ನಾಟಕದ ಮತದಾರರಿಗಿದೆ, ಕಳೆದ ಕೆಲವು ವರ್ಷಗಳಿಂದ ಸಮ್ಮಿಶ್ರ ಮತ್ತು ಆಪರೇಶನ್ ಕಮಲದ ಸರ್ಕಾರಗಳ ಆಡಳಿತದ ವೈಖರಿಯಿಂದ ಬೇಸತ್ತಿದ್ದ ಜನರು ಈ ಬಾರಿ 'ಏಕ' ಪಕ್ಷಕ್ಕೆ ಅಧಿಕಾರ ನೀಡಬೇಕೆಂದು ನಿರ್ಧರಿಸಿದ್ದು ಪ್ರಮುಖ ಕಾರಣಗಳಲ್ಲೊಂದು, ಕೆಲವು ಕಾಂಗ್ರೆಸ್ ನಾಯಕರುಗಳಿಗೇ ಕಾಂಗ್ರೆಸ್‌ನ ಗೆಲುವು ಆಶ್ಚರ್ಯವನ್ನುಂಟು ಮಾಡಿರಬಹುದು. ಈ ಬಾರಿಯು 'ಅತಂತ್ರ' ಸರ್ಕಾರ ನಿರ್ಮಾಣವಾಗುವುದೇನೋ ಎಂಬ ಭಯದಿಂದ, ಆಪರೇಷನ್ ಕಮಲಕ್ಕೆ ಹೆದರಿ ಚುನಾವಣಾ ಫಲಿತಾಂಶದ ಹಿಂದಿನ ದಿನವೇ 'ರೆಸಾರ್ಟ್'ಗಳನ್ನು ಕಾಯ್ದಿರಿಸಲಾಗಿತ್ತು. ಅದಿರಲಿ ಈಗ ಬಿಜೆಪಿಗೆ ಹಿನ್ನಡೆಯಾಗಲು ಪ್ರಮುಖ ಕಾರಣಗಳು ಏನೆಂದು ನೋಡೋಣ.

ಯಡಿಯೂರಪ್ಪ ಅವರನ್ನು ಸಿ.ಎಂ, ಸ್ಥಾನದಿಂದ ಕೆಳಗಿಳಿಸಿದಾಗಲೇ 'ಬಿಜೆಪಿ' ದುರ್ಬಲವಾಗುತ್ತಾ ಬಂತು, ಬಸವರಾಜ ಬೊಮ್ಮಾಯಿಯವರ, ದುರ್ಬಲ ನಾಯಕತ್ವ, ಸರ್ಕಾರದಲ್ಲಿ ಮಿತಿ ಮೀರಿದ ಭ್ರಷ್ಟಾಚಾರ, ಮೀಸಲಾತಿ ವಿಷಯದಲ್ಲಿ ಗೊಂದಲ ಉಂಟು ಮಾಡಿ ಎಲ್ಲ ಸಮುದಾಯಕ್ಕೂ ಅನುಮಾನ ಸೃಷ್ಟಿ ಮಾಡಿದ್ದು. ಚುನಾವಣಾ ಪೂರ್ವ ತಯಾರಿಯೇ ಇಲ್ಲದೇ ಹೋದದ್ದು, ರೋಡ್ ಶೋ, ಸಾರ್ವಜನಿಕ ಸಭೆಗಳನ್ನಷ್ಟೇ ಮಾಡಿ, ತಳಮಟ್ಟದಲ್ಲಿ ಮತದಾರರನ್ನು ಸಂಪರ್ಕಿಸದೇ ಬಿಟ್ಟದ್ದು. ಎಲ್ಲಾ ಸಮುದಾಯಕ್ಕೂ ಟಿಕೆಟ್ ಹಂಚಿಕೆ ಮಾಡದೇ ಹೊದದ್ದು, ಪಕ್ಷದ ಭರವಸೆಗಳು, ಮತದಾರರನ್ನು ತಲುಪದೇ ಹೋದದ್ದು (ಚುನಾವಣೆಗೆ 3 ಹಿಂದೆಯಷ್ಟೆ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, ಕೆಲವು ನಾಯಕರಂತು, ನಮಗೆ 'ಮುಸ್ಲಿಂ' ಮತವೇ ಬೇಡ ಎಂದಿದ್ದು, ಅಧಿಕಾರಕ್ಕೆ ಬಂದರೂ, ಮುಖ್ಯಮಂತ್ರಿ ಯಾರಾಗುತ್ತಾರೆಂಬ ಅನುಮಾನ ಇದ್ದದ್ದು.

ಮೇಲಿನ ಎಲ್ಲಾ ಅಂಶಗಳಿಗೂ ಕಾಂಗ್ರೆಸ್ ವಿರುದ್ಧವಾಗಿ ನಡೆದುಕೊಂಡಿದ್ದರಿಂದ, ಈ ಅಭೂತಪೂರ್ವ ಯಶಸ್ಸು ಕಾಣಲು ಸಾಧ್ಯವಾಗಿದೆ. ಕಾಂಗ್ರೆಸ್ ಪಕ್ಷದ ಕೆಲವು ನಾಯಕರು ಚುನಾವಣೆಗೆ ಮುಂಚೆ ಕೆಲವು ಗೊಂದಲಗಳನ್ನು ಸೃಷ್ಟಿಸಿಕೊಳ್ಳದಿದ್ದರೆ, ಇನ್ನೂ 10 ರಿಂದ 15 ಸೀಟ್‌ಗಳನ್ನು ಹೆಚ್ಚಾಗಿ ಗಳಿಸಬಹುದಿತ್ತು.

–ಬೂಕನಕೆರೆ ವಿಜೇಂದ್ರ, ಮೈಸೂರು

ಕೃಪಾಂಕದಿಂದ ಹಳ್ಳ ಹಿಡಿಯುವ ಶಿಕ್ಷಣ

ಮಾನ್ಯರೇ,

ನಮ್ಮ ರಾಜ್ಯದ ಪ್ರೌಢಶಾಲಾ ಶಿಕ್ಷಣದ ಗುಣಮಟ್ಟ ಇತ್ತೀಚೆಗೆ ದಿನದಿಂದ ದಿನಕ್ಕೆ ಕುಸಿಯುತ್ತಿರುವುದು ಸರಿಯಷ್ಟೆ.(ಉನ್ನತ ಶಿಕ್ಷಣದ ಬಗ್ಗೆ ಮಾತಾಡುವಂತೆಯೇ ಇಲ್ಲ, ಅದು ಆ ಮಟ್ಟಕ್ಕೆ ಕೆಟ್ಟು ಬಹಳ ವರ್ಷಗಳಾದುವು!) ಇದೀಗ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಭಾಷಾ ವಿಷಯಗಳಿಗೆ ಶೇಕಡಾ ಹತ್ತರಷ್ಟು ಮತ್ತು ಐಚ್ಛಿಕ ವಿಷಯಗಳಿಗೆ ಶೇಕಡಾ ಎಂಟರಷ್ಟು ಗ್ರೇಸ್ ಅಂಕಗಳನ್ನು ನೀಡಲು ರಾಜ್ಯ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಿರ್ಧರಿಸಿದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಮೊದಲೇ ಹಳ್ಳ ಹಿಡಿದಿರುವ ನಮ್ಮ ಶಿಕ್ಷಣ ವ್ಯವಸ್ಥೆಯು ಇಂತಹ 'ಗ್ರೇಸ್' ಅಂಕಗಳಿಂದ ಮತ್ತಷ್ಟು ಹಾಳಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಶಿಕ್ಷಣದ ಗುಣಮಟ್ಟ ಹೆಚ್ಚಾಗಬೇಕಾದರೆ ಅದರ ಬಗ್ಗೆ ಮೊದಲು ವಿದ್ಯಾರ್ಥಿಗಳಲ್ಲಿ ಗಂಭೀರತೆ ಬರಬೇಕು. ಆ ಗಂಭೀರತೆ ಬಂದಾಗ ಅವರು ಶಿಕ್ಷಣದ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳುತ್ತಾರೆ.ಬಿಟ್ಟಿ ಅಂಕಗಳನ್ನು ನೀಡಿದರೆ ಶಿಕ್ಷಣದ ಬಗ್ಗೆ ವಿದ್ಯಾರ್ಥಿಗಳಿಗೆ ಗಂಭೀರತೆ ಬರುತ್ತದೆಯೇ?

ಶಿಕ್ಷಣದ ಅಭಿವೃದ್ಧಿಯ ವಿಚಾರದಲ್ಲಿ ಸರ್ಕಾರದ ಕರ್ತವ್ಯ ಮತ್ತು ಜವಾಬ್ದಾರಿಗಳು ಮೂಲಸೌಕರ್ಯಗಳನ್ನು ಒದಗಿಸುವುದಾಗಿರಬೇಕೇ ಹೊರತು, 'ವಿದ್ಯಾರ್ಥಿಗಳಿಗೆ ಅಂಕಗಳನ್ನು ಕೊಡಿಸುವುದಲ್ಲ!'. ಸರ್ಕಾರಗಳು ಈ ವಿಷಯದಲ್ಲಿ ಅನವಶ್ಯಕವಾಗಿ ಶಿಕ್ಷಕರ ಮೇಲೆ 'ಒಳ್ಳೆಯ ರಿಸಲ್ಟ್ ಕೊಡಿ' ಎಂದು ಒತ್ತಡ ಹೇರುವುದು, ಗ್ರೇಸ್ ಅಂಕಗಳನ್ನು ನೀಡುವುದು, ಮುಂತಾದ ಅಡ್ಡದಾರಿಗಳನ್ನು ಹಿಡಿಯುವುದು ಮೂರ್ಖತನವಲ್ಲದೆ ಮತ್ತೇನು ಅಲ್ಲ. ಅಂದ ಹಾಗೆ ಕೆಲವು ಶಿಕ್ಷಕರೂ ಕೂಡ ತಮ್ಮ ಭಾಷಾಜ್ಞಾನದ ಕೊರತೆಯಿಂದಲೋ ಅಥವಾ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕೆ ಹೋಗಬಹುದೆಂಬ ಭಯದಿಂದಲೋ ನೂರಿಪ್ಪತ್ತೈದಕ್ಕೆ ನೂರಿಪ್ಪತ್ತೈದು ಅಂಕಗಳನ್ನು ನೀಡಿ 'ಕೈತೊಳೆದುಕೊಂಡು' ನಿರಾಳವಾಗುವುದೂ ಉಂಟೆಂಬುದು ಬಹುತೇಕರಿಗೆ ತಿಳಿದಿರುವ ಬಹಿರಂಗ ಸತ್ಯ!!

ಇಷ್ಟೆಲ್ಲಾ ನ್ಯೂನತೆಗಳು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿದ್ದರೂ ಅವನ್ನು ಸರಿಪಡಿಸಲು ದಾರಿ ಹುಡುಕದೆ ಶಿಕ್ಷಣ ವ್ಯವಸ್ಥೆಯನ್ನು ಇನ್ನಷ್ಟು ಹಾಳುಮಾಡುವ ಇಂತಹ 'ಗ್ರೇಸ್' ಅಂಕಗಳನ್ನು ನೀಡಿ ಫಲಿತಾಂಶ ಹೆಚ್ಚಿಸುವ ಅನಿಷ್ಟ ಪದ್ಧತಿಗಳ ಅಗತ್ಯವಿದೆಯೇ?

– ರಾಜಶೇಖರಮೂರ್ತಿ, ಬೆಳಗನಹಳ್ಳಿ,
ಹೆಚ್.ಡಿ. ಕೋಟೆ ತಾಲೂಕು, ಮೈಸೂರು ಜಿಲ್ಲೆ.

ಜಮೀನಿನಲ್ಲಿ ವಾಸ ಮಾಡುವ ಜನರಿಗೆ ರಸ್ತೆ ಭಾಗ್ಯವೇ ಇಲ್ಲ...

ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ರಾವಂದೂರು ಹೋಬಳಿಯ ಅರೇನಹಳ್ಳಿ ಗ್ರಾಮದ ರಸ್ತೆ ಪಕ್ಕದಲ್ಲಿರುವ ತಮ್ಮ ಸ್ವಂತ ಜಮೀನಿನಲ್ಲಿ ಮನೆಕಟ್ಟಿಕೊಂಡು ವಾಸ ಮಾಡುತ್ತಿರುವ ಜನರ ಗೋಳು ಕೇಳುವವರು ಯಾರು?

ಇಲ್ಲಿ ವಾಸಿಸುವ ಜನರಿಗೆ ಓಡಾಡಲು ಜಾಗವೂ ಇಲ್ಲ, ರಸ್ತೆಯಂತೂ ಇಲ್ಲವೇ ಇಲ್ಲ. ಅವರ ಪಾಡು ಹೇಳತೀರದಾಗಿದೆ. ಈ ಬಗ್ಗೆ ಪತ್ರಿಕೆಗಳ ಮೂಲಕ ಗಮನ ಸೆಳೆಯಲಾಗಿತ್ತು. ಆದರೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಈವರೆಗೂ ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲದಿರುವುದು ವಿಷಾದದ ಸಂಗತಿಯಾಗಿದೆ.

ಮಳೆಗಾಲದ ದಿನಗಳಲ್ಲಿ ಇಲ್ಲಿ ಜನರಿಗೆ ಓಡಾಡಲು ರಸ್ತೆ ಇಲ್ಲ. ಕಾಲುದಾರಿಯ ಪಾಡು ಹೇಳತೀರದು. ಈ ಜನರಿಗೆ ರಸ್ತೆ ಬದಿಯಲ್ಲಿ ಜಾಗವಿಲ್ಲದೇ ತುಂಡು ಭೂಮಿಯಲ್ಲಿ ಮನೆ ಕಟ್ಟಿಕೊಂಡು ದುಸ್ತರವೆನಿಸುವ ಸ್ಥಿತಿಯಲ್ಲಿ ಬದುಕು ದೂಡುತ್ತಿದ್ದಾರೆ. ಇಲ್ಲಿ ಗಮನಿಸಬೇಕಾದ ಮುಖ್ಯ ವಿಷಯವೆಂದರೆ ಮೊದಲು ರಸ್ತೆ ನಿರ್ಮಾಣ ಮಾಡಿ ಆನಂತರ ವಿದ್ಯುತ್ ಜತೆಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾದುದು ಮೂಲಭೂತ ವಿಷಯ. ಆದರೆ ಇಲ್ಲಿ ರಸ್ತೆ ಇಲ್ಲ. ಮಿಕ್ಕವೆಲ್ಲಾ ಆಗಿದೆ. ಈ ಅವ್ಯವಸ್ಥೆ ಕುರಿತಾಗಿ ಗ್ರಾಪಂ ಸದಸ್ಯರ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸುವಂತೆ ಕೋರಲಾಗಿತ್ತು. ಅವರು ಇಲ್ಲಿಗೆ ವಿದ್ಯುತ್ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಿದರು. ಆದರೆ ರಸ್ತೆ ನಿರ್ಮಾಣದ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಅವರಿಗೂ ಹೇಳಿ ಹೇಳಿ ಸಾಕಾಯಿತು. ಈಗ ಹಾಲಿ ಚುನಾಯಿತ ಪ್ರತಿನಿಧಿಗಳನ್ನು ಕೇಳಿದರೆ ರಸ್ತೆ ಯೋಜನೆಯಲ್ಲಿ ರಸ್ತೆ ನಿರ್ಮಾಣ ಮಾಡಲಾಗುವುದು. ಒಂದಷ್ಟು ದಿನ ಕಾಯಿರಿ ಅಂತ ಹೇಳಿ ತಿಂಗಳುಗಳೇ ಕಳೆದುವು.

ದಯಮಾಡಿ ಮಾನ್ಯ ಹಾಲಿ ಶಾಸಕರು ಈ ಬಗ್ಗೆ ಮನಸು ಮಾಡಿದರೆ ಈ ಕೆಲಸ ಆಗಿಯೇ ತೀರುತ್ತದೆ ಎಂಬುದು ಅವರ ಕಾರ್ಯಸಾಧನೆ ನೋಡಿ ಅನಿಸಿದೆ. ಹಾಗಾಗಿ ಶಾಸಕರು, ತಾಲೂಕು ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ದೊಡ್ಡಬೇಲಾಳು ಮಂಡಲ ಪಂಚಾಯಿತಿ ಅಧ್ಯಕ್ಷರು, ದೊಡ್ಡ ಬೇಲಾಳು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಮುಂದಾಗಬೇಕು ಎಂಬುದು ಇಲ್ಲಿರುವ ಜನರ ಮನವಿ.


– ನೊಂದ ಗ್ರಾಮಸ್ಥರು, ಅರೇನಹಳ್ಳಿ,



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866-77284

ಬೆರಗು

ಮರೆಯುತ್ತಿವೆ ಹಕ್ಕುಗಳು; ಮರೆಯಾಗುತ್ತಿವೆ ಕರ್ತವ್ಯಗಳು!



"ಈ ಬಾರಿಯ ಚುನಾವಣೆಯಲ್ಲಿ ವಿದ್ಯಾವಂತ ಮತದಾರರ ಬೇಜವಾಬ್ದಾರಿತನ ಅನಾವರಣಗೊಂಡಿದೆ. ಸಾಮಾನ್ಯ ಹಳ್ಳಿಗಳಲ್ಲಿಯೂ ಶೇ.75-80 ಮತದಾನವಾಗಿದ್ದರೆ, ರಾಜಧಾನಿ ಬೆಂಗಳೂರಿನ ಪ್ರಜೆಗಳ ಮತದಾನ ಶೇ.50. ಇದನ್ನು ಬೇಜವಾಬ್ದಾರಿಯ ಪರಮಾವಧಿ ಎನ್ನದೇ ಇರಲು ಸಾಧ್ಯವೇ? ತಮ್ಮ ನೆಚ್ಚಿನ ಹೀರೋ ಚಿತ್ರ ನೋಡಲು ಗಂಟೆಗಟ್ಟಲೇ ಸರತಿ ಸಾಲಿನಲ್ಲಿ ನಿಲ್ಲುವ, ತಮ್ಮ ಬಾಯಿ ರುಚಿ ಚಪಲ ತೀರಿಸಿಕೊಳ್ಳಲು ಕಿಲೋ ಮೀಟರ್‌ಗಟ್ಟಲೆ ಪ್ರಯಾಣ ಮಾಡುವ, ಕಾಫಿ ಕುಡಿಯಲು ಮದ್ದೂರು ಪಟ್ಟಣಕ್ಕೆ ಬರುವ ಮಂದಿಗೆ ತಮ್ಮ ಮನೆ ಮುಂದಿನ ಮತಗಟ್ಟೆಗೆ ತೆರಳಿ ಮತ ಚಲಾಯಿಸುವಷ್ಟು ಕರ್ತವ್ಯಪ್ರಜ್ಞೆ ಇಲ್ಲದೇ ಇರುವುದು ವಿಪರ್ಯಾಸದ ಸಂಗತಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ ಮೂಢರಿಂದಲೇ ರಾಜಕಾರಣದಲ್ಲಿ ಅಧರ್ಮ, ಅನೀತಿ ತಾಂಡವವಾಡುತ್ತಿರುವುದು. ಇಂತಹ ಮತಿಗೇಡಿಗಳಿಗೆ ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಕಡಿತಗೊಳಿಸಬೇಕು. ಮತವನ್ನೇ ಚಲಾಯಿಸದೆ ಕರ್ತವ್ಯಪ್ರಜ್ಞೆ ಮರೆತವರು ನಾಳೆ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ದೊಡ್ಡ ಬಾಯಿ ತೆರೆಯುತ್ತಾರೆ. ಇದು ಪ್ರಜಾತಂತ್ರ ವ್ಯವಸ್ಥೆಯ ದುರಂತಗಳಲ್ಲಿ ಒಂದು.

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯು ಇಡೀ ವಿಶ್ವಕ್ಕೆ ಮಾದರಿಯಾದದ್ದು. ಹತ್ತಾರು ಧರ್ಮ, ನೂರಾರು ಜಾತಿ, ಸಾವಿರಾರು ಉಪ ಜಾತಿ, ಹತ್ತಾರು ಸಂಸ್ಕೃತಿ, ನೂರಾರು ಭಾಷೆಗಳಿದ್ದರೂ ವಿವಿಧತೆಯಲ್ಲಿ ಏಕತೆಯನ್ನು ಸಾರಲು ಸರ್ಕಾರಗಳು ಪ್ರಯತ್ನಿಸುತ್ತಿವೆ. ಇಂದು ಇಡೀ ವಿಶ್ವವೇ ಬೆರಗಾಗುವಂತೆ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದ ರಾಷ್ಟ್ರ ಎಂಬ ಖ್ಯಾತಿಯನ್ನು ಪಡೆದಿದೆ. ಅದರಲ್ಲೂ ಅತಿಹೆಚ್ಚು ಯುವಕರನ್ನು ಹೊಂದಿರುವ ರಾಷ್ಟ್ರ ಎಂಬ ಹೆಗ್ಗಳಿಕೆ ನಮ್ಮ ಭಾರತ ದೇಶದ್ದು. ದೇಶದ ವಿವಿಧ ರಾಜ್ಯಗಳಲ್ಲಿನ್ನು ವಿವಿಧ ರಾಜಕೀಯ ಪಕ್ಷಗಳು ಬಹುಮತ ಪಡೆದೋ, ಸಮ್ಮಿಶ್ರ ಸರ್ಕಾರದ ವ್ಯವಸ್ಥೆಯಲ್ಲೋ ಆಳ್ವಿಕೆಯನ್ನು ನಡೆಸುತ್ತಿವೆ. ಒಂದೊಂದು ಪಕ್ಷದ ಸಿದ್ಧಾಂತ ಒಂದೊಂದು ರೀತಿ ಇರುತ್ತದೆ. ಕರ್ನಾಟಕ ರಾಜ್ಯದಲ್ಲಿ ಮೊನ್ನೆ ತಾನೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅತಿಹೆಚ್ಚು ಸ್ಥಾನಗಳನ್ನು ಗಳಿಸುವ ಮುಖಾಂತರ ಅಧಿಕಾರದ ಗದ್ದುಗೆಗೆ ಏರಲು ಸಿದ್ಧವಾಗಿದೆ. ಆಡಳಿತ ಪಕ್ಷದ ದುರಾಡಳಿತಕ್ಕೆ ಬೇಸತ್ತೋ, ಬೆಲೆ ಏರಿಕೆಯ ಬಿಸಿಗೋ, ಜಾತಿ ಮತದ ಪ್ರೀತಿಗೋ, ಗ್ಯಾರಂಟಿ ಕಾರ್ಡಿನ ಮೇಲಿನ ನಿರೀಕ್ಷೆಯಿಂದಲೋ ಏನೋ ಜನ ಇಂದು ಒಂದು ಪಕ್ಷಕ್ಕೆ ಬಹುಮತ ನೀಡಿ ಸುಭದ್ರ ಸರ್ಕಾರ ರಚನೆಗೆ ನಾಂದಿ ಹಾಡಿದ್ದಾರೆ. ಜನರ ಈ ತೀರ್ಪು ಸಂವಿಧಾನದ ಸೌಂದರ್ಯ ಎಂದು ಬಣ್ಣಿಸಿ ಸ್ವಾಗತಿಸಬಹುದು. ಒಳ್ಳೆಯ ಸಚಿವ ಸಂಪುಟ ರಚನೆಗೊಂಡು ಸಾರ್ವಜನಿಕರ ಮೂಲಭೂತ ಅಗತ್ಯಗಳನ್ನು ಪೂರೈಸುವಂತಾಗಲಿ ಎಂದು ಹಾರೈಸೋಣ.

ಪ್ರಜೆಗಳಿಂದ ನಿರ್ಮಾಣವಾದ ಸರ್ಕಾರವು ಪ್ರಜೆಗಳ ಹಕ್ಕುಗಳನ್ನು ಕಾಪಾಡುವಲ್ಲಿ ಯಶಸ್ವಿಯಾಗುವ ಗ್ಯಾರಂಟಿಯನ್ನು ಕೊಡಬಹುದು. ಆದರೆ ಪ್ರಜೆಗಳು ತಮ್ಮ ಕರ್ತವ್ಯಗಳನ್ನು ಪಾಲಿಸುವಲ್ಲಿ ಗ್ಯಾರಂಟಿ ನೀಡಲು ಸಾಧ್ಯವೇ? 1950ರ ಜನವರಿ 26ರಂದು ಜಾರಿಗೆ ಬಂದ ಶ್ರೇಷ್ಠ ಸಂವಿಧಾನದ ವಿಧಿ 12–35ರಲ್ಲಿ ಮೂಲಭೂತ ಹಕ್ಕುಗಳನ್ನು ಉಲ್ಲೇಖಿಸಲಾಗಿದೆ. ಈ ಆರು ಹಕ್ಕುಗಳು ಪ್ರಜೆಗಳು ಪ್ರತಿಪಾದಿಸುವ ಮೂಲಕ ತಾವೇ ಪ್ರಭುಗಳು ಎಂದು ಹೆಮ್ಮೆಯಿಂದ ಬೀಗಬಹುದು. ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆ ವಿರುದ್ಧದ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕು, ಸಾಂವಿಧಾನಿಕ ಪರಿಹಾರದ ಹಕ್ಕು. ಹೀಗೆ ಈ ಆರು ಮೂಲಭೂತ ಹಕ್ಕುಗಳು ಪ್ರತಿಯೊಬ್ಬ ಪ್ರಜೆಯ ಷಷ್ಠ ಶಕ್ತಿಗಳು. ಈ ಹಕ್ಕುಗಳಿಂದಲೇ ಇಂದು ಉಳುವವನ ಮಗನೂ ಸಹ ಆಳುವ ಮಟ್ಟಕ್ಕೆ ಏರಲು ಅವಕಾಶವಾಗಿರುವುದು. ಈ ಹಕ್ಕುಗಳನ್ನು ಕಾಪಾಡುವ ಜವಾಬ್ದಾರಿ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳ ಜವಾಬ್ದಾರಿ ಹಾಗೂ ಕರ್ತವ್ಯವಾಗಿರುತ್ತದೆ. ಸಾರ್ವಜನಿಕರೇ ಆಗಲಿ, ಜನಪ್ರತಿನಿಧಿಗಳೇ ಆಗಲಿ, ಸರ್ಕಾರಿ ನೌಕರರೇ ಆಗಲಿ ಎಲ್ಲರೂ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಿ ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ. ಆದರೆ ಮೂಲಭೂತ ಕರ್ತವ್ಯಗಳನ್ನು ಅನುಸರಿಸುವಾಗ ಜಾಣ ನಡೆ ಅನುಸರಿಸುತ್ತಾರೆ.

ಹಾಗಾದರೆ ಮೂಲಭೂತ ಕರ್ತವ್ಯಗಳ ಕುರಿತು ಗಮನ ಹರಿಸೋಣ. 1976ರಲ್ಲಿ ಸಂವಿಧಾನಕ್ಕೆ 42ನೇ ತಿದ್ದುಪಡಿ ತರುವ ಮೂಲಕ ಸಂವಿಧಾನಕ್ಕೆ 4ಎ ಎಂಬ ಭಾಗ ಮತ್ತು 51ಎ ಎಂಬ ಪರಿಚ್ಛೇದದಡಿಯಲ್ಲಿ 10 ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಯಿತು. ಪ್ರಸ್ತುತ ಭಾರತದ ಸಂವಿಧಾನವು 11 ಮೂಲಭೂತ ಕರ್ತವ್ಯಗಳನ್ನು ಒಳಗೊಂಡಿದೆ. 1.ಸಂವಿಧಾನವನ್ನು ಪಾಲಿಸುವುದು. ಅದರ ಆಶಯಗಳನ್ನು ಗೌರವಿಸುವುದು. ರಾಷ್ಟ್ರಧ್ವಜ ಹಾಗೂ ರಾಷ್ಟ್ರಗೀತೆಯನ್ನು ಗೌರವಿಸುವುದು. 2.ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ಕೊಟ್ಟ ಆದರ್ಶಗಳನ್ನು ಗೌರವಿಸುವುದು ಮತ್ತು ಪಾಲಿಸುವುದು. 3.ಭಾರತದ ಸಾರ್ವಭೌಮತ್ವ, ಅಖಂಡತೆ ಮತ್ತು ಏಕತೆಯನ್ನು ಎತ್ತಿ ಹಿಡಿಯುವುದು ಮತ್ತು ಕಾಪಾಡುವುದು. 4.ದೇಶವನ್ನು ರಕ್ಷಿಸುವುದು ಮತ್ತು ದೇಶ ಸೇವೆಗೆ ಸಿದ್ಧರಿರುವುದು. 5. ವಿವಿಧ ಧರ್ಮ, ಭಾಷೆ ಮತ್ತು ಪ್ರಾಂತ್ಯಗಳ ಜನರೊಂದಿಗೆ ಸೌಹಾರ್ದದಿಂದ ಇರುವುದು ; ಮಹಿಳೆಯರಿಗೆ ಅಗೌರವ ತೋರುವ ಪದ್ಧತಿಗಳನ್ನು ತಿರಸ್ಕರಿಸುವುದು. 6.ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು. 7.ದೇಶದ ಕಾಡು, ವನ್ಯಜೀವಿಗಳು, ನದಿಗಳು ಸೇರಿದಂತೆ ಪರಿಸರವನ್ನು ಬೆಳೆಸುವುದು. 8.ವೈಜ್ಞಾನಿಕ ಮನೋಧರ್ಮವನ್ನು ಬೆಳೆಸಿಕೊಳ್ಳುವುದು ; ಪ್ರಶ್ನೆ ಮಾಡುವುದು ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಸ್ಥಿತಿ ಬೆಳೆಸಿಕೊಳ್ಳುವುದು. ಸಾರ್ವಜನಿಕ ಸ್ವತ್ತನ್ನು ಕಾಪಾಡಿಕೊಳ್ಳುವುದು; ಹಿಂಸೆಯನ್ನು ತೊರೆಯುವುದು. 10.ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು. 11. ಎಲ್ಲಾ ತಂದೆ–ತಾಯಿಯರು/ಪಾಲಕರು/ಪೋಷಕರು 6 ರಿಂದ 14 ವರ್ಷ ವಯಸ್ಸಿನ ಶಿಕ್ಷಣ ಪಡೆಯುವ ಅವಕಾಶ ನೀಡತಕ್ಕದ್ದು. ಈ ಮೂಲಭೂತ ಕರ್ತವ್ಯಗಳು ಎಷ್ಟು ಅರ್ಥಪೂರ್ಣ ಹಾಗೂ ನ್ಯಾಯಸಮ್ಮತವಾಗಿವೆ ಅಲ್ಲವೇ?

ಮೂಲಭೂತ ಹಕ್ಕುಗಳು ಉಲ್ಲಂಘನೆಯಾದರೆ ಅದು ನ್ಯಾಯರಕ್ಷಿತ ವಲಯಕ್ಕೆ ಬರುತ್ತವೆ. ಮೂಲಭೂತ ಕರ್ತವ್ಯಗಳು ನ್ಯಾಯರಕ್ಷಿತವಲ್ಲ, ಆದರೆ ಕರ್ತವ್ಯಗಳ ಉಲ್ಲಂಘನೆಯಾದರೆ ಅವರನ್ನು ಶಿಕ್ಷಿಸಬಹುದು. ಮೂಲಭೂತ ಹಕ್ಕುಗಳನ್ನು ಕೇಳುವಂತೆ ಕರ್ತವ್ಯಗಳನ್ನು ಪಾಲಿಸುವುದು ಪ್ರತಿಯೊಬ್ಬ ಪೌರನ ಕರ್ತವ್ಯವಾಗಿದೆ.

'ಯಥಾ ರಾಜ ತಥಾ ಪ್ರಜಾ' ಎನ್ನುವಂತೆ ನಮ್ಮ ದೇಶದಲ್ಲಿ ಇಂದಿನ ಚಿತ್ರಣವಿದೆ. ಇಂದು ಕರ್ತವ್ಯ ಪ್ರಜ್ಞೆಯನ್ನು ದುರ್ಬೀನು ಹಾಕಿ ಹುಡುಕಬೇಕಿದೆ. ನೌಕರರು ತಮ್ಮ ಸಂಸ್ಥೆ ಅಥವಾ ಸರ್ಕಾರದಿಂದ ಬರಬೇಕಾದ ಸವಲತ್ತು ಸೌಲಭ್ಯ ಸಂಬಳ, ಸಾರಿಗೆ ಹಕ್ಕನ್ನು ಬಿಡದೇ ಪಡೆಯಲು ಹರಸಾಹಸ ಮಾಡುತ್ತಾರೆ. ಆದರೆ ಕರ್ತವ್ಯ ಪಾಲನೆಯಲ್ಲಿ ಮಾತ್ರ ಮೈಮರೆತುಬಿಡುತ್ತಾರೆ. ಇಂದು 'ಸರ್ಕಾರಿ ಕೆಲಸ ಎಂದರೆ ದೇವರ ಕೆಲಸ' ಎಂಬುದು ನೆಪಮಾತ್ರದ ಘೋಷಣೆಯಾಗಿದೆ. ಭ್ರಷ್ಟ ವ್ಯವಸ್ಥೆಯು ಬೆವರು ಸುರಿಸಿ ದುಡಿಯುವ ರೈತರನ್ನೂ ಬಿಡದಂತೆ ಸುಲಿಗೆ ಮಾಡಲು ನಿಂತಿದೆ. ನೀತಿ ನಿಯಮಗಳನ್ನು ರೂಪಿಸುವ ಸರ್ಕಾರಗಳೇ ಅನೇಕ ಹಗರಣಗಳನ್ನು ಮಾಡಿ ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ಕೋಟಿ ರೂಪಾಯಿಗಳನ್ನು ನಷ್ಟ ಮಾಡುವ ಮೂಲಕ ಪ್ರತಿಯೊಬ್ಬ ಪ್ರಜೆಯ ಮೇಲೂ ಸಾಲದ ಹೊರೆಯನ್ನು ಹೊರಿಸುತ್ತಿವೆ.

ಈ ಬಾರಿಯ ಚುನಾವಣೆಯಲ್ಲಿ ವಿದ್ಯಾವಂತ ಮತದಾರರ ಬೇಜವಾಬ್ದಾರಿತನ ಅನಾವರಣಗೊಂಡಿದೆ. ಸಾಮಾನ್ಯ ಹಳ್ಳಿಗಳಲ್ಲಿಯೂ ಶೇ.75–80 ಮತದಾನವಾಗಿದ್ದರೆ, ಆದರೆ ರಾಜಧಾನಿ ಬೆಂಗಳೂರಿನ ಪ್ರಜೆಗಳ ಮತದಾನ ಶೇ.50. ಇದನ್ನು ಬೇಜವಾಬ್ದಾರಿಯ ಪರಮಾವಧಿ ಎನ್ನದೇ ಇರಲು ಸಾಧ್ಯವೇ? ತಮ್ಮ ನೆಚ್ಚಿನ ಹೀರೋ ಚಿತ್ರ ನೋಡಲು ಗಂಟೆಗಟ್ಟಲೇ ಸರತಿ ಸಾಲಿನಲ್ಲಿ ನಿಲ್ಲುವ, ತಮ್ಮ ಬಾಯಿರುಚಿಯ ಚಪಲ ತೀರಿಸಿಕೊಳ್ಳಲು ಕಿಲೋ ಮೀಟರ್‌ಗಟ್ಟಲೆ ಪ್ರಯಾಣ ಮಾಡುವ, ಕಾಫಿ ಕುಡಿಯಲು ಮದ್ದೂರು ಪಟ್ಟಣಕ್ಕೆ ಬರುವ ಮಂದಿಗೆ ತಮ್ಮ ಮನೆ ಮುಂದಿನ ಮತಗಟ್ಟೆಗೆ ತೆರಳಿ ಮತ ಚಲಾಯಿಸುವಷ್ಟು ಕರ್ತವ್ಯಪ್ರಜ್ಞೆ ಇಲ್ಲದೇ ಇರುವುದು ವಿಪರ್ಯಾಸದ ಸಂಗತಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ ಮೂಢರಿಂದಲೇ ರಾಜಕಾರಣದಲ್ಲಿ ಅಧರ್ಮ, ಅನೀತಿ ತಾಂಡವವಾಡುತ್ತಿರುವುದು. ಇಂತಹ ಹೊಣೆಗೇಡಿಗಳಿಗೆ ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಕಡಿತಗೊಳಿಸಬೇಕು. ಮತವನ್ನೇ ಚಲಾಯಿಸದೆ ಕರ್ತವ್ಯಪ್ರಜ್ಞೆ ಮರೆತವರು ನಾಳೆ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ದೊಡ್ಡ ಬಾಯಿ ತೆರೆಯುತ್ತಾರೆ. ಇದು ಪ್ರಜಾತಂತ್ರ ವ್ಯವಸ್ಥೆಯ ದುರಂತಗಳಲ್ಲಿ ಒಂದು.

ಇದು ಒಂದು ಉದಾಹರಣೆ ಮಾತ್ರ. ಇಂಥ ನೂರಾರು ಉದಾಹರಣೆಗಳನ್ನು ನೀಡಬಹುದಾಗಿದೆ. ಇನ್ನು ಸಾರ್ವಜನಿಕ ಆಸ್ತಿಪಾಸ್ತಿ ರಕ್ಷಣೆಯಲ್ಲಿ, ನೈಸರ್ಗಿಕ ಸಂಪತ್ತಿನ ರಕ್ಷಣೆಯಲ್ಲಿ ನಮ್ಮ ದೇಶದ ಪ್ರಜೆಗಳಷ್ಟು ಬೇಜವಾಬ್ದಾರಿ ಪ್ರದರ್ಶನ ಎಲ್ಲಿಯೂ ಇಲ್ಲ ಎನ್ನಬಹುದು. ಪ್ರತಿಭಟನೆಗಳು ನಡೆಯುವ ಸಂದರ್ಭದಲ್ಲಿ ಶಾಂತಿಯುತವಾಗಿ ನಡೆಯಬೇಕಾದ ಬದಲು ಬಸ್‌ಗೆ ಕಲ್ಲು ತೂರುವುದು, ಬೆಂಕಿ ಹಚ್ಚುವುದು, ಇಂತಹ ತಿಳಿಗೇಡಿ ಕೃತ್ಯಗಳಿಂದ ಸಾರ್ವಜನಿಕರಿಗೆ ಮತ್ತಷ್ಟು ಹೊರೆಯಾಗುತ್ತದೆ ಎಂಬ ಕನಿಷ್ಠ ಜ್ಞಾನವೂ ಇಲ್ಲದ ನಾಗರಿಕರು ಇಂದಿನ ಸಮಾಜದಲ್ಲಿ ಇರುವುದು ದುರದೃಷ್ಟಕರ. ಇನ್ನು ರಾಷ್ಟ್ರದ ಹಿತ ಕಾಪಾಡುವಲ್ಲಿ, ಸೌಹಾರ್ದತೆ ಕಾಪಾಡುವಲ್ಲಿ ವಿದ್ಯಾವಂತ ಸಮುದಾಯವೂ ಸಹ ಇಂದು ಎಡವುತ್ತಿದೆ. 'ಸರ್ವ ಜನಾಂಗದ ಶಾಂತಿಯ ತೋಟ' ಎಂದು ಕರೆಯಿಸಿಕೊಂಡಿದ್ದ ನಮ್ಮ ನಾಡು ಇಂದು ಹಿಂಸಾಚಾರ, ಧರ್ಮ ಪ್ರಚೋದಿತ ಕುಕೃತ್ಯಗಳಿಂದ ಅಶಾಂತಿಯ ತೋಟವಾಗಿ ಬದಲಾಗಿದೆ. ಕಾನೂನುಬಾಹಿರ ಕೃತ್ಯಗಳಲ್ಲಿ ಕಾನೂನು ತಿಳಿದವರೇ ಭಾಗಿಯಾಗುತ್ತಿರುವ ಬೆಳವಣಿಗೆ ಇನ್ನೂ ಅಪಾಯಕಾರಿಯಾಗಿದೆ.

ದೇಶದ ಅಖಂಡತೆಗೆ ಧಕ್ಕೆ ತರುವಂತಹ ಕೆಲಸಗಳು ಅಲ್ಲಲ್ಲಿ ಆಗಾಗ್ಗೆ ವರದಿಯಾಗುತ್ತಲೇ ಇರುತ್ತವೆ. ಸರ್ದಾರ್ ವಲ್ಲಭಬಾಯಿ ಪಟೇಲ್ ದೇಶದ ಐಕ್ಯತೆಗಾಗಿ ಪರಿಶ್ರಮಪಟ್ಟದ್ದು ಇಂದಿನ ನಾಗರಿಕರಿಗಾಗಲಿ, ಜನಪ್ರತಿನಿಧಿಗಳಿಗಾಗಲಿ ಅರಿವುಂಟೆ? ಪ್ರಧಾನಮಂತ್ರಿಗಳಾಗಿದ್ದ ಲಾಲ್ ಬಹದ್ದೂರ್ ಶಾಸ್ತ್ರೀಜಿ ಅವರ ಸರಳತೆ ಹಾಗೂ ಕರ್ತವ್ಯಪ್ರಜ್ಞೆ ಇಂದಿನ ರಾಜಕಾರಣಿಗಳಿಗೆ ಏನಾದರೂ ತಿಳಿದಿದಿಯೇ? ದೇಶಕ್ಕೆ ಸ್ವಾತಂತ್ರ್ಯ ತಂದುಕೊಡಲು ಸಾವಿರಾರು ಜನರು ತಮ್ಮ ಪ್ರಾಣದ ಹಂಗನ್ನು ತೊರೆದು ಹೋರಾಡಿದ್ದಾರೆ, ಅವರ ತ್ಯಾಗ ತಿಳಿದವರೆಷ್ಟು? ಇಂದು ಹಣ, ಅಧಿಕಾರದ ಆಸೆಗೆ ಜನರಿಗೆ ಮಂಕುಬೂದಿ ಎರಚಿ ಅಧಿಕಾರ ಗಿಟ್ಟಿಸುವ ರಾಜಕಾರಣಿಗಳ ನೈತಿಕ ಸ್ಥಿತಿ ಅಧೋಗತಿ ತಲುಪಿದೆ.

ಜನರು ಸಹ ವಿವೇಚನೆಯಿಂದ ನಡೆದುಕೊಳ್ಳಬೇಕಿದೆ. ಪ್ರತಿಯೊಬ್ಬರು ದೇಶದ ಹಿತದೃಷ್ಟಿಯಿಂದ ಅವಲೋಕಿಸಬೇಕಿದೆ. ಹಕ್ಕುಗಳನ್ನು ಚಲಾಯಿಸುವಂತೆ ಕರ್ತವ್ಯಗಳನ್ನು ನೆನಪಿಸಿಕೊಂಡು ಪಾಲಿಸಬೇಕಿದೆ. ಎಲ್ಲವನ್ನು ನನಗಾಗಿ ಎಂಬ ದೃಷ್ಟಿಯಿಂದ ನೋಡದೆ, ರಾಷ್ಟ್ರದ ಏಳಿಗೆ ದೃಷ್ಟಿಯಿಂದ ಕಂಡು ಸಹಕರಿಸಬೇಕಿದೆ. ಎಲ್ಲಿ ಅನ್ಯಾಯವಾಗುತ್ತದೆಯೋ ಅಲ್ಲಿ ಧ್ವನಿ ಎತ್ತಬೇಕಿದೆ. ಸಾರ್ವಜನಿಕ ಆಸ್ತಿಪಾಸ್ತಿಗೆ ನಷ್ಟವಾಗುವ ಸಂದರ್ಭದಲ್ಲಿ ತಿಳಿಗೇಡಿಗಳನ್ನು ತಡೆದು ಪ್ರಶ್ನಿಸಬೇಕಿದೆ. ಈ ದೇಶ ನಮ್ಮ ತಲೆಮಾರಿಗೆ ಅಂತ್ಯಗೊಳ್ಳುವುದಿಲ್ಲ. ನಮ್ಮ ಮಕ್ಕಳು ಹಾಗೂ ಮೊಮ್ಮಕ್ಕಳು ಸುಸ್ಥಿರವಾಗಿ, ಸುರಕ್ಷಿತವಾಗಿ ಜೀವನ ಕಟ್ಟಿಕೊಳ್ಳಬೇಕೆಂದರೆ ನಾವು ಇಂದು ಜಾಗೃತರಾಗಬೇಕು. ಮಕ್ಕಳಿಗೆ ಸಂವಿಧಾನದಲ್ಲಿ ಉಲ್ಲೇಖಿಸಿರುವ ಹಕ್ಕುಗಳು ಅಷ್ಟೇ ಅಲ್ಲ ಕರ್ತವ್ಯಗಳ ಕುರಿತು ಮನನ ಮಾಡಬೇಕು. ದೇಶಪ್ರೇಮ ಬೆಳಸಿಕೊಳ್ಳುವಂತಹ ಸಿನಿಮಾ, ನಾಟಕ ನೋಡುವ ಹವ್ಯಾಸ ಬೆಳೆಸಿಕೊಳ್ಳಬೇಕು, ಪುಸ್ತಕಗಳನ್ನು ಓದಲು ಪ್ರೇರೇಪಿಸಬೇಕು. ದೇಶಪ್ರೇಮದಿಂದಲೇ ಪೌರರು ಕರ್ತವ್ಯಗಳನ್ನು ಪಾಲಿಸುವ ಜಪಾನ್ ದೇಶ ಸಣ್ಣ ರಾಷ್ಟ್ರವಾದರೂ ಇಡೀ ವಿಶ್ವವೇ ತಿರುಗಿ ನೋಡುವಂತಾಗಿರುವುದು ನಮಗೆ ದೊಡ್ಡ ಪ್ರೇರಣೆ ಆಗಬೇಕು. ಆಗ ಮಾತ್ರ ದೇಶ ಸುಭಿಕ್ಷವಾಗುತ್ತದೆ. ಏನಂತೀರಿ?

ಪದ ತಾಂಬೂಲ :

ಹಕ್ಕುಗಳು ಸಿಹಿ ಎನಿಸಬಾರದು,
ಕರ್ತವ್ಯಗಳು ಕಹಿ ಎನಿಸಬಾರದು

ಮತದಾರರ ಪಟ್ಟಿಯಲ್ಲಿನ ಲೋಪವೇ ಕಡಿಮೆ ಮತದಾನಕ್ಕೆ ಕಾರಣ

ಮೈಸೂರು, ಮೇ 14(ಎಸ್‌ಪಿಎನ್)– 2023ರ ವಿಧಾನಸಭಾ ಚುನಾವಣೆಯಲ್ಲಿ ಮತದಾರರ ಪಟ್ಟಿಯಲ್ಲಿನ ಲೋಪದಿಂದ ಅನೇಕ ಮತದಾರರು ಮತಗಟ್ಟೆಗೆ ಬಂದರೂ ಮತದಾನ ಮಾಡಲು ಸಾಧ್ಯವಾಗಿಲ್ಲ. ಇದರ ಲೋಪದೋಷದ ಹೊಣೆಯನ್ನು ರಾಜ್ಯ ಮತ್ತು ಕೇಂದ್ರ ಚುನಾವಣಾ ಆಯೋಗ ಒಪ್ಪಿಕೊಳ್ಳಬೇಕು ಎಂಬ ಅಭಿಪ್ರಾಯ ಮೈಸೂರು ಗ್ರಾಹಕರ ಪರಿಷತ್ ಸಭೆಯಲ್ಲಿ ವ್ಯಕ್ತವಾಯಿತು.



ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯ ಮೈಗ್ರಾಪ ಕಚೇರಿಯಲ್ಲಿ ಭಾನುವಾರ ನಡೆದ ಸಾಮಾನ್ಯ ಸಭೆಯಲ್ಲಿ 'ಮೈಸೂರಿಗರು ಪ್ರಜಾಪ್ರಭುತ್ವದ ದೊಡ್ಡಹಬ್ಬದಲ್ಲಿ ಹೇಗೆ ಭಾಗವಹಿಸಿದ್ದಾರೆ?' ಎಂಬ ವಿಷಯ ಕುರಿತು ಮೈಗ್ರಾಪ ಸದಸ್ಯರು ತಮ್ಮ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರಪಂಚದಲ್ಲಿ ತಂತ್ರಜ್ಞಾನ ತ್ವರಿತಗತಿ ಯಲ್ಲಿ ಅಭಿವೃದ್ಧಿ ಹೊಂದುತ್ತಿದ್ದರೂ, ಇನ್ನು 1952ರಲ್ಲಿ ಮತದಾನ ಪ್ರಕ್ರಿಯೆ ಯಾವ ರೀತಿ ನಡೆಯುತ್ತಿತ್ತು. ಈ ಬಾರಿ ಚುನಾವಣೆಯಲ್ಲೂ ಅದೇ ರೀತಿ ಮತದಾನ ನಡೆದಿದೆ. ಮತದಾರ ತಮ್ಮ ಹಕ್ಕು ಚಲಾಯಿಸಲು ಒಂದು ಬೂತ್‌ನಿಂದ ಮತ್ತೊಂದು ಬೂತ್‌ಗೆ ಅಲೆದು ತಮ್ಮ ಹೆಸರು ಪತ್ತೆ ಮಾಡಲು ಗಂಟೆಗಟ್ಟಲೇ ಕ್ಯೂ ನಿಂತು ಹುಡುಕಾಡುವ ಪರಿಸ್ಥಿತಿ ಇದೆ. ಇದಕ್ಕಾಗಿ ಬೇರೆಯವರನ್ನು ಅನುಸರಿಸಬೇಕಾಗಿದೆ. ಈ ವ್ಯವಸ್ಥೆ ಸುಧಾರಣೆಗೊಳಿಸಲು ಇನ್ನೆಷ್ಟು ವರ್ಷ ಬೇಕು? ಎಂದು ಪ್ರಶ್ನಿಸಿದ ಸದಸ್ಯರು, ಇದರ ಬಗ್ಗೆ ಕೇಂದ್ರ ಮತ್ತು ರಾಜ್ಯ ಚುನಾವಣಾ ಆಯೋಗ ಮುಂದಾಗುತ್ತಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಇತ್ತೀಚಿನ ಚುನಾವಣೆಗಳಲ್ಲಿ ಮತದಾನ ಪ್ರಕ್ರಿಯೆ ಸುಧಾರಣೆಗೊಂಡಿಲ್ಲ. ಇದರ ಬಗ್ಗೆ ಜಿಲ್ಲಾ ಚುನಾವಣಾ ಅಧಿಕಾರಿಗಳು, ಮತದಾರರ ಹೆಸರುಗಳನ್ನು ಸುಲಭ ಸೇರ್ಪಡೆ, ಡಿಲೀಟ್ ಪ್ರಕ್ರಿಯೆ ಹಾಗೂ ವರ್ಗಾವಣೆ ಪ್ರಕ್ರಿಯೆಗೆ ಸರಳಗೊಳಿಸಿಲ್ಲ. ಓರ್ವ ವ್ಯಕ್ತಿ ಒಂದೊಂದು ಬಾರಿಗೆ ಮತದಾನ ನಡೆದಾಗಲೂ ಬೇರೆ ಬೇರೆ ಸ್ಥಳಗಳಲ್ಲಿನ ಬೂತ್‌ಗಳಲ್ಲಿ ಮತದಾನ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಇದನ್ನು ಗುರುತಿಸಲಾಗದವರು ಮತದಾನ ಪ್ರಕ್ರಿಯೆಯಿಂದ ದೂರ ಉಳಿಯುವುದರಿಂದ ಮತದಾನ ಶೇಕಡವಾರು ಕಡಿಮೆಯಾಗುತ್ತಿವೆ ಎಂದು ಬೇಸರ ಹೊರಹಾಕಿದರು.

ಮತದಾರರಿಗೆ ಸ್ಪರ್ಧಿಗಳು ಆಸೆ–ಆಮಿಷಗಳನ್ನು ಒಡ್ಡುವುದನ್ನು ತಡೆಯಲು ಚುನಾವಣಾ ಆಯೋಗ ಜಾಗೃತ ದಳ ರಚಿಸಿದ್ದರೂ ಆ ಅಧಿಕಾರಿಗಳು ಅಕ್ರಮ ತಡೆಗಟ್ಟುವಲ್ಲಿ ಸಂಪೂರ್ಣ ವಿಫಲವಾಗಿದೆ ಹಾಗಾಗಿ ಅಕ್ರಮ ಹಣ ವರ್ಗಾವಣೆ ತಪ್ಪಿಸಲು ಪಾನ್‌ಕಾರ್ಡ್‌ಗಳಿಗೆ ಆಧಾರ್ ಲಿಂಕ್, ಪಡಿತರ ವಿತರಣೆಯಲ್ಲಿ ಲೋಪ ತಪ್ಪಿಸಲು ರೇಷನ್‌ಕಾರ್ಡ್‌ಗಳಿಗೆ ಆಧಾರ್ ಲಿಂಕ್ ಮಾಡಿ, ಸುಧಾರಣೆ ತುಲಾಗಿದೆ ಈ ಸುಧಾರಣೆಯನ್ನು ಮತದಾರರ ಗುರುತಿನ ಚೀಟಿ ನೀಡುವ ವಿಧಾನದಲ್ಲಿ ತಂದಿಲ್ಲ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂಬ ಆರೋಪ ಕೇಳಿ ಬಂತು.

ಇತ್ತೀಚಿನ ದಿನಗಳಲ್ಲಿ ವಿವಿಧ ಪಕ್ಷದ ಅಭ್ಯರ್ಥಿಗಳು ಹಣದ ಹೊಳೆ ಹರಿಸಿ ಗೆಲುವು ಸಾಧಿಸಿದ್ದಾರೆ. ಮತದಾರರಿಗೆ ಆಮಿಷವೊಡ್ಡಲು ಸ್ತ್ರೀಶಕ್ತಿ ಸಂಘಗಳು, ಆಯಾಯ ಪಕ್ಷದ ನೂರಾರು ಕಾರ್ಯಕರ್ತರು ಇದಕ್ಕೆ ನೆರವು ನೀಡುತ್ತಿದ್ದು, ಇದನ್ನು ತಡೆಗಟ್ಟಲು ಚುನಾವಣಾ ಆಯೋಗ ಸಂಪೂರ್ಣ ವಿಫಲವಾಗಿದೆ ಯುವ ಸಮೂಹಕ್ಕೆ ಮತದಾರರ ಗುರುತಿನ ಚೀಟಿ ಮಾಡಿಸಿಕೊಳ್ಳಲು ಜಾಗೃತಿ ಮೂಡಿಸಲು ಜಿಲ್ಲಾಡಳಿತ ಸಂಪೂರ್ಣ ವಿಫಲವಾಗಿದೆ. ಹಾಗಾಗಿ ಮುಂಬರುವ ಸ್ಥಳೀಯ ಸಂಸ್ಥೆಗಳು ಹಾಗೂ ಲೋಕಸಭಾ ಚುನಾವಣೆ ವೇಳೆಗೆ ಯುವ ಮತದಾರರಿಗೆ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೊಳಿಸುವ ಪ್ರಕ್ರಿಯೆ ಸುಲಭಗೊಳಿಸುವಂತೆ ಜಿಲ್ಲಾ ಚುನಾವಣಾ ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಡುವ ಬಗ್ಗೆ ಅಭಿಪ್ರಾಯ ವ್ಯಕ್ತವಾಯಿತು. ಸಭೆಯಲ್ಲಿ ಮೈಗ್ರಾಪ ಸಂಸ್ಥಾಪಕ ಸದಸ್ಯರಾದ ಬಾಮಿ ವಿ ಶೆಣೈ, ಅರುಣ್ ಕುಮಾರ್‌ಶೆಟ್ಟಿ, ರೇಣು ಅಗರ್ ವಾಲ್, ವಿಶ್ವನಾಥ್, ಡಿ.ಎನ್.ಅರುಣ್ ಕುಮಾರ್, ಎಸ್.ಶೈಲೇಸ್, ಅಜಿತ್, ಪ್ರಭಾ ನಂದೀಶ್, ಸಿ.ಆನಂದ, ಬಿ.ಆರ್. ಉಮಕಾಂತ್, ಶ್ರೀಶೈಲ ರಾಮಣ್ಣ ಪದ್ಮಾವತಿ ಎಸ್.ಭಟ್, ಕುಶಾಲ್, ಗೀತಾ ವೇಲುಮಣಿ ಉಪಸ್ಥಿತರಿದ್ದರು.

ಸಭೆಯಲ್ಲಿ ವ್ಯಕ್ತವಾದ ಸಲಹೆಗಳು

- ಮುಂಬರುವ ಲೋಕಸಭೆ, ಸ್ಥಳೀಯ ಸಂಸ್ಥೆ ಚುನಾವಣೆ ವೇಳೆಗೆ ಮತದಾರರ ಪಟ್ಟಿಯಲ್ಲಿನ ಲೋಪಗಳನ್ನು ಸರಿಪಡಿಸಬೇಕು.
- ಮತದಾರರ ಗುರುತಿನ ಚೀಟಿ ನೀಡುವ ಪ್ರಕ್ರಿಯೆಯಲ್ಲಿ ತಂತ್ರಜ್ಞಾನ ಬಳಕೆ ಮಾಡಿಕೊಳ್ಳುವ ಕುರಿತು ಚುನಾವಣಾ ಆಯೋಗ ಗಂಭೀರ ಚಿಂತನೆ ನಡೆಸಬೇಕು.
- ಪ್ರತಿ ಚುನಾವಣೆಯಲ್ಲೂ ಮತದಾರರನ್ನು ಓಲೈಸಿಕೊಳ್ಳಲು ಅಕ್ರಮ ಹಣ ವರ್ಗಾವಣೆ ಆಗುತ್ತಿದ್ದು ಇದಕ್ಕೆ ಕಡಿವಾಣ ಹಾಕಲು ಚುನಾವಣಾ ಆಯೋಗ ನೀತಿ–ನಿಯಮ ಬದಲಾಗಬೇಕು.
- ವಿದೇಶಗಳಲ್ಲಿ ಚುನಾವಣಾ ಪದ್ಧತಿಯಲ್ಲಿ ತಂತ್ರಜ್ಞಾನ ಅಳವಡಿಸಿಕೊಂಡು ಆಮೂಲಾಗ್ರ ಬದಲಾವಣೆಯಾಗುತ್ತಿದ್ದರೂ ನಮ್ಮ ದೇಶದಲ್ಲಿ ಚುನಾವಣೆ ಪದ್ಧತಿ ಹಾಗೂ ಮತದಾರರ ಗುರುತಿನ ಚೀಟಿ ವಿತರಣೆ, ನೋಂದಣೆ, ತಿದ್ದುಪಡಿ ಕುರಿತು ಸರಳೀಕರಣಗೊಳ್ಳಬೇಕು.
- ಮತದಾರರ ಪಟ್ಟಿಯಲ್ಲಿನ ಲೋಪದೋಷ ಕುರಿತು ಜಿಲ್ಲಾ ಚುನಾವಣಾಧಿಕಾರಿಗಳಿಗೆ ಮನವಿ ಸಲ್ಲಿಸಬೇಕು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ರಂಗಾಯಣ ನಿರ್ದೇಶಕರ ಸ್ಥಾನಕ್ಕೆ ಅಡ್ಡಂಡ ಕಾರ್ಯಪ್ಪ ರಾಜೀನಾಮೆ

ಅಧಿಕಾರ ವಹಿಸಿಕೊಂಡಾಗ ಆರ್ಥಿಕ ದುಸ್ಥಿತಿಯಲ್ಲಿದ್ದ ರಂಗಾಯಣದಲ್ಲಿ ಈಗ 4.16 ಕೋಟಿ ರೂ. ಇದೆ

ಮೈಸೂರು, ಮೇ 14(ಎಂಕೆ)–ವಿಧಾನ ಸಭಾ ಚುನಾವಣೆಯಲ್ಲಿ ಬಿಜೆಪಿ ಸೋಲು ಅನುಭವಿಸಿದ ಹಿನ್ನೆಲೆ ಮೈಸೂರು ರಂಗಾಯಣ ನಿರ್ದೇಶಕ ಸ್ಥಾನಕ್ಕೆ ಅಡ್ಡಂಡ ಸಿ ಕಾರ್ಯಪ್ಪ ಭಾನುವಾರ ರಾಜೀನಾಮೆ ನೀಡಿದ್ದಾರೆ.



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿಗೆ ರಾಜೀನಾಮೆ ಪತ್ರ ಸಲ್ಲಿಸಿರುವ ಅವರು, ಸರ್ಕಾರ 2019ರ ಡಿ.27ರಂದು ನನ್ನನ್ನು ಮೈಸೂರಿನ ರಂಗಾಯಣ ನಿರ್ದೇಶಕನನ್ನಾಗಿ ನೇಮಿಸಿತ್ತು. ಅದರಂತೆ 2019ರ ಡಿ.30ರಂದು ಅಧಿಕಾರ ಸ್ವೀಕರಿಸಿ ಅಂದಿನಿಂದ ಇಂದಿನವರೆಗೆ ಕಾಯಾ, ವಾಚಾ, ಮನಸಾ ನನ್ನ ಕರ್ತವ್ಯವನ್ನು ಅತ್ಯಂತ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ನಿರ್ವಹಿಸಿದ್ದೇನೆ.

ರಂಗಾಯಣದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿ, ನಿರಂತರ ಚಟುವಟಿಕೆಯಿಂದ ರಂಗಾಯಣದ ಕೀರ್ತಿಯನ್ನು ರಾಜ್ಯ–ದೇಶದೆಲ್ಲೆಡೆ ಪಸರಿಸುವಂತೆ ನಮ್ಮ ಕಲಾವಿದರ ಸಹಕಾರದೊಂದಿಗೆ ಮಾಡಿದ್ದೇನೆ. ರಂಗಾಯಣದಲ್ಲಿ ರಂಗಮಂದಿರಗಳೂ ಸೇರಿದಂತೆ ಇತರೆ ಅವಶ್ಯಕವಾಗಿ ಬೇಕಾದ ಕಾಮಗಾರಿಗಳನ್ನು ಲಕ್ಷಾಂತರ ರೂಪಾಯಿಗಳ ವೆಚ್ಚದಲ್ಲಿ ದಾನಿಗಳೂ, ಶಾಸಕರ ಅನುದಾನ ಮತ್ತು ಇತರೆ ಮೂಲಗಳ ಆರ್ಥಿಕ ನೆರವಿನಿಂದ ಮಾಡಿದ್ದೇನೆ. ರಂಗಾಯಣವನ್ನು ಸ್ವಚ್ಛವಾಗಿಟ್ಟು ಇಡೀ ಪರಿಸರ ಹಸಿರೀಕರಣವಾಗುವಂತೆ ನೋಡಿಕೊಂಡಿದ್ದೇನೆ.

ನಾನು ಅಧಿಕಾರ ವಹಿಸಿಕೊಂಡಾಗ ಆರ್ಥಿಕವಾಗಿ ಅಷ್ಟೇನು ಸುಸ್ಥಿತಿಯಲ್ಲಿ ಇರದ ರಂಗಾಯಣದಲ್ಲಿ ಇಂದು 2,09,15,773 ರೂ. ಠೇವಣಿಯಲ್ಲಿಡಲಾಗಿದೆ. ಅಲ್ಲದೇ ಇಂದು ಬ್ಯಾಂಕಿನ ಉಳಿತಾಯ ಖಾತೆಯಲ್ಲಿ 1,57,67,300 ರೂ. ಇರುವಂತೆ ನಾಟಕ ಪ್ರದರ್ಶನಗಳ ಆದಾಯ, ದಾನಿಗಳಿಂದ ಬಂದ ದಾನ ಹಾಗೂ ಇತರೆ ಉತ್ಸವ, ನಮ್ಮ ಚಟುವಟಿಕೆಗಳಿಂದ ಬಂದ ಆದಾಯ ಎಲ್ಲವನ್ನೂ ಸೇರಿಸಿ, ಮುಖ್ಯವಾಗಿ ಖರ್ಚು ಕಡಿಮೆ ಮಾಡಿ ಉಳಿತಾಯ ಆಗುವ ಹಾಗೆ ಮಾಡಿದ್ದೇನೆ.

ಸರ್ಕಾರ ಹಿರಿಯ ಕಲಾವಿದರು ಮತ್ತು ಸಿಬ್ಬಂದಿಗಳಿಗೆ ನಿವೃತ್ತಿ ನಂತರ ಕೊಡಲು (ಒಟ್ಟು 16 ಜನ) ಇಡುಗಂಟಾಗಿ ಇಟ್ಟ ಹಣ ಇದೀಗ 4,00,00,000 ರೂ.ಗಳಾಗಿದ್ದು, ಇದರ ಬಡ್ಡಿ ಹಣ ಕನಿಷ್ಠ 50 ಲಕ್ಷ ರೂ. ರಂಗಾಯಣಕ್ಕೆ ದಕ್ಕಲಿದೆ. ಹೀಗೆ ಒಟ್ಟು 4,16,83,073 ರೂ. ಹಣ ಖಾತೆಯಲ್ಲಿದೆ ಎನ್ನುವುದಕ್ಕೆ ನನಗೆ ಸಂತೋಷವಾಗುತ್ತಿದೆ. ಇದಕ್ಕಾಗಿ ಕಳೆದ 3–4 ತಿಂಗಳಿಂದ ಹಗಲಿರುಳೂ ದುಡಿದಿದ್ದೇನೆ. ರಂಗಾಯಣದ ಆರ್ಥಿಕ ಸ್ಥಿತಿಯನ್ನು ಸುಭದ್ರಗೊಳಿಸಿದ್ದೇನೆ.

ನನ್ನನ್ನು ನಿರ್ದೇಶಕನನ್ನಾಗಿ ನೇಮಿಸಿದ ಸರ್ಕಾರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರ ಕಳೆದುಕೊಂಡಿದೆ. ಇದು ಜನಾದೇಶ, ಇದನ್ನು ಗೌರವಿಸುತ್ತೇನೆ. ಈ ಕಾರಣದಿಂದ ನೈತಿಕ ಜವಾಬ್ದಾರಿಯಿಂದ ನನ್ನ ನಿರ್ದೇಶಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ. ನನ್ನೊಂದಿಗೆ ನನ್ನ ಈ ಅವಧಿಯಲ್ಲಿ ಸಹಕರಿಸಿದ ರಂಗಾಯಣದ ಎಲ್ಲ ಸಿಬ್ಬಂದಿಗೆ, ಕಲಾವಿದರಿಗೆ, ಅಧಿಕಾರ ವರ್ಗಕ್ಕೆ, ಪ್ರೇಕ್ಷಕರಿಗೆ, ನನ್ನ ಕಷ್ಟ ಕಾಲಗಳಲ್ಲಿ ನನ್ನೊಂದಿಗೆ ಕೈಜೋಡಿಸಿದ ಸಂಘ ಪರಿವಾರ ಹಾಗೂ ಮಾಧ್ಯಮದ ಸ್ನೇಹಿತರಿಗೆ ಹೃದಯಪೂರ್ವಕ ವಂದನೆ ಸಲ್ಲಿಸುತ್ತಿದ್ದೇನೆ ಎಂದು ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಹಲೋ ಮೈಸೂರಿಗರೆ
ನಮ್ಮಲ್ಲಿ ಎಲ್ಲಾ ರೀತಿಯ ಡೆಕೋರೇಷನ್‌ಗಳನ್ನು ಮಾಡಿಕೊಡಲಾಗುತ್ತದೆ. ಮದುವೆ, ನಾಮಕರಣ, ಹಳದಿ ಶಾಸ್ತ್ರ, ರಿಸೆಪ್ಷನ್, ಬರ್ತ್‌ಡೇ, ಡೆಕೋರೇಷನ್ ಮಾಡಲಾಗುತ್ತದೆ (ರಿಯಾಯಿತಿ ದರದಲ್ಲಿ) ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
9535655645

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ಶ್ರೀ ಗೌರಿಶಂಕರ ಟ್ರಾವೆಲ್ಸ್
28-5-23(1ದಿನ)- ಘಾಟಿಸುಬ್ರಮಣ್ಯ, ಕೋಟಿಲಿಂಗ, ಇಶಾಫೌಂಡೇಷನ್
28-6-23(4ದಿನ)- ಶಿರಡಿ, ತ್ರಯಂಬಕೇಶ್ವರ, ಭೀಮಶಂಕರ, ನಾಸಿಕ್, ಘೃಷ್ಣೇಶ್ವರ, ಎಲ್ಲೋರ ಇತ್ಯಾದಿ
11-8-23(7ದಿನ)- ಅಯೋಧ್ಯ, ಕಾಶಿ, ಪ್ರಯಾಗ್‌ರಾಜ್, ಬಾಬಾ ಬೈದ್ಯನಾಥ್, ಗಯಾ, ಬುದ್ಧಗಯಾ,ಇತರೆ ವಿಮಾನ/ಬಸ್/ರೂಂ/ಊಟ
9620002114

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಟೀಚರ್ಸ್ ಬೇಕಾಗಿದ್ದಾರೆ
ಶಾಶ್ವತ್ ವಿದ್ಯಾಮಂದಿರ (ಆಂಗ್ಲಮಾಧ್ಯಮ) ಸಿದ್ದರಾಮನಹುಂಡಿ
Nursery, English, Maths, EVS & PET Teachers, Spoken English, ವಾಹನ ಚಾಲಕರು ಬೇಕಾಗಿದ್ದಾರೆ
9740032559
9986791152

(30X40) SALE
@ "OLIVE ENCLAVE" Mys - B'Lore High Way 3km from Columbia Hospital. 28 Lakhs
9538839926

WANTED JOB !
PART TIME ! HOME BASSED
ಗ್ಯಾಸ್ ಸೇಫ್ ಬಗ್ಗೆ
ಮನೆಯಲ್ಲಿ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
Android ಫೋನ್ ಹೊಂದಿರಬೇಕು

EDUCATION	WORK TIME	SALARY
SSLC, PUC any Deegree	4 HOURS	7000/- to 10000/-

Office Staff (ದಟ್ಟಗಳ್ಳಿ ಮೈಸೂರು)
9986621226

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

WANTED
Wanted teaching staff for reputed institution (Experience Preferred) for all subjects. Transport facilities available. Drop your resume through WhatsApp
8971577685, 9980631121

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596



Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
Call: 98441 71968
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಯಾವುದೇ ಶುಲ್ಕ ಇರುವುದಿಲ್ಲ. ಸಂಬಳ 15,000 ರಿಂದ 20,000 ವರೆಗೆ. ಸಂಪರ್ಕಿಸಿ:
Mob: 63661 41518

Sri Lakshmi Venkateshwara Public School, Bilikere
Teachers Required
1) B.A., B.Ed. / MA, B.Ed. English Teachers : 2 Nos.
2) MA, B.Ed. Social Teachers : 2 Nos.
3) B.Sc. Computers / M.Sc. Computer Teachers : 2 Nos.
4) Physical Education BA, B.P.Ed. : 2 Nos.
5) Office Assistants (Tally): 2 Nos.
9742058051, 8277800345

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೊಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ ANM/GNM ಆದವರಿಗೆ ಕೆಲಸವಿದೆ. ಸೆಂಟ್ ಮೇರಿಸ್ ಆಸ್ಪತ್ರೆ ಸಿಲ್ಕ್ ಫ್ಯಾಕ್ಟರಿ ಸರ್ಕಲ್ NIE ಕಾಲೇಜ್ ಪಕ್ಕ ಮೈಸೂರು
9916908454

ಬೇಕಾಗಿದ್ದಾರೆ
ಕೆಲಸಕ್ಕೆ ಹುಡುಗರು/ ಹುಡುಗಿಯರು ಬೇಕಾಗಿದ್ದಾರೆ
ವಿಚಾರಿಸಿ:
ಚೇತನ ಬುಕ್ ಹೌಸ್
ಎನ್.ಎಸ್.ರಸ್ತೆ, ಮೈಸೂರು

ಸೈಟ್ಸ್ @ ಮೈಸೂರು
ಇಲವಾಲ ಬಸ್ ಸ್ಟ್ಯಾಂಡ್ ಹತ್ತಿರ
DTCP APPROVED
ಹೂಡಿಕೆಗೆ / ಮನೆ ಕಟ್ಟಲು ಸೂಕ್ತವಾದ ಸ್ಥಳ
ಮುಂಬರಲಿರುವ ಮೈಸೂರು ಕುಶಾಲ್ ನಗರ ರಾಷ್ಟ್ರೀಯ ಹೆದ್ದಾರಿಯ ಹತ್ತಿರ
GSS 89512-76688

ಸೈಟ್ಸ್ @ ಮೈಸೂರು
T-Narasipura Road
ವರುಣ ಲೇಕ್ ವ್ಯೂ
MUDA APPROVED
ಮುಂಬರಲಿರುವ ಜೆಎಸ್‌ಎಸ್ ಯೂನಿವರ್ಸಿಟಿ ಹತ್ತಿರ
GSS 89512-76688

ಹೊಸ ಚೀಟಿಗಳ ಪ್ರಾರಂಭ
ಸೀಬಿ ನರಸಿಂಹಸ್ವಾಮಿ ಚಿಟ್ಸ್ (ಕಂ) ಪ್ರೈಲಿ., ಮೈಸೂರು / ಹಾಸನ.

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/–	3000/–
2 ಲಕ್ಷ	25	8000/–	6000/–
5 ಲಕ್ಷ	25	20,000/–	15,000/–
10 ಲಕ್ಷ	50	20,000/–	15,000/–
10 ಲಕ್ಷ	100	10,000/–	7,500/–
25 ಲಕ್ಷ	100	25,000/–	18,750/–

7892303484 / 8749077453

ಉದ್ಯೋಗ ಅವಕಾಶ ಬೇಕಾಗಿದ್ದಾರೆ
ಸೀಬಿ ನರಸಿಂಹಸ್ವಾಮಿ ಚಿಟ್ಸ್ (ಕ) ಪ್ರೈಲಿ. 2001 ತುಮಕೂರು, ಬೆಂಗಳೂರು, ಮೈಸೂರು, ಹಾಸನ, ರಾಮನಗರ. ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ ಮೇಲ್ಪಟ್ಟು, ವಯಸ್ಸು: 25 ವರ್ಷದಿಂದ 65 ವರ್ಷದವರೆಗೆ. ಅವಕಾಶ: ನಿರುದ್ಯೋಗಿಗಳು, ನಿವೃತ್ತರು, ಪಿಗ್ಮಿ ಏಜೆಂಟರುಗಳು, ವ್ಯಾಪಾರಿಗಳು, ಗೃಹಿಣಿಯರು, ಇನ್ಸೂರೆನ್ಸ್ ಪ್ರತಿನಿಧಿಗಳು, ಚೀಟಿ ಮತ್ತು ಫೈನಾನ್ಸ್ ವ್ಯವಹಾರದಲ್ಲಿ ಅನುಭವವಿರುವವರು. ವೇತನ: 25,000 ರೂ. ಮತ್ತು ಇತರೆ ಭತ್ಯೆಗಳು. ಸಂದರ್ಶನ ದಿನಾಂಕ: 16-05-2023, ಸಮಯ: 1.30pm ಕ್ಕೆ ಸಂಪರ್ಕಿಸಿ:
7892303484 / 9483247455

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಅನಿಮಲ್ ಫೀಡ್ ಕಂಪೆನಿಗೆ 18 ರಿಂದ 45 ವರ್ಷದ ಒಳಗಿನ ಪುರುಷರು ಲೋಡಿಂಗ್, ಅನ್‌ಲೋಡಿಂಗ್, ಪ್ಯಾಕಿಂಗ್ ಮತ್ತು ಪೌಡರಿಂಗ್ ಕೆಲಸ ಮಾಡಲು ಬೇಕಾಗಿದ್ದಾರೆ. ವಿದ್ಯಾರ್ಹತೆ ಅವಶ್ಯಕತೆ ಇಲ್ಲ. ಸಂಬಳ: 8 ಗಂಟೆ ಕೆಲಸಕ್ಕೆ 17845. ಸಂಪರ್ಕಿಸಿ:
ಚಾಮುಂಡೇಶ್ವರಿ ಎಂಟರ್‌ಪ್ರೈಸಸ್
ಲೋಕೇಶ – 8722844236

ಆಫೀಸ್ ಕೆಲಸಕ್ಕೆ ಹುಡುಗಿ ಬೇಕಾಗಿದ್ದಾರೆ
ಮ್ಯಾಟ್ರಿಮೋನಿ ಆಫೀಸ್ ಕೆಲಸಕ್ಕೆ ಹುಡುಗಿ ಬೇಕಾಗಿದ್ದಾರೆ.
Mob: 7411223692

COMPUTER COURSES
Never before never after offer Basic Computer and Tally/DTP For Only 1234/- C and C++ for Only 3349/- Limited Seats Call Now
9035066233 / 755

HOUSE FOR SALE
30X40 Duplex at Srirampura 25x40 Ground at Ramakrishna Nagar
40x60 Site at Kuvempunagar, Dattagalli
9663136318

Ideal School, Yelwala
ENGLISH MEDIUM LKG to X
WANTED TEACHERS
B.A., B.Sc., B.Ed., M.A., M.Sc. (Maths, Science), B.Ed. School will start from 2024-25 Commerce PUC, ITI Ele, Computer.
Owner of School : Seema
Mob: 9740423410
9845353761, 9900593211

WANTED BRIDE
Boy: Pradyumna ; Gothra: Vasista, 36 years. Job: Private Firm and Social Worker. Rs. 40,000. UDA, Udapi - Kundapur, M.Brahmin.
Mob: 9341702733

WANTED
1) HOUSEKEEPING SUPERVISOR FOR HOSPITAL: 1 Post (Male). Position: Bannimantap, Mysuru.
2) School Incharge: 1 Post (Male). Position: T.Narasipura.
3) Security Guard and Housekeeper, male candidate. Position: Mysuru & Dattagalli.
Salary: Rs. 10,000/- above.
Contact: M/s. Karnataka Security Agency Near Bullet Showroom, Behind Mysore City Corporation, K.R. Mohalla, Mysore.
Ph: 0821-4247385

ಮೈಸೂರು ಮ್ಯಾರೇಜ್ ಬ್ಯೂರೋ
ಡಾಕ್ಟರ್ ಸುಂದರ, ಶ್ರೀಮಂತ, ಕೋಟ್ಯಾಧೀಶ್ವರ ವರನಿಗೆ ಸುಂದರ ವಿದ್ಯಾವಂತ ವಧು, ವಿಧವೆ, ವಿಚ್ಛೇದಿತರು ನೇರ ಸಂಪರ್ಕಿಸಿ. ಜಾತಿ ಅಭ್ಯಂತರ ಇಲ್ಲ.
ಡಾ. ಗುರೂಜಿ
9448229184, 7899625268

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
Mob: 7676844160

ಸೈಟು ಮಾರಾಟಕ್ಕಿದೆ
30x40 ಅಳತೆಯ DTCP "A" ಯುಳ್ಳ ಸೈಟು ಮಾರಾಟಕ್ಕಿದೆ 12 ಲಕ್ಷದ 25 ಸಾವಿರ. ನಿರ್ಮಾಣ ಲೇಔಟ್ ತಳೂರು ಸರ್ಕಲ್ ಹತ್ತಿರ ಮೈಸೂರು
9742198093

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಸಸ್ಯಾಹಾರಿ ಹೋಟೆಲ್‌ಗೆ ಅನುಭವವುಳ್ಳ ಕ್ಯಾಪ್ಟನ್ & ವೈಟರ್‌ಗಳು ಕ್ಲೀನರ್‌ಗಳು ಬೇಕಾಗಿದ್ದಾರೆ
9538556565
9743162417

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
Mob: 8749098879

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ.
9731891409

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್/ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ. ಸಂಬಳ+ಓಟಿ 15,200/- to 86,000/-
9740733021, 9535028750

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ. Salary: 13,000 - 21,000 + ESI, PF. ವಿದ್ಯಾರ್ಹತೆ: 10th, PUC, ITI. Diploma and Any Degree. ಇಂದೇ ಸಂಪರ್ಕಿಸಿ:
Mob: 9035734821

JOB'S @ MYSORE
10th, PUC, ಯಾದ Age (18-24) Earn (8500/- ರಿಂದ 16500/-) PM Only Freshers, No Fee, ತಮ್ಮ ವಿವರ ಗಳೊಂದಿಗೆ ನೇರ ಸಂಪರ್ಕಿಸಿ Meet Today, Join Tomorrow
ಕಾವ್ಯ: 9342827788
Walk-In time (11 AM to 3PM)

ಬೇಕಾಗಿದ್ದಾರೆ
ಅಂಗಡಿ ಮತ್ತು ಫ್ಯಾಕ್ಟರಿ ಲೇಬರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ ವಿಶ್ವೇಶ್ವರ ನಗರ ಮತ್ತು ಮಾನಂದವಾಡಿ ರಸ್ತೆ, ಮೈಸೂರು. ಸಂಬಳ: ರೂ.12,000/–
7829665715
9742491306

ಬೇಕಾಗಿದ್ದಾರೆ
Ladies P.G ಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಕಡ್ಡಾಯವಾಗಿ P.G ಯಲ್ಲಿಯೇ ಉಳಿದುಕೊಳ್ಳಬೇಕು. ಊಟ, ವಸತಿ, ಸಂಬಳ ದೊರೆಯುತ್ತದೆ (ಅಡುಗೆ ಹೆಲ್ಪರ್)
9972567537
9035004605

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್, ಹೌಸ್ ಕೀಪಿಂಗ್ ಕೆಲಸಕ್ಕೆ ಮಹಿಳೆಯರು ಮತ್ತು ಹುಡುಗರು, ವಾರ್ಡ್ ಬಾಯ್ಸ್ ಬೇಕಾಗಿದ್ದಾರೆ. ಹೋಟೆಲ್ ರೂಮ್ ಬಾಯ್ಸ್, Receptionist ಸರ್ವಿಸ್ ಹುಡುಗರು ಬೇಕಾಗಿದ್ದಾರೆ.
8884286321, 8884339446
9842142207
ಫೀಲ್ ಆಫೀಸರ್ ಬೇಕಾಗಿದ್ದಾರೆ
9482142207

ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಬೇಕಾಗಿದ್ದಾರೆ
ಆನಂದೂರ್, ಲಕ್ಷ್ಮೀಪುರ, ಪಾಲಳ್ಳಿ, ಕೂರ್ಗಳ್ಳಿ, ಬಂಬೂಬಜಾರ್, ಚಾಮುಂಡಿಪುರಂ ಹತ್ತಿರ, ಈ.ಎಸ್.ಐ ಹಾಗೂ ಪಿ.ಎಫ್ ಕೊಡಲಾಗುವುದು. ವಯಸ್ಸು–50 ರೊಳಗೆ ಆಸಕ್ತ ಇದ್ದವರು
8310098788
6361439167

WANTED
Accounts Executive
Experinced (2+Years)
Male Candidate
Any Degree
6364002113
Send your resume
srirangatradelinks@gmail.com

ತಕ್ಷಣ ಬೇಕಾಗಿದ್ದಾರೆ
1. ಸೆಕ್ಯೂರಿಟಿ ಗಾರ್ಡ್ಸ್
2) ಸೆಕ್ಯೂರಿಟಿ ಸೂಪರ್‌ವೈಸರ್ಸ್
3) ಸೆಕ್ಯೂರಿಟಿ ಫೀಲ್ಡ್ ಸೂಪರ್‌ವೈಸರ್
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9739199355
9844235981

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಸಸ್ಯಾಹಾರಿ ಹೋಟೆಲ್‌ಗೆ ಅನುಭವವುಳ್ಳ ಅಡುಗೆ ಭಟ್ಟರು ಸಹಾಯಕ ಅಡಿಗೆ ಭಟ್ಟರು, ರುಬ್ಬುವವರು, ಪೂರಿ ಹಾಗೂ ಇಡ್ಲಿ, ಕಾಫಿ ಮಾಡುವವರು ಕೂಡಲೇ ಬೇಕಾಗಿದ್ದಾರೆ.
9538144354
9538556565

WANTED
Script Editor
Vedio Editor
Desk Work
Anchor's
Reporters
7349221356
7019362184

WANTED TEACHERS
Residentail and Regular Teachers for CBSE School in Mysore City
7676522224
9449320140

ದೈವ ಕೃಪಾ
ಲಿಂಗಾಯಿತ, ಒಕ್ಕಲಿಗ, ಕುರುಬಾಸ್, ಆರ್ಯ ವೈಶ್ಯ, ವಿಶ್ವಕರ್ಮ, ನಯನ, ಕ್ಷತ್ರಿಯ, ದೇವಾಂಗ, ಕುಂಬಾರ ಮೊದಲಿಯಾರ್ ಗೌಂಡರ್, ವಿಶ್ವಕರ್ಮ, SC.ST ಕನ್ನೇರ್ ಈಡಿಗ, ಆಚಾರ್, ಬ್ರಾಹ್ಮಣ್, ವಧುವರರಿಗೆ ಹಾಗೂ 2ನೇ ಸಂಬಂಧಕ್ಕೆ ಕೂಡಲೇ ಸಂಪರ್ಕಿಸಿ No.Reg. Fee (Advance)
ಪುಟ್ಟಸ್ವಾಮಿ DIG, Rtd.
ಮೇಟಗಳ್ಳಿ, ಮೈಸೂರು–570016
9902802154

ಭಾರತದ ವಿಶ್ವಾಸಾರ್ಹ ಬ್ಯಾಂಕಿಂಗ್ ಸಮೂಹದಿಂದ ನಿವೃತ್ತರಿಗೆ ವಿಶೇಷ ಅವಕಾಶ
ಶ್ರೀ ಸೆಮಿನಾರ್ 16–05–2023 ಮಂಗಳವಾರ 11 ಗಂಟೆಗೆ ಮೌರ್ಯ ರೆಸಿಡೆನ್ಸಿ ಹೋಟೆಲ್, ಹರ್ಷರಸ್ತೆ,, ಮೈಸೂರು VRS ನಿವೃತ್ತರಿಗೆ (ರಾಜ್ಯ/ಕೇಂದ್ರ/ಬ್ಯಾಂಕಿಂಗ್/ಖಾಸಗಿ ವಲಯ) House Wives, ಬಿಸಿನೆಸ್ ಸೆಕ್ಟರ್ ಇವರಿಗೆ ಅವಕಾಶ ಸ್ಯಾಲರಿ PF, ESI ಇತ್ಯಾದಿ ಬೆನಿಫಿಟ್ Limited Seats
8277553627, 9342106163
8217253712, 7349052084

TEACHER WANTED
GAYATHRI VIDYALAYA
Hosa Undavadi K.R. Sagara, S.R.Patna Tq, Mandya Dist.
Ph: 8892927318, 6360302911, 8183054747
B.Ed- 03 D.Ed-03
BSc, B.Ed- 03
Montessori Teachers- 03
Female P.E Teacher- 01

ನಿವೃತ್ತ ನೌಕರರಿಗೆ ಉದ್ಯೋಗ ಅವಕಾಶದ ಸೆಮಿನಾರ್
ಕೇಂದ್ರ ರಾಜ್ಯ ಸಾರ್ವಜನಿಕ ಸಂಸ್ಥೆಯ ನಿವೃತ್ತ ನೌಕರರಿಗೆ / ನಿವೃತ್ತ ಬ್ಯಾಂಕ್ ನೌಕರರಿಗೆ /ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Fixed Salary+PF+ESI+Other Incentives with Flexible time. ವಿದ್ಯಾರ್ಹತೆ SSLC & Above any Degree 2) Age 35 Yrs to 65 Yrs. ಸೆಮಿನಾರ್ ನಡೆಯುವ ಸ್ಥಳ: ಹೋಟೆಲ್ ಮೌರ್ಯ ರೆಸಿಡೆನ್ಸಿ ಉಡ್‌ಲ್ಯಾಂಡ್ ಟಾಕೀಸ್ ಹತ್ತಿರ, ಮೈಸೂರು ದಿನಾಂಕ: 15–05–2023, ಸಮಯ ಬೆಳಗ್ಗೆ 11 ಗಂಟೆಗೆ ಲಘು ಉಪಹಾರ ವ್ಯವಸ್ಥೆ ಇದೆ.
9449068132, 7022034200

Jnanajyothi Vidyalaya (HPS)
Beerihundi, Mysuru (Tq.)
WANTED
NST / Montessori Teachers - 2
English Teacher - 2
Mathematics, Science - 2
Social Science - 1 B.P.Ed.
C.P.Ed Teacher - 1. Contact:
8884754393, 8197057626

HOME LOANS
CORPORATION, MUDA, KHB GRAMATHANA PROPERTY (9 & 11A, 11B Khata)
Site Purchase, Site Construction
House Purchase
Site Mortgage, house Mortgage
Contact: 9108416410

ಇಂದೇ ಸಂಪರ್ಕಿಸಿ
ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೊಸದಾಗಿ ತೆರೆದಿರುವ ಕಂಪನಿಯೊಂದಕ್ಕೆ 156 ವಿವಿಧ ಪೋಸ್ಟ್‌ಗಳಿಗೆ SSLC, PUC, ITI, Degree ಆಗಿರುವ ಉತ್ಸಾಯಿ ಯುವಕ/ಯುವತಿಯರು ಬೇಕಾಗಿದ್ದಾರೆ ಉಚಿತ ವಸತಿ ಊಟದೊಂದಿಗೆ 14000-30000 (ESI+PF+OT)
6364103418
6366141586

URGENT REQUIRED IN BANGALORE
1) Delivery Boys
2) Helpers / Sales / Marketing Executives 3) Painters
4) Cooking Master / Cheff
5) Security / House Keeping
9742697838
7022647727, 9141424439

ಬೇಕಾಗಿದ್ದಾರೆ
ವೃದ್ಧರನ್ನು ಮತ್ತು ರೋಗಿಗಳನ್ನು ಆರೈಕೆ ಮಾಡಲು ಅನುಭವವಿರುವ ಮಹಿಳೆಯರು ಯುವತಿಯರು ತಕ್ಷಣ ಬೇಕಾಗಿದ್ದಾರೆ.
ಸಂಬಳ: 16,000 ದಿಂದ ಪ್ರಾರಂಭ
8951190340

100% Job
ಮೈಸೂರಿನ ಪ್ರತಿಷ್ಠಿತ ಕಂಪನಿಗಳಿಗೆ ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ Any Qualification, (7th, 10th, PUC, ITI, Any Degree Pass /Fail) ಆದವರಿಗೆ ಅರ್ಹತೆಗೆ ತಕ್ಕಂತೆ ಕೆಲಸ ಸಂಬಳ 14,500 ರಿಂದ 39,000/- ESI+PF+OT ಸೇರಿ ಷರತ್ತು ಅನ್ವಯ
9036548905, 9035143190

WANTED
Female Tellecaller SSLC/PUC Qualified Experienced / Freshers with Attractive Incentives + Salary at Kuvempunagar
9686571802

SITE FOR SALE
23X40, Site,
Site No.:443, Sun Sity Homes, 1st Stage, Hunsur Road, Nagwala Mysore.
9845044290
8762506374

WANTED
Waiters (Male)
House Keeping (both Male and Female)
For Part time & Full Time
9148709148

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ ಸಂಬಳ: (10,000 ರಿಂದ 11,000) 12 ಗಂಟೆ ವಯಸ್ಸು: 25 ರಿಂದ 55 ವರ್ಷ ಸ್ಥಳ: ಸಿದ್ಧಾರ್ಥ ಲೇಔಟ್, ಬನ್ನಿಮಂಟಪ, ಕುವೆಂಪುನಗರ, ಕೋಟೆ ಹುಂಡಿ, ಹೆಬ್ಬಾಳ್
9741616826, 8050505786

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿರುವ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಹುಡುಗ/ ಹುಡುಗಿಯರು ಬೇಕಾಗಿದ್ದಾರೆ ಸಂಬಳ: ರೂ. 12,000/–
9380232259

WANTED
SSLC/PUC FEMALE OFFICE INCHARGE, @ SARASWATHI PURAM KAMAKSHI HOSPITAL ROAD, (NEAR KUVEMPUNAGAR) MYSORE
9342125252

URGENT REQUIREDMENT
Teachers Required
For Sri Jnana Bharathi School D.Hosahalli, K.R.S Road, (3kms from J K TYRES) Mysore
1) MSc/BSc, BE.d., 2) MSc
3) BSc, 4) MA in English
Interview Date : 19-5-2023
8310245354, 9620124567

ವಧು ಬೇಕಾಗಿದ್ದಾರೆ
ಬೆಂಗಳೂರಿನ 49 ವಯಸ್ಸಿನ MNC ಯಲ್ಲಿರುವ ಉನ್ನತ ವೇತನದ ವಿಚ್ಛೇದಿತ ಬ್ರಾಹ್ಮಣ ವರನಿಗೆ ವಧು ಬೇಕಾಗಿದ್ದಾರೆ.
9844408895
9538267942

ಭವಿಷ್ಯದ ಆಸ್ತಿ ಮಾರಾಟಕ್ಕೆ
ಆರ್.ಟಿ. ನಗರದಿಂದ 2 1/2 ಕಿ.ಮೀ ಅಂತರದಲ್ಲಿ ಸರ್ವಸ್ವತಂತ್ರವಾದ 30 ಗುಂಟೆ ಬಾಳೆತೋಟ, ತೆಂಗು, ಅಡಿಕೆ ಸಸಿಗಳು) ಮತ್ತು ಹಲವು ರೀತಿ ಹಣ್ಣಿನ ಗಿಡಗಳನ್ನು ಒಳಗೊಂಡ ರಸ್ತೆ, ನೀರು (ಬೋರ್‌ವೆಲ್) ತಂತಿಬೇಲಿ, ಡ್ರಿಪ್ ಸೌಲಭ್ಯಗಳ ಆಸ್ತಿ ಬೆಲೆ 2 ಕೋಟಿ (Negatiable)
9880243301

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್
ಊಟ, ತಿಂಡಿ, ತಿಂಗಳಿಗೆ 4 ದಿನ ರಜೆ ESI, PF ಇದೆ ಆಕರ್ಷಕ ಸಂಬಳ ದೊರೆಯುತ್ತದೆ. 12 ಗಂಟೆ ಪಾಳಿಗೆ
6364440999
6364560079

ಶ್ರೀ ಗೊರವನಹಳ್ಳಿ ಮಹಾಲಕ್ಷ್ಮಿ ಟೂರ್ಸ್
21.6.2023 ರಿಂದ 18 ದಿನಗಳ ಉತ್ತರ ಭಾರತ ಪ್ರವಾಸ ಮೈಸೂರಿನಿಂದ 3+2 ಪುಷಬ್ಯಾಕ್ ಬಸ್ಸಿನಲ್ಲಿ ಕೂಡಲಸಂಗಮ, ಪಂಡರಾಪುರ, ಶಿರಡಿ, ಉಜ್ಜಯಿನಿ, ಆಗ್ರಾ, ದೆಹಲಿ, ಹರಿದ್ವಾರ, ಋಷಿಕೇಷ, ಅಯೋಧ್ಯ, ಅಲಹಬಾದ್, ಕಾಶಿ ಗಯ, ಭುವನೇಶ್ವರ ಕೊನಾರ್ಕ್, ಪುರಿ, ಹಿಂಹಾಚಲಂ, ಅನ್ನಾವರಂ, ಶ್ರೀಶೈಲ, ಮಹಾನಂದಿ, ಮಂತ್ರಾಲಯ
ಸಂಪರ್ಕಿಸಿ: ಸುಕನ್ಯ ಸೋಮಣ್ಣ
9886829622

ಬೇಕಾಗಿದ್ದಾರೆ
TT Vehicle ಹಾಗೂ Car ಗೆ Driver ಗಳು ಬೇಕಾಗಿದ್ದಾರೆ ಸಂಬಳ: 12000-15000 ಊಟ ವಸತಿ ಸೌಕರ್ಯವಿದೆ
6366141518

ಮನೆ ಭೋಗ್ಯಕ್ಕಿದೆ
ಡ್ಯೂಪ್ಲೆಕ್ಸ್ 4 ಬೆಡ್‌ರೂಂ, ಅಟ್ಯಾಚ್ ಬಾತ್ ರೂಂ& ಟಾಯ್ಲೆಟ್ ಬೋರ್‌ವೆಲ್ ವಾಟರ್, ಸೋಲಾರ್, ಗೀಸರ್, ಹೊಂದಿದೆ ಕಾರ್ನರ್ ಹೌಸ್, ರಿಂಗರಸ್ತೆ ಪಕ್ಕ, ಸಿದ್ದಲಿಂಗೇಶ್ವರ ಬಡಾವಣೆ 2ನೇ ಹಂತ, ಐಶ್ವರ್ಯ ಲೇಔಟ್, ಜೆಪಿನಗರ, ಮೈಸೂರು
9900565459

ಬೇಕಾಗಿದ್ದಾರೆ
ಪೆಟ್ರೋಲ್ ಬಂಕಿನಲ್ಲಿ ಕೆಲಸ ನಿರ್ವಹಿಸಲು ಹುಡುಗ ಹುಡುಗಿಯರು ಬೇಕಾಗಿದ್ದಾರೆ
9243224446

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಬೈಕ್‌ಗೆ ಟಿಪ್ಪರ್ ಡಿಕ್ಕಿ: ಸವಾರ ಸಾವು



ಕೆ.ಆರ್.ಪೇಟೆ, ಮೇ 14– ಬೈಕ್‌ಗೆ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಭಾನುವಾರ ಬೆಳಗ್ಗೆ ತಾಲೂಕಿನ ಮಾರೇನಹಳ್ಳಿಯಲ್ಲಿ ನಡೆದಿದೆ.

ತಾಲೂಕಿನ ದೊಡ್ಡಸೋಮನಹಳ್ಳಿ ಗ್ರಾಮದ ನಿವಾಸಿ ಸೋಮಶೇಖರ್ (38) ಸಾವನ್ನಪ್ಪಿದವರು. ಈತ ಇಂದು ಬೆಳಗ್ಗೆ ಮಾರೇನಹಳ್ಳಿಯಿಂದ ದೊಡ್ಡ ಸೋಮನ ಹಳ್ಳಿಗೆ ತೆರಳುವಾಗ ಸಂತೇ ಬಾಚಹಳ್ಳಿ ಕಡೆಯಿಂದ ವೇಗವಾಗಿ ಬಂದ ಟಿಪ್ಪರ್ ಮಾರೇನಹಳ್ಳಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ವೃತ್ತದ ಬಳಿ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಸೋಮಶೇಖರ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ದೊಡ್ಡಸೋಮನಹಳ್ಳಿ ಗ್ರಾಮಸ್ಥರು ರಸ್ತೆ ತಡೆದು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಕಿಕ್ಕೇರಿ ಠಾಣೆ ಇನ್ಸ್‌ಪೆಕ್ಟರ್ ಸುನೀಲ್, ಎಸ್‌ಐ ಸಿದ್ದಲಿಂಗ ಬನವಾಸೆ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮೃತದೇಹವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದರು.

ಆದಿಚುಂಚನಗಿರಿಗೆ ನೂತನ ಶಾಸಕರ ದಂಡು ಭೇಟಿ

● ನಿರ್ಮಲಾನಂದನಾಥ ಶ್ರೀಗಳ ಆಶೀರ್ವಾದ ಪಡೆದ ಶಾಸಕರು ● ಶ್ರೀಗಳಿಂದ ಶಾಸಕನಿಗೆ ಶಿಸ್ತಿನ ಪಾಠ



ಮಂಡ್ಯ, ಮೇ 14– ಜಿಲ್ಲೆ ಸೇರಿದಂತೆ ಬೇರೆ ಕ್ಷೇತ್ರಗಳಿಂದ ಆಯ್ಕೆಯಾಗಿರುವ ಶಾಸಕರು ಭಾನುವಾರ ಶ್ರೀಕ್ಷೇತ್ರ ಆದಿಚುಂಚನಗಿರಿಗೆ ಭೇಟಿ ನೀಡಿ ಕಾಲ ಭೈರವೇಶ್ವರನ ದರ್ಶನ ಪಡೆದು, ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥಶ್ರೀಗಳ ಆಶೀರ್ವಾದ ಪಡೆದರು. ಈ ಸಂದರ್ಭ ನೂತನ ಶಾಸಕರಿಗೆ ಚುಂಚಶ್ರೀ ಶಿಸ್ತಿನ ಪಾಠ ಹೇಳಿದರು.

ನಾಗಮಂಗಲ ತಾಲೂಕಿನ ಆದಿ ಚುಂಚನಗಿರಿಗೆ ಕ್ಷೇತ್ರದ ಕಾಂಗ್ರೆಸ್ ಶಾಸಕ ಎನ್.ಚಲುವರಾಯಸ್ವಾಮಿ ನೇತೃತ್ವದಲ್ಲಿ ಆಗಮಿಸಿದ ಜಿಲ್ಲೆಯ ನೂತನ ಶಾಸಕರು ವಿಶೇಷ ಪೂಜೆಯಲ್ಲಿ ಭಾಗಿಯಾದರು. ನೂತನ ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ಪಿ.ಎಂ. ನರೇಂದ್ರಸ್ವಾಮಿ, ದರ್ಶನ್ ಪುಟ್ಟಣಯ್ಯ, ಗಣಿಗ ರವಿಕುಮಾರ್, ಸಂಸದ ಡಿ.ಕೆ. ಸುರೇಶ್, ವಿಧಾನ ಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ ವಿಶೇಷ ಪೂಜೆ ಸಲ್ಲಿಸಿದರು.

ಅಭೂತ ಪೂರ್ವ ಗೆಲುವಿನ ಬಳಿಕ ಕಾಲಭೈರವನಿಗೆ ಪೂಜೆ ಸಲ್ಲಿಸಿದ ನೂತನ ಶಾಸಕರು, ಪೂಜೆ ಬಳಿಕ ಶ್ರೀಗಳ ಆಶೀರ್ವಾದ ಪಡೆದು ಶ್ರೀಗಳೊಂದಿಗೆ ಕೆಲ ಹೊತ್ತು ಮಾತುಕತೆ ಮಾಡಿದರು.

ಶಾಸಕನಿಗೆ ಚುಂಚಶ್ರೀ ಶಿಸ್ತಿನ ಪಾಠ: ಮಾತುಕತೆ ವೇಳೆ ಶಾಸಕ ಗಣಿಗ ರವಿಕುಮಾರ್ ಶರ್ಟ್ ಬಟನ್ ಹಾಕದ್ದನ್ನು ಗಮನಿಸಿದ ಶ್ರೀಗಳು ನೀನಿಗ ಶಾಸಕ, ಹೀಗೆಲ್ಲ ಓಡಾಡಬಾರದು. ಮೊದಲು ಶರ್ಟ್ ಬಟನ್ ಹಾಕಿ ಶಿಸ್ತಿನಿಂದ ಇರಬೇಕು ಎಂದು ಹೇಳಿದ ಬಳಿಕ ಶಾಸಕ ಗಣಿಗ ರವಿಕುಮಾರ್ ಶರ್ಟ್ ಬಟನ್ ಹಾಕಿದರು.

ಎಸ್.ಟಿ.ಸೋಮಶೇಖರ್ ಸಹ ಮಠಕ್ಕೆ ಭೇಟಿ: ಕಾಂಗ್ರೆಸ್ ಶಾಸಕರ ಆಗಮನಕ್ಕೂ ಮುನ್ನ ಶ್ರೀಮಠಕ್ಕೆ ಯಶವಂತಪುರ ಕ್ಷೇತ್ರದ ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ಸಹ ಭೇಟಿ ನೀಡಿ, ಶ್ರೀಗಳ ಆಶೀರ್ವಾದ ಪಡೆದರು. ಬಳಿಕ ಚುಂಚನಗಿರಿಯಲ್ಲಿ ಸೋಮಶೇಖರ್ ಹಾಗೂ ಕಾಂಗ್ರೆಸ್ ಶಾಸಕರು ಮುಖಾಮುಖಿಯಾಗಿ ಒಬ್ಬರಿಗೊಬ್ಬರು ಶುಭ ಕೋರಿದರು.

ಮಠಕ್ಕೆ ಸ್ವರೂಪ್ ಭೇಟಿ: ಹಾಸನ ಕ್ಷೇತ್ರದಿಂದ ಮೊದಲ ಬಾರಿಗೆ ಸ್ಪರ್ಧಿಸಿ ಜಯಭೇರಿ ಬಾರಿಸಿರುವ ಜೆಡಿಎಸ್ ಶಾಸಕ ಸ್ವರೂಪ್ ಪ್ರಕಾಶ್ ಸಹ ಶ್ರೀ ಮಠಕ್ಕೆ ಭೇಟಿ ನೀಡಿ, ಕಾಲಭೈರವೇಶ್ವರನ ದರ್ಶನ ಪಡೆದು ಬಳಿಕ ಶ್ರೀಗಳ ಆಶೀ ರ್ವಾದ ಪಡೆದರು. ತೀವ್ರ ಜಿದ್ದಾಜಿದ್ದಿನಿಂದ ಕೂಡಿದ್ದ ಹಾಸನ ಕ್ಷೇತ್ರದಲ್ಲಿ ಬಿಜೆಪಿಯ ಪ್ರೀತಮ್ ಜೆ.ಗೌಡ ವಿರುದ್ಧ ಸ್ವರೂಪ್ ಜಯಭೇರಿ ಭಾರಿಸಿದ್ದರು.

ಮಂಡ್ಯಕ್ಕೆ ಪಕ್ಷ ಬಂಪರ್ ಗಿಫ್ಟ್ ಕೊಡಲಿದೆ: ಸಿಆರ್‌ಎಸ್

ಆದಿಚುಂಚನಗಿರಿ: ನನಗೆ ಸಚಿವ ಸ್ಥಾನ ಕೊಡುವುದನ್ನು ಕಾಂಗ್ರೆಸ್ ಪಕ್ಷ ತೀರ್ಮಾನಿಸಲಿದೆ. ಆದರೆ ಜಿಲ್ಲೆಯ 7 ಸ್ಥಾನಗಳ ಪೈಕಿ 6 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿಕೊಟ್ಟ ಮಂಡ್ಯ ಜಿಲ್ಲೆಗೆ ಪಕ್ಷ ಬಂಪರ್ ಗಿಫ್ಟ್ ನೀಡಲಿದೆ ಕಾದುನೋಡಿ ಎಂದು ಶಾಸಕ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಶ್ರೀಕ್ಷೇತ್ರ ಆದಿಚುಂಚನಗಿರಿ ಮಠಕ್ಕೆ ಭೇಟಿ ನೀಡಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲೆಯ ಜನ ನಮ್ಮ ನಿರೀಕ್ಷೆಯಂತೆ ಹೆಚ್ಚಿನ ಸೀಟನ್ನು ಗೆಲ್ಲಿಸಿಕೊಟ್ಟಿದ್ದಾರೆ. ಜಿಲ್ಲೆಗೆ ಕಾಂಗ್ರೆಸ್ ಪಕ್ಷ ಏನು ಕೊಡಬೇಕು ಅದನ್ನು ಕೊಟ್ಟೇ ಕೊಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಚಲುವರಾಯಸ್ವಾಮಿ ಡಿಸಿಎಂ ಆಗುತ್ತಾರೆ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿ, ಅದೆಲ್ಲ ಏನಿಲ್ಲ. ನಮಗೆ ಅಭಿವೃದ್ಧಿಯೇ ಮುಖ್ಯ. ಪ್ರಚಾರದ ವೇಳೆ ಸಿದ್ದರಾಮಯ್ಯ ನನಗೆ ಉಪಮುಖ್ಯಮಂತ್ರಿ ಎಂದಿದ್ದು ಆಶೀರ್ವಾದ ಅಷ್ಟೇ. ನಮ್ಮ ಜಿಲ್ಲೆಯ ಮತ್ತೋರ್ವ ನಾಯಕ ನರೇಂದ್ರಸ್ವಾಮಿ ಸಹ ಸಚಿವರಾಗುವ ಅರ್ಹತೆ ಹೊಂದಿರುವವರು. ನಮಗಿಂತ ಹಿರಿಯರಿದ್ದಾರೆ. ನಮಗೆ ನಾಯಕತ್ವಕ್ಕಿಂತ ಅಭಿವೃದ್ಧಿಯೇ ಮುಖ್ಯ ಎಂದರು.

ರಾಜ್ಯದಲ್ಲಿ ಸಿಎಂ ಯಾರಾಗುತ್ತಾರೆ ಎಂಬ ವಿಚಾರದ ಬಗ್ಗೆ ಮಾತನಾಡಿ, ಸಿಎಂ ರೇಸ್‌ನಲ್ಲಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಇದ್ದಾರೆ. ಸಿಎಂ ಆಯ್ಕೆಯಲ್ಲಿ ಯಾವುದೇ ಗೊಂದಲ ವಿಲ್ಲ. ರಾಷ್ಟ್ರೀಯ ನಾಯಕರ ಮಾರ್ಗದರ್ಶನದಲ್ಲಿ ಡಿಕೆಶಿ, ಸಿದ್ದರಾಮಯ್ಯ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ಎಲ್ಲರೂ ಸೇರಿ ಸಿಎಂ ಯಾರು ಎಂದು ತೀರ್ಮಾನ ಮಾಡುತ್ತಾರೆ ಎಂದು ಹೇಳಿದರು.

ಸುಖ, ನೆಮ್ಮದಿಯಿಂದ ನೋಡಿಕೊಳ್ಳುತ್ತಿದ್ದೆ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ನಮ್ಮ ತಂದೆ ಆಗಿದ್ದರೆ ಅವರನ್ನು ಸುಖ, ನೆಮ್ಮದಿಯಿಂದ ನೋಡಿಕೊಳ್ಳುತ್ತಿದ್ದೆ. ದೇವೇಗೌಡರು ನನ್ನ ವಿರುದ್ಧ ಏನು ಮಾತನಾಡಿಲ್ಲ. ದೇವೇಗೌಡರ ಬಗ್ಗೆ ನನಗೆ ಅಪಾರ ಗೌರವವಿದೆ. ಆರೋಗ್ಯದ ಸಮಸ್ಯೆಯ ನಡುವೆಯೂ ಅವರನ್ನು ಈ ವಯಸ್ಸಿನಲ್ಲಿ ಸುತ್ತಾಡಿಸಿದ್ದು ತಪ್ಪು. ಅವರು ಕೂತಿರುವ ಕಡೆ ಆಶೀರ್ವಾದ ತೆಗೆದುಕೊಂಡು ಚುನಾವಣೆ ಮಾಡಬೇಕಿತ್ತು. ರಾಜ್ಯ ಸುತ್ತಿದ್ದು ಸರಿಯಲ್ಲ. ಅವರನ್ನು ಸುತ್ತಿಸಿದವರಿಗೆ ದೇವರು ಬುದ್ಧಿಕೊಡಲಿ ಎಂದು ಜೆಡಿಎಸ್ ಮುಖಂಡರನ್ನು ಟೀಕಿಸಿದರು.

ದೇವೇಗೌಡರಿಂದ ಉಪಯೋಗ ಪಡೆದು ಎಂಎಲ್‌ಎ, ಮಂತ್ರಿ, ಮುಖ್ಯಮಂತ್ರಿ ಎಲ್ಲವನ್ನು ಕೆಲವರು ಅನುಭವಿಸಿದ್ದಾರೆ. ನಮಗೆ ಇಂತಹ ವಯಸ್ಸಿನಲ್ಲಿ ನಮ್ಮ ತಂದೆ ನೋಡಿಕೊಳ್ಳುವ ಭಾಗ್ಯ ಸಿಗಲಿಲ್ಲ. ದೇವೇಗೌಡರು ನಮ್ಮ ತಂದೆ ಆಗಿದ್ದರೆ ಕೂತಿದ್ದ ಕಡೆ ಬಹಳ ಸುಖದ ನೆಮ್ಮದಿಯಿಂದ ನೋಡಿಕೊಳ್ಳುತ್ತಿದ್ದೆ ಎನ್ನುವ ಮೂಲಕ ಹೆಚ್ಡಿಕೆಗೆ ಟಾಂಗ್ ನೀಡಿದರು.

ನೆಲ್ಯಹುದಿಕೇರಿಯಲ್ಲಿ ಕಾಂಗ್ರೆಸ್ ವಿಜಯೋತ್ಸವ



ಸಿದ್ದಾಪುರ, ಮೇ 14– ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದ ಡಾ. ಮಂಥರ್ ಗೌಡ ಪರವಾಗಿ ನೆಲ್ಯಹುದಿಕೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಬೃಹತ್ ಮೆರವಣಿಗೆ ನಡೆಸುವುದರ ಮೂಲಕ ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು.

ನೆಲ್ಯಹುದಿಕೇರಿ ಪಟ್ಟಣದ ಮುಖ್ಯ ಬೀದಿಗಳಲ್ಲಿ ಮಂಥರ್‌ಗೌಡ ಪರ ಘೋಷಣೆಗಳನ್ನು ಕೂಗಿ ಮತದಾರರಿಗೆ ಸಿಹಿ ಹಂಚುವ ಮೂಲಕ ಸಂಭ್ರಮಿಸಿದರು. ವಲಯ ಕಾಂಗ್ರೆಸ್ ಅಧ್ಯಕ್ಷ ಸಾಬು ವರ್ಗೀಸ್ ನೇತೃತ್ವದಲ್ಲಿ ನಡೆದ ವಿಜಯೋತ್ಸವದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಎ.ಕೆ ಹಕೀಂ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಸುನಿತಾ ಮಂಜುನಾಥ್, ಕಾಂಗ್ರೆಸ್ ಜಿಲ್ಲಾ ಸಮಿತಿ ಮುಖಂಡರುಗಳಾದ ಜೋಸೆಫ್ ಶ್ಯಾಮ್, ಕೆ.ಎಂ. ಬಶೀರ್, ಕೆ.ಎಂ. ಬಾವ, ವಲಯ ಕಾಂಗ್ರೆಸ್ ಕಾರ್ಯಾಧ್ಯಕ್ಷ ಹನೀಫ, ಯುವ ಕಾಂಗ್ರೆಸ್ ಅಧ್ಯಕ್ಷ ಶಿಹಾಬ್ ಸೇರಿದಂತೆ ಗ್ರಾಮ ಪಂಚಾಯಿತಿ ಸದಸ್ಯರುಗಳು, ಕಾಂಗ್ರೆಸ್ ಬೂತ್ ಮಟ್ಟದ ಕಾರ್ಯಕರ್ತರು, ವಲಯ ಸಮಿತಿ ಸದಸ್ಯರು ಹಾಗೂ ಸ್ಥಳೀಯರು ಹಾಜರಿದ್ದರು.

ಇಂದಿನಿಂದ ನಂಜುಂಡೇಶ್ವರ ಉತ್ಸವ

ಕುಶಾಲನಗರ, ಮೇ 14– ತಾಲೂಕಿನ ನಂಜರಾಯಪಟ್ಟಣದಲ್ಲಿರುವ ಐತಿಹಾಸಿಕ ಹಿನ್ನೆಲೆಯುಳ್ಳ ನಂಜುಂಡೇಶ್ವರ ಹಾಗೂ ದೇವೀರಮ್ಮ ದೇವಾಲಯದ ವಾರ್ಷಿಕ ಪೂಜೋತ್ಸವ ಮೇ 15 ಮತ್ತು 16 ರಂದು ಎರಡೂ ದಿನಗಳ ಕಾಲ ನಡೆಯಲಿದೆ.

ಪೂಜೋತ್ಸವದ ಎರಡನೇ ದಿನವಾದ ಮೇ 16 ರಂದು ಅರಸೀಕೆರೆಯ ಕೋಡಿ ಮಠದ ಶ್ರೀಗಳು, ವಿರಾಜಪೇಟೆಯ ಅರಮೇರಿ ಕಳಂಚೇರಿ ಶ್ರೀಗಳು ಹಾಗೂ ದಿಂಡಗಾಡು ಮಠದ ಶ್ರೀಗಳು ದಿವ್ಯಸಾನ್ನಿಧ್ಯದಲ್ಲಿ ದೇವಾಲಯದ ಕೆಂಡೋತ್ಸವ ಪೂಜಾ ವಿಧಿಗಳು ಜರುಗಲಿವೆ. ಆದ್ದರಿಂದ ಎರಡೂ ದಿನಗಳ ಜರುಗುವ ಪೂಜಾ ಕಾರ್ಯಕ್ರಮಕ್ಕೆ ಹೆಚ್ಚಿನ ಭಕ್ತಾದಿಗಳು ಆಗಮಿಸಿ ದೇವರ ಕೃಪೆಗೆ ಪಾತ್ರರಾಗಬೇಕೆಂದು ದೇವಾಲಯ ಅಭಿವೃದ್ಧಿ ಸಮಿತಿ ಕೋರಿದೆ.

ನೂತನ ಶಾಸಕ ಸಿ.ಎಸ್. ಪೊನ್ನಣ್ಣ ಅವರ ನೇತೃತ್ವದಲ್ಲಿ

ವಿರಾಜಪೇಟೆ ಮಾದರಿ ಕ್ಷೇತ್ರವಾಗಿ ಅಭಿವೃದ್ಧಿ

ಅಪಪ್ರಚಾರಕ್ಕೆ ಉತ್ತರ ಕೊಟ್ಟಿದ್ದಾರೆ

ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎ.ಎಸ್.ಪೊನ್ನಣ್ಣ ಅವರು ಕೇವಲ ಅಭಿವೃದ್ಧಿ ವಿಚಾರಗಳ ಆಧಾರದಲ್ಲಿ ಮತಯಾಚಿಸಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ಅವರ ವಿರುದ್ಧ ಬಿಜೆಪಿ ಅಪಪ್ರಚಾರಗಳನ್ನು ಮಾಡಿ, ಅವರ ಕುಟುಂಬಸ್ಥರ ಮೇಲೆ ಸುಳ್ಳು ಆರೋಪಗಳನ್ನು ಮಾಡುವ ಮೂಲಕ ಪೊನ್ನಣ್ಣ ಅವರಿಗೆ ನೋವನ್ನುಂಟು ಮಾಡಿದ್ದರು. ಈ ಎಲ್ಲಾ ಅಪಪ್ರಚಾರಗಳಿಗೆ ಮತದಾರ ಉತ್ತರ ನೀಡಿರುವುದಾಗಿ ಸಂಕೇತ್ ಪೂವಯ್ಯ ತಿಳಿಸಿದರು. ಚುನಾವಣಾ ಹಂತದಲ್ಲಿ ತಾವು ಮಾಡಿದ ಸಾಧನೆಗಳ ಆಧಾರದಲ್ಲಿ ಮತಯಾಚನೆ ಮಾಡದ ಬಿಜೆಪಿ ಭಾವನಾತ್ಮಕ ವಿಚಾರಗಳಿಗೆ ಒತ್ತು ನೀಡಿ ಜನರನ್ನು ಸೆಳೆಯಲು ಯತ್ನಿಸಿತ್ತು. ಆದರೆ, ಪ್ರಬುದ್ಧ ಮತದಾರ ಇಂತಹ ವಿಚಾರಗಳನ್ನು ಲೆಕ್ಕಿಸದೆ ಅಭಿವೃದ್ಧಿಯ ಚಿಂತನೆಯಡಿ ಪೊನ್ನಣ್ಣ ಅವರನ್ನು ಆಶೀರ್ವದಿಸಿರುವುದಾಗಿ ತಿಳಿಸಿದರು.

ಪಕ್ಷದ ಪ್ರಣಾಳಿಕೆ ಅಂಶಗಳ ಅನುಷ್ಠಾನಕ್ಕೆ ಸಮಿತಿ ರಚನೆ: ಸಂಕೇತ್ ಪೂವಯ್ಯ



ಮಡಿಕೇರಿ, ಮೇ 14– ವಿರಾಜಪೇಟೆ ಕ್ಷೇತ್ರವನ್ನು ನೂತನ ಶಾಸಕ ಅಜ್ಜಿಕುಟ್ಟೀರ ಎಸ್. ಪೊನ್ನಣ್ಣ ಅವರ ನೇತೃತ್ವದಲ್ಲಿ ಭ್ರಷ್ಟಾಚಾರ ಮುಕ್ತ ರಾಜ್ಯದಲ್ಲೆ ಮಾದರಿ ಕ್ಷೇತ್ರವನ್ನಾಗಿ ರೂಪಿಸುವುದು ನಮ್ಮ ಮೊದಲ ಆದ್ಯತೆಯಾಗಿದೆ ಎಂದು ಕೆಪಿಸಿಸಿ ವಕ್ತಾರ ಮೇರಿಯಂಡ ಸಂಕೇತ್ ಪೂವಯ್ಯ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರದ ಜನತೆಯ ಆಶೀರ್ವಾದದಿಂದ ಕಾಂಗ್ರೆಸ್ ಅಭ್ಯರ್ಥಿ ಯಾಗಿದ್ದ ಎ.ಎಸ್. ಪೊನ್ನಣ್ಣ ಅವರು ಆಯ್ಕೆಯಾಗಿದ್ದು, ಇವರ ಮುಖೇನ ಕ್ಷೇತ್ರದ ಅಭಿವೃದ್ಧಿಯ ಜೊತೆ ಜೊತೆಯಲ್ಲೆ ಶ್ರೀಸಾಮಾನ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಮೂಲಕ ಉತ್ತಮ ಸಮಾಜ ನಿರ್ಮಾಣ ಮಾಡುವ ಕಾರ್ಯ ಮುಂದಿನ ದಿನಗಳಲ್ಲಿ ನಡೆಯಲಿದೆಯೆಂದು ವಿಶ್ವಾಸ ವ್ಯಕ್ತಪಡಿಸಿದರು. ಪ್ರಸ್ತುತ ಸಮಾಜದ ಪ್ರತಿ ಹಂತದಲ್ಲೂ ಭ್ರಷ್ಟಾಚಾರವೆಂಬುದು ಹಾಸು ಹೊಕ್ಕಾಗಿ ಹೋಗಿದೆ. ಇದರ ನಿರ್ಮೂಲನೆ ಸುಲಭ ಸಾಧ್ಯವಲ್ಲವಾದರು ತಮ್ಮ ಅವಧಿಯಲ್ಲಿ ಆಡಳಿತದಲ್ಲಿನ ಭ್ರಷ್ಟಾಚಾರವನ್ನು ತೊಲಗಿಸುವ ಪ್ರಾಮಾಣಿಕ ಪ್ರಯತ್ನ ನಡೆಯಲಿದೆ ಯೆಂದು ಸ್ಪಷ್ಟಪಡಿಸಿದರು.

ಸಮಸ್ಯೆಗಳ ಬಗೆಹರಿಕೆಗೆ ಒತ್ತು: ಕಾಂಗ್ರೆಸ್ ಅಧಿಕಾರದ ಅವಧಿಯಲ್ಲಿ ಜಿಲ್ಲೆಯ ಕಾಫಿ ಬೆಳೆಗಾರ ಎದುರಿಸುತ್ತಿರುವ ಹತ್ತು ಹಲ ಸಮಸ್ಯೆಗಳಿಗೆ, ವನ್ಯಜೀವಿ ಮತ್ತು ಮಾನವ ಸಂಘರ್ಷ ನಿವಾರಣೆಗೆ ವೈಜ್ಞಾನಿಕವಾದ ಪರಿಹಾರಗಳನ್ನು ಕಂಡುಕೊಳ್ಳುವ ಪ್ರಯತ್ನ ನಿಶ್ಚಿತವಾಗಿ ನಡೆಯಲಿದೆ. ಈಗಾಗಲೆ ಕಾಂಗ್ರೆಸ್‌ನಿಂದ ಬಿಡುಗಡೆ ಮಾಡಿರುವ ವಿರಾಜಪೇಟೆ ಕ್ಷೇತ್ರದ ಕಾಂಗ್ರೆಸ್ ಪ್ರಣಾಳಿಕೆಯಲ್ಲಿನ ಅಂಶಗಳಿಗೆ ಒತ್ತು ನೀಡಿ ಕಾರ್ಯನಿರ್ವಹಿಸಲು ನೂತನ ಶಾಸಕ ಅಜ್ಜಿಕುಟ್ಟೀರ ಪೊನ್ನಣ್ಣ ಅವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ಶೀಘ್ರವೇ ಕಾರ್ಯಪ್ರವೃತ್ತರಾಗುವುದಾಗಿ ಸಂಕೇತ್ ಪೂವಯ್ಯ ತಿಳಿಸಿದರು.

ಸಚಿವ ಸ್ಥಾನದ ವಿಶ್ವಾಸ: ನೂತನ ಕಾಂಗ್ರೆಸ್ ಸರ್ಕಾರದ ಸಚಿವ ಸಂಪುಟದಲ್ಲಿ ಅಜ್ಜಿಕುಟ್ಟೀರ ಪೊನ್ನಣ್ಣ ಅವರಿಗೆ ಖಂಡಿತವಾಗಿ ಸಚಿವ ಸ್ಥಾನ ದೊರಕುವ ವಿಶ್ವಾಸ ವ್ಯಕ್ತಪಡಿಸಿದ ಅವರು, ಒಂದು ಕ್ಷೇತ್ರ ಮತ್ತು ಜಿಲ್ಲೆಯ ಒಟ್ಟು ಸಮಸ್ಯೆಗಳನ್ನು ಸರ್ಕಾರದ ಮುಂದೆ ಮಂಡಿಸಿ ಪರಿಹಾರಗಳನ್ನು ಕಂಡುಕೊಳ್ಳಲು ಜಿಲ್ಲೆಯವರಿಗೆ ಸಚಿವ ಸ್ಥಾನ ನೀಡುವುದು ಅವಶ್ಯವಾಗಿದೆ. ಈ ಹಿಂದೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭಗಳಲ್ಲೆಲ್ಲ ಜಿಲ್ಲೆಯವ ರಿಗೆ ಮತ್ತು ಜಿಲ್ಲೆಯಲ್ಲಿ ಕಾಂಗ್ರೆಸ್ ಶಾಸಕರು ಇಲ್ಲ ದಿದ್ದ ಸಂದರ್ಭದಲ್ಲಿ ಜಿಲ್ಲೆಗೆ ಸಂಬಂಧಿಸಿದವರಿಗೆ ಸಚಿವ ಸ್ಥಾನವನ್ನು ನೀಡಲಾಗಿತ್ತೆಂದು ತಿಳಿಸಿದರು.

ಮತದಾರನಿಗೆ ಕೋಟೆ ಕಟ್ಟಲಾಗದು: ಕೊಡಗನ್ನು ಪಕ್ಷವೊಂದರ ಭದ್ರಕೋಟೆ ಎಂದು ಬಿಂಬಿಸಲಾಗುತಿತ್ತು. ಆದರೆ, ಎಂದಿಗೂ ಯಾವುದೇ ಪಕ್ಷ ಮತದಾರನಿಗೆ ಕೋಟೆ ಕಟ್ಟಲು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಿದ ಸಂಕೇತ್ ಪೂವಯ್ಯ, ಜಿಲ್ಲೆಯಲ್ಲಿ ಕಾಂಗ್ರೆಸ್ ಎಲ್ಲಿದೆ ಎಂದು ದುರ್ಬಿನು ಹಾಕಿ ನೋಡಬೇಕೆನ್ನುವ ಮಾಜಿ ಶಾಸಕರೊಬ್ಬರ ಹಿಂದಿನ ಹೇಳಿಕೆಗೆ ಪ್ರತಿಕ್ರಿಯಿಸಿ, ಈಗ ಆ ದುರ್ಬಿನನ್ನು ಎತ್ತ ತಿರುಗಿಸಬೇಕೆಂದು ತಿಳಿಸ ಬೇಕಷ್ಟೆ ಎಂದು ಹಾಸ್ಯದ ಧಾಟಿಯಲ್ಲಿ ನುಡಿದರು.

ಸುದ್ದಿಗೋಷ್ಠಿಯಲ್ಲಿ ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡರಂಜಿ ಪೂಣಚ್ಚ, ನಾಪೋಕ್ಲು ಬ್ಲಾಕ್ ಅಧ್ಯಕ್ಷ ಕೆ.ಎ. ಇಸ್ಮಾಯಿಲ್, ವಿರಾಜಪೇಟೆ ನಗರ ವಿಭಾಗದ ಅಧ್ಯಕ್ಷ ಬಾನಂಡ ತಿಮ್ಮಯ್ಯ, ಎಸ್. ಹೆಚ್. ಮತೀನ್, ತೀರ್ಥ ಪ್ರಸಾದ್ ಉಪಸ್ಥಿತರಿದ್ದರು.

ಮೂವರು ಹಾಲಿ ಶಾಸಕರಿಗೆ ಸೋಲು





ಆರ್. ನರೇಂದ್ರ ನಿರಂಜನ್‌ಕುಮಾರ್ ಎನ್. ಮಹೇಶ್

ಚಾಮರಾಜನಗರ, ಮೇ 14– ವಿಧಾನ ಸಭಾ ಚುನಾವಣೆಯಲ್ಲಿ ಜಿಲ್ಲೆಯ ಕೊಳ್ಳೇಗಾಲ, ಹನೂರು ಹಾಗೂ ಗುಂಡ್ಲುಪೇಟೆ ವಿಧಾನ ಸಭಾ ಕ್ಷೇತ್ರಗಳ ಹಾಲಿ ಶಾಸಕರು ಸೋಲು ಅನುಭವಿಸಿದ್ದಾರೆ.

ಕಳೆದ ಬಾರಿಯ ಚುನಾವಣೆಯಲ್ಲಿ ಹನೂರು ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಜಯ ಗಳಿಸಿದ್ದ ಆರ್. ನರೇಂದ್ರ ಅವರು ಈ ಬಾರಿ 17 ಸಾವಿರಕ್ಕೂ ಹೆಚ್ಚು ಮತಗಳ ಅಂತರ ದಿಂದ ಜೆಡಿಎಸ್ ಅಭ್ಯರ್ಥಿ ಎಂ.ಆರ್. ಮಂಜುನಾಥ್ ಅವರ ವಿರುದ್ಧ ಸೋಲು ಕಂಡಿ ದ್ದಾರೆ. ಈ ಮೂಲಕ ಹನೂರು ಕ್ಷೇತ್ರದಲ್ಲಿ ಕುಟುಂಬ ರಾಜಕಾರಣ ಅಂತ್ಯಗೊಂಡಿದೆ.

ಇನ್ನು ಕಳೆದ ಬಾರಿ ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರದಿಂದ ಬಿಎಸ್‌ಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜಯ ಗಳಿಸಿದ್ದ ಎನ್. ಮಹೇಶ್ ಅವರು ಬದಲಾದ ರಾಜ ಕೀಯ ಸನ್ನಿವೇಶದಿಂದ ಬಿಎಸ್‌ಪಿ ತೊರೆದು ಬಿಜೆಪಿ ಸೇರ್ಪಡೆಯಾದರು. ಈ ಬಾರಿ ಬಿಜೆಪಿಯಿಂದ ಟಿಕೆಟ್ ಪಡೆಯುವಲ್ಲಿಯೂ ಯಶಸ್ವಿಯಾಗಿದ್ದರು. ಆದರೆ, ಕ್ಷೇತ್ರದ ಮತ ದಾರು ಮಾತ್ರ ಮಹೇಶ್ ಅವರನ್ನು ಬಿಟ್ಟು ಕಾಂಗ್ರೆಸ್‌ನ ಎ.ಆರ್. ಕೃಷ್ಣಮೂರ್ತಿ ಅವರ 'ಕೈ' ಹಿಡಿಯುವ ಮೂಲಕ ಮಹೇಶ್‌ಗೆ ತೀವ್ರ ಮುಖಭಂಗ ಉಂಟು ಮಾಡಿದರು. ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮಹೇಶ್ 48,844 ಮತ ಗಳನ್ನು ಮಾತ್ರ ಪಡೆಯಲು ಶಕ್ತರಾಗಿದ್ದು, ಎದುರಾಳಿ ಸ್ಪರ್ಧಿ ಎ.ಆರ್. ಕೃಷ್ಣಮೂರ್ತಿ ವಿರುದ್ಧ 59,519 ಮತಗಳ ಅಂತರದಿಂದ ಹೀನಾಯ ಸೋಲು ಅನುಭವಿಸಿದ್ದಾರೆ. ಉಳಿದಂತೆ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಸಿ.ಎಸ್. ನಿರಂಜನಕುಮಾರ್ ಕಳೆದ ಬಾರಿ ಚುನಾವಣೆಯಲ್ಲಿ ಗೆಲುವು ಸಾಧಿಸುವ ಮೂಲಕ ಮೊದಲ ಬಾರಿಗೆ ಕ್ಷೇತ್ರದಲ್ಲಿ ಕಮಲ ಅರಳಿಸಿದ್ದರು. ಆದರೆ, ಈ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್‌ನ ಎಚ್.ಎಂ. ಗಣೇಶಪ್ರಸಾದ್ ವಿರುದ್ಧ 30 ಸಾವಿರಕ್ಕೂ ಹೆಚ್ಚು ಮತಗಳ ಅಂತರ ದಿಂದ ಸೋಲು ಕಂಡು ಕ್ಷೇತ್ರವನ್ನು ಮತ್ತೊಮ್ಮೆ ಕಾಂಗ್ರೆಸ್‌ಗೆ ಬಿಟ್ಟುಕೊಟ್ಟಿದ್ದಾರೆ.

ಆಡಳಿತ ವಿರೋಧಿ ಅಲೆ, ಕ್ಷೇತ್ರದ ಅಭಿವೃದ್ಧಿ ಕೆಲಸ ಕುಂಠಿತ ಸೇರಿದಂತೆ ಹಲವು ಕಾರಣಗಳಿಂದ ಕಳೆದ ಚುನಾ ವಣೆಯಲ್ಲಿ ಗೆಲುವಿನ ನಗೆ ಬೀರಿದ್ದ ಮೂವರು ಶಾಸಕರು ಈ ಬಾರಿ ಸೋಲು ಕಂಡಿದ್ದಾರೆ.



ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಸ್ವತಂತ್ರ ಸರ್ಕಾರ ರಚನೆಯಾಗುವಂತೆ ಕಾಂಗ್ರೆಸ್ ಪಕ್ಷವು ಬಹುಮತ ಪಡೆದ ಹಿನ್ನೆಲೆಯಲ್ಲಿ ಚಾಮರಾಜನಗರದಲ್ಲಿ ಜಿಲ್ಲಾ ದಲಿತ ಸಂಘರ್ಷ ಐಕ್ಯತಾ ಹೋರಾಟ ಚಾಲನಾ ಸಮಿತಿ ವತಿಯಿಂದ ವಿಜಯೋತ್ಸವ ಆಚರಿಸಲಾಯಿತು.

ಬಿ.ರಾಚಯ್ಯ ಚಿರಶಾಂತಿ ಧಾಮಕ್ಕೆ ಕುಟುಂಬಸ್ಥರೊಂದಿಗೆ

ಎ.ಆರ್.ಕೃಷ್ಣಮೂರ್ತಿ ಭೇಟಿ, ಪೂಜೆ ಸಲ್ಲಿಕೆ



ಚಾಮರಾಜನಗರ, ಮೇ 14– ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಕಾಂಗ್ರೆಸ್ ಪಕ್ಷದ ಶಾಸಕರಾಗಿ ಪ್ರಚಂಡ ಬಹುಮತದಿಂದ ಆಯ್ಕೆಯಾದ ಎ.ಆರ್.ಕೃಷ್ಣಮೂರ್ತಿ ತಮ್ಮ ಕುಟುಂಬಸ್ಥರೊಂದಿಗೆ ತಾಲೂಕಿನ ಸ್ವಗ್ರಾಮ ಆಲೂರಿನಲ್ಲಿರುವ ಬಿ.ರಾಚಯ್ಯನವರ ಚಿರಶಾಂತಿ ಧಾಮಕ್ಕೆ ತೆರಳಿ ಪೂಜೆ ಸಲ್ಲಿಸಿ, ಆಶೀರ್ವಾದ ಪಡೆದರು.

ಚಾಮರಾಜನಗರದಿಂದ ನೇರವಾಗಿ ಆಲೂರು ಗ್ರಾಮಕ್ಕೆ ಭೇಟಿ ನೀಡಿದ ಅವರು, ಶ್ರೀ ಮಂಟೇಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು. ಆಲೂರಿನಲ್ಲಿ ಮಹಿಳೆಯರು ಆರತಿ ಎತ್ತಿ ಎಆರ್‌ಕೆ ಅವರನ್ನು ಸ್ವಾಗತಿಸಿದರು. ಆಲೂರಿನಲ್ಲಿ ಭಾರಿ ಜನಸ್ತೋಮದ ನಡುವೆ ಚಿರಶಾಂತಿಧಾಮಕ್ಕೆ ತೆರಳಿ ಸಮಾಧಿಗೆ ಪೂಜೆ ಸಲ್ಲಿಸಿ, ರಾಚಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ರಾಚಯ್ಯನವರ ಭಾವಚಿತ್ರದ ಮುಂದೆ ಪ್ರಮಾಣ ಪತ್ರವನ್ನಿಟ್ಟು ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಂಜುಳಾ ಕೃಷ್ಣಮೂರ್ತಿ, ಆರ್.ಕೆ. ವರ್ಧನ್, ಆರತಿ, ವೆಂಕಟೇಶ್ ಪ್ರಸಾದ್, ಕೃಷ್ಣಮೂರ್ತಿ, ಆರ್. ಬಾಲರಾಜು, ಎ.ಎಸ್. ಮಲ್ಲಣ್ಣ, ಮಾಜಿ ಶಾಸಕ ಎಸ್. ಜಯಣ್ಣ, ಮುಖಂಡರಾದ ಹೊಂಗನೂರುಚಂದ್ರು, ತೋಟೇಶ್, ಆರ್. ಮಹದೇವ್, ಕುದೇರು ರಾಜೇಂದ್ರಸ್ವಾಮಿ, ಯೋಗೇಶ್, ಆಲೂರು ಪ್ರವೀಣ್, ಪ್ರದೀಪ್, ಕಂದಹಳ್ಳಿ ನಂಜುಂಡ ಸ್ವಾಮಿ, ಹೊಂಗನೂರು ಪುಟ್ಟಸ್ವಾಮಿ, ಆಲ್ದೂರು ರಾಜಶೇಖರ್, ಕಮರವಾಡಿ ರೇವಣ್ಣ, ಹೊಂಗನೂರು ಗ್ರಾ.ಪಂ. ಅಧ್ಯಕ್ಷ ಶಂಕರ್, ಹೊಮ್ಮ ರವಿಶಂಕರ್, ಹೊಮ್ಮ ರಾಮನಾಯಕ, ಮಹದೇವಪ್ರಸಾದ್ ಫಸಿ, ದೇಶವಳ್ಳಿ ನಟರಾಜು, ಹೊಂಗನೂರು ಚೇತನ್, ಜಯರಾಜ್, ಗೋವಿಂದರಾಜು ಮೊದಲಾದವರು ಇದ್ದರು.


INDIAN NATIONAL CONGRESS
SLV
GROUPS
ಕೆ.ಪಿ.ಸಿ.ಸಿ. ಅಧ್ಯಕ್ಷರಾದ
ಶ್ರೀ ಡಿ.ಕೆ.ಶಿವಕುಮಾರ್
ಅವರಿಗೆ
ಜನುಮದಿನದ ಶುಭಾಶಯಗಳು
ಯಶವಂತ್ ಕುಮಾರ್ ಆರ್.
ಉದ್ಯಮಿಗಳು
ಶ್ರೀನಾಥ್ ಬಾಬು
ಕಾಂಗ್ರೆಸ್ ಮುಖಂಡರು
ವಿನಯ್ ಕಾರ್ತಿಕ್
ಖಜಾಂಚಿ, ಕೆಪಿಸಿಸಿ

ಮೈಸೂರು ಮಿತ್ರ

ಸೋಮವಾರ 15 ಮೇ 2023

ಕಾಂಗ್ರೆಸ್ ಗೆಲುವಿನ ಹಿಂದಿದೆ ಮಾಜಿ ಡಿಸಿ ಪಾತ್ರ!



ಬೆಂಗಳೂರು: ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭೂತಪೂರ್ವ ಗೆಲುವು ಸಾಧಿಸಿದೆ. ಕಾಂಗ್ರೆಸ್‌ನ ಈ ಗೆಲುವಿನ ಹಿಂದೆ ಮಾಜಿ ಐಎಎಸ್ ಅಧಿಕಾರಿಯೊಬ್ಬರ ಪಾತ್ರವೂ ಇದೆ. ಕಾಂಗ್ರೆಸ್ ಪಕ್ಷ ಯಾವ ಹಂತದಲ್ಲೂ ಎಡವದೆ, ಯೋಜಿತವಾಗಿ ಕೆಲಸ ಮಾಡುವಂತೆ ಮಾಡಿದ ಶ್ರೇಯ ಇವರ ತಂಡಕ್ಕೂ ಸಲ್ಲಬೇಕು. ಅವರೇ ಕಾಂಗ್ರೆಸ್ ವಾರ್ ರೂಮ್‌ನ ಮುಖ್ಯಸ್ಥ ಶಶಿಕಾಂತ್ ಸೆಂಥಿಲ್. ತಮಿಳುನಾಡು ಮೂಲದವರಾದ ಸೆಂಥಿಲ್, ಈ ಹಿಂದೆ ಚಿತ್ರದುರ್ಗ, ರಾಯಚೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ದಕ್ಷ ಅಧಿಕಾರಿಯಾಗಿ ಜನರ ಮೆಚ್ಚುಗೆಗೂ ಪಾತ್ರವಾಗಿದ್ದರು. ಸಿಎಎ ಹಾಗೂ ಎನ್‌ಆರ್‌ಸಿ ಹೋರಾಟದ ವೇಳೆಯಲ್ಲಿ ಪ್ರತಿಭಟನಾರ್ಥವಾಗಿ 2019ರಲ್ಲಿ ಐಎಎಸ್‌ಗೆ ರಾಜೀನಾಮೆ ನೀಡಿದ್ದರು. ಬಳಿಕ 2020ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದರು.

2022ರಲ್ಲಿ ಇವರನ್ನು ಕರ್ನಾಟಕ ಕಾಂಗ್ರೆಸ್ ವಾರ್ ರೂಂನ ಮುಖ್ಯಸ್ಥರಾಗಿ ನೇಮಕ ಮಾಡಲಾಗಿತ್ತು. ವಿಧಾನಸಭೆ ಚುನಾವಣೆಗೆ ಬೇಕಾದ ತಂತ್ರಗಾರಿಕೆ ಮಾಡುವ ಜವಾಬ್ದಾರಿ ಇವರಿಗೂ ವಹಿಸಲಾಗಿತ್ತು. ರಾಜ್ಯದ ಹಲವು ಕಡೆ ಕೆಲಸ ಮಾಡಿದ್ದ ಅನುಭವ ಇದ್ದಿದ್ದರಿಂದ ಇವರಿಗೆ ಈ ಹುದ್ದೆ ವಹಿಸಲಾಗಿತ್ತು.

ಚುನಾವಣೆಯ ಪ್ರಣಾಳಿಕೆ ಘೋಷಣೆ ಮಾಡುವುದಕ್ಕೂ ಮುನ್ನ ಕಾಂಗ್ರೆಸ್ ಘೋಷಿಸಿದ ಐದು ಗ್ಯಾರಂಟಿಯಲ್ಲಿ ಸೆಂಥಿಲ್ ಅವರ ಪಾತ್ರ ಕೂಡ ಇತ್ತು. ರಾಯಚೂರು ಹಾಗೂ ಚಿತ್ರದುರ್ಗದಂತಹ ಹಿಂದುಳಿದ ಪ್ರದೇಶದಲ್ಲಿ ಕಾರ್ಯನಿರ್ವಹಿಸಿದ್ದ ಅನುಭವ ಇದ್ದ ಕಾರಣ, ಬಡ ಹಾಗೂ ಕೆಳ ಮಧ್ಯಮ ವರ್ಗದ ಜನರಿಗೆ ಅನುಕೂಲ ಆಗುವ ಯೋಜನೆ ರೂಪಿಸುವಲ್ಲಿ ಇವರು ಮಹತ್ವದ ಪಾತ್ರ ವಹಿಸಿದ್ದರು. ಜನರಿಂದ ಅಭಿಪ್ರಾಯ ಪಡೆದು, ಯೋಜನೆ ರೂಪಿಸಿ, ಹೈಕಮಾಂಡ್ ಅನುಮತಿ ಪಡೆದು ಅದನ್ನು ಜಾರಿ ಮಾಡುವ ಜವಾಬ್ದಾರಿ ಸೆಂಥಿಲ್ ಅವರ ತಂಡಕ್ಕೆ ಇತ್ತು.

ಹಾಗೆಯೇ, ಜನರ ಆದಾಯ ಕುಸಿತ, ಶಿಕ್ಷಣದ ವ್ಯಾಪಾರೀಕರಣ ಹಾಗೂ ಹೆಚ್ಚುತ್ತಿರುವ ಶಿಕ್ಷಣ ವೆಚ್ಚ ಮುಂತಾದ ವಿಷಯಗಳ ಬಗ್ಗೆ ಜನರಿಂದ ಮಾಹಿತಿ ಸಂಗ್ರಹಿಸಿ, ಗ್ಯಾರಂಟಿ ಯೋಜನೆಗಳ ರೂಪುರೇಷೆ ತಯಾರಿ ಮಾಡಿದ್ದರು. ಕಾಂಗ್ರೆಸ್ ವಾರ್ ರೂಮ್ ಅನ್ನು ವ್ಯವಸ್ಥಿತವಾಗಿ ರೂಪಿಸಿದ್ದರು. ಎದುರಾಳಿಗಳ ಟೀಕೆಗೆ ಸಮರ್ಥ ತಿರುಗೇಟು ನೀಡುವುದು, ಸಾಮಾಜಿಕ ಜಾಲತಾಣದಲ್ಲಿ ಆಕ್ರಮಣಕಾರಿಯಾದ ಪ್ರಚಾರ, ಮಾಧ್ಯಮ ನಿರ್ವಹಣೆ, ನಾಯಕರ ಸಮನ್ವಯತೆಯು ಎಲ್ಲವೂ ವಾರ್ ರೂಂನಿಂದಲೇ ಅಂತಿಮಗೊಳ್ಳುತ್ತಿತ್ತು. ಗ್ರಾಮ, ತಾಲೂಕು ಹಾಗೂ ನಗರ ಪ್ರದೇಶದ ಜನರ ಸಮಸ್ಯೆಗಳು, ಅವರ ಆಗತ್ಯಗಳನ್ನು ಅಧ್ಯಯನ ಮಾಡಿ, ಅದಕ್ಕೆ ಅನುಗುಣವಾಗಿ ತಂತ್ರಗಾರಿಕೆ ರೂಪಿಸುವುದರಲ್ಲಿ ಕೂಡ ಈ ವಾರ್ ರೂಂನ ಪ್ರಮುಖ ಕೆಲಸಗಳಲ್ಲಿ ಒಂದು. ರಾಹುಲ್ ಗಾಂಧಿ ಅವರ ಭಾರತ್ ಜೋಡೋ ಯಾತ್ರೆ ವೇಳೆಯೂ ಸೆಂಥಿಲ್ ತಂಡ ಇದೇ ರೀತಿಯ ಕೆಲಸ ಮಾಡಿತ್ತು.

ಭಜರಂಗದಳ ಹಾಗೂ ಪಿಎಫ್‌ಐ ಸಹಿತ ಸಮಾಜಘಾತುಕ ಸಂಘಟನೆಗಳನ್ನು ನಿಷೇಧ ಮಾಡುವುದಾಗಿ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಹೇಳಿದೆ. ಹಳೆ ಮೈಸೂರು ಭಾಗದಿಂದ ಬಂದ ಪ್ರತಿಕ್ರಿಯೆಯನ್ನು ಆಧರಿಸಿ, ಭಜರಂಗದಳ ನಿಷೇಧದ ಪ್ರಣಾಳಿಕೆಯಲ್ಲಿ ಈ ವಿಷಯವನ್ನು ಸೇರಿಸುವಲ್ಲಿ ಸೆಂಥಿಲ್ ಅವರ ತಂಡ ಕೆಲಸ ಮಾಡಿತ್ತು. ಈ ಘೋಷಣೆಯಿಂದಾಗಿಯೇ ಶೇ.88ರಷ್ಟು ಮುಸ್ಲಿಮರು ಕಾಂಗ್ರೆಸ್ ಪರ ಮತ ಚಲಾಯಿಸಿದ್ದಾರೆ ಎನ್ನುವುದು ರಾಜಕೀಯ ಪಂಡಿತರ ತರ್ಕ. ಬಜರಂಗದಳ ನಿಷೇಧ ಘೋಷಣೆಯಿಂದಾಗಿ ಹಳೆ ಮೈಸೂರು ಭಾಗದಲ್ಲಿ ಜೆಡಿಎಸ್ ಪರ ಇದ್ದ ಮುಸ್ಲಿಂ ಮತಗಳು ಕಾಂಗ್ರೆಸ್ ಕಡೆಗೆ ವಾಲಿದವು. ಜೆಡಿಎಸ್ ಯುವ ಘಟಕದ ನಾಯಕ ನಿಖಿಲ್ ಕುಮಾರಸ್ವಾಮಿ ಸೋಲನುಭವಿಸಿದ್ದು ಇದಕ್ಕೆ ಒಂದು ಉದಾಹರಣೆ. ಭಾರತ್ ಜೋಡೋ ಯಾತ್ರೆ ವೇಳೆ ಶಿಕ್ಷಣ, ಕೃಷಿ, ಕಾರ್ಖಾನೆ ಸೇರಿ ಸಮಾಜದ ವಿವಿಧ ಕ್ಷೇತ್ರಗಳ ಜನರ ಅಭಿಪ್ರಾಯ ಪಡೆದು ಪ್ರಣಾಳಿಕೆ ರಚಿಸಲು, ಇದರಲ್ಲೂ ಸೆಂಥಿಲ್ ಅವರ ತಂಡ ಕೆಲಸ ಮಾಡಿತ್ತು.

ಮೂರನೇ ಪುಟದಿಂದ

ಸಿಎಂ ಆಯ್ಕೆ

ಸಚಿವರೂ ಆದ ಮಹಾರಾಷ್ಟ್ರ ಮಾಜಿ ಸಿಎಂ ಸುಶೀಲ್‌ಕುಮಾರ್ ಶಿಂಧೆ ಹಾಗೂ ಪಕ್ಷದ ರಾಷ್ಟ್ರೀಯ ನಾಯಕ ಜಿತೇಂದ್ರ ಸಿಂಗ್ ಮತ್ತು ದೀಪಕ್ ಬಬಾರಿಯಾ ಅವರನ್ನು ವೀಕ್ಷಕರನ್ನಾಗಿ ನೇಮಿಸಿದ್ದರು. ಈ ಮೂವರು ವೀಕ್ಷಕರು ಇಂದು ಸಂಜೆ ಬೆಂಗಳೂರಿನ ವಸಂತನಗರದಲ್ಲಿರುವ ಶಾಂಗ್ರೀಲಾ ಹೋಟೆಲ್‌ನಲ್ಲಿ ಶಾಸಕಾಂಗ ಪಕ್ಷದ ಸಭೆಯನ್ನು ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸಮ್ಮುಖ ದಲ್ಲಿ ನಡೆಸಲಾಯಿತು. ಸಭೆಯಲ್ಲಿ ಮಾಜಿ ಮುಖ್ಯ ಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವ ಕುಮಾರ್, ಮಾಜಿ ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್, ಮುಖಂಡರಾದ ಬಿ.ಕೆ.ಹರಿಪ್ರಸಾದ್, ಹೆಚ್.ಕೆ.ಪಾಟೀಲ್, ಎಂ.ಬಿ.ಪಾಟೀಲ್, ಸಲೀಂ ಅಹ ಮ್ಮದ್, ಸತೀಶ್ ಜಾರಕಿಹೊಳಿ, ರಾಮಲಿಂಗಾ ರೆಡ್ಡಿ ಮುಂತಾದವರು ವೇದಿಕೆಯಲ್ಲಿ ಇದ್ದರು.

ಸಭೆಯಲ್ಲಿ ಮೊದಲಿಗೆ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಕರ್ನಾಟಕದ ಜನತೆಗೆ, ಎಐಸಿಸಿ ಅಧ್ಯಕ್ಷ ಖರ್ಗೆ, ರಾಷ್ಟ್ರೀಯ ಮುಖಂಡರಾದ ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಹಾಗೂ ಪಕ್ಷದ ಕಾರ್ಯಕರ್ತರಿಗೆ ಧನ್ಯವಾದ ಅರ್ಪಿಸಲಾಯಿತು. ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ, ಚುನಾವಣೆಯನ್ನು ಯಾವ ರೀತಿ ಎಲ್ಲರೂ ಒಗ್ಗಟ್ಟಾಗಿ ನಡೆಸಿ ಯಶಸ್ವಿಯಾದೆವೋ ಅದೇ ರೀತಿ ಮುಖ್ಯಮಂತ್ರಿ ಆಯ್ಕೆಯೂ ಕೂಡ ಒಮ್ಮತದಿಂದಲೇ ಆಗಬೇಕು. ಆಡಳಿತ ಸುಸೂತ್ರವಾಗಿ ನಡೆಯಬೇಕು. ಮುಖ್ಯಮಂತ್ರಿಯಾಗಲು ಅರ್ಹತೆ ಇರುವವರು ಹಲವರಿದ್ದರೂ ಮುಖ್ಯಮಂತ್ರಿ ಆಯ್ಕೆ ಜವಾಬ್ದಾರಿಯನ್ನು ಪಕ್ಷದ ಹೈಕಮಾಂಡ್‌ಗೆ ಬಿಡೋಣ ಎಂದರು.

ಶಾಸಕರ ಅಭಿಪ್ರಾಯ ಸಂಗ್ರಹಿಸುವಂತೆ ಸಿದ್ದರಾಮಯ್ಯ ಹೇಳಿದರಾದರೂ, ಮಧ್ಯ ಪ್ರವೇಶಿಸಿದ ಡಿ.ಕೆ.ಶಿವಕುಮಾರ್, ಸಿಎಂ ಆಯ್ಕೆಯನ್ನು ಹೈಕಮಾಂಡ್‌ಗೇ ಬಿಡೋಣ ಎಂದು ಹೇಳಿದ ಹಿನ್ನೆಲೆಯಲ್ಲಿ ಸಿಎಂ ಆಯ್ಕೆ ನಿರ್ಧಾರವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬಿಡಲಾಯಿತು. ಅದೇ ವೇಳೆ ಶಾಸಕರು ತಮ್ಮ ಅಭಿಪ್ರಾಯಗಳನ್ನು ಲಿಖಿತವಾಗಿ ನೀಡುವಂತೆಯೂ ಅದನ್ನು ಒಗ್ಗೂಡಿಸಿ ವರದಿಯನ್ನು ಪಕ್ಷದ ಹೈಕಮಾಂಡ್‌ಗೆ ನೀಡಲಾಗುವುದೆಂದು ವೀಕ್ಷಕರು ತಿಳಿಸಿದರು. ಈ ಹಿನ್ನೆಲೆಯಲ್ಲಿ ಕೆಲ ಶಾಸಕರು ತಮ್ಮ ಅಭಿಪ್ರಾಯವನ್ನು ಲಿಖಿತವಾಗಿ ತಿಳಿಸಿದರು.

ಡಿಕೆಶಿ ಪೈಪೋಟಿ

ಮಾಜಿ ಡಿಸಿಎಂ ಡಾ.ಜಿ.ಪರಮೇಶ್ವರ್ ನಿವಾಸದಲ್ಲಿ ಶಾಸಕ ಪ್ರಿಯಾಂಕ ಖರ್ಗೆ ಸೇರಿದಂತೆ ದಲಿತ ಶಾಸಕರ ಸಭೆ ನಡೆದಿದೆ. ಇಷ್ಟಕ್ಕೆ ನಿಲ್ಲದೆ ಲಿಂಗಾಯತ ಸಮುದಾಯದವರೂ ಕೂಡ ಸಿಎಂ ಪಟ್ಟಕ್ಕೆ ಪಟ್ಟು ಹಿಡಿದಿದ್ದಾರೆ. ಈ ಸಮುದಾಯದಲ್ಲಿ ಸಿಎಂ ರೇಸ್‌ನಲ್ಲಿ ಎಂ.ಬಿ.ಪಾಟೀಲ್, ಈಶ್ವರ ಖಂಡ್ರೆ, ಎಸ್.ಎಸ್.ಮಲ್ಲಿಕಾರ್ಜುನ್ ಹೆಸರುಗಳಿದ್ದು, ಇವರು ಸಿದ್ದರಾಮಯ್ಯ ಬೆಂಬಲಿಗರು ಎಂಬುದು ವಿಶೇಷ.

ಡಿ.ಕೆ.ಶಿವಕುಮಾರ್ ಅವರನ್ನು ಸಿಎಂ ಮಾಡಬೇಕು ಎಂದು ಒಕ್ಕಲಿಗ ಮಠಾಧೀಶರು ಸಭೆ ನಡೆಸಿ ನಿರ್ಣಯ ಕೈಗೊಂಡು ಕಾಂಗ್ರೆಸ್ ಹೈಕಮಾಂಡ್‌ಗೆ ನಿರ್ಣಯ ರವಾನಿಸಿದರು. ರಾಜ್ಯ ಕುರುಬರ ಸಂಘ ಮುಖಂಡರು ಬೆಂಗಳೂರಿನ ಸಂಘದ ಕಚೇರಿಯಲ್ಲಿ ಸಭೆ ನಡೆಸಿ ಸಿದ್ದರಾಮಯ್ಯ ಅವರನ್ನು ಸಿಎಂ ಮಾಡಬೇಕೆಂದು ನಿರ್ಣಯ ಕೈಗೊಂಡಿದ್ದಾರೆ. ಕುರುಬ ಸಮುದಾಯ ಮುಖಂಡರು 80ಕ್ಕೂ ಹೆಚ್ಚು ಶಾಸಕರನ್ನು ಸಂಪರ್ಕಿಸಿ ಸಿದ್ದರಾಮಯ್ಯನವರಿಗೆ ಬೆಂಬಲ ಕೋರಿದ್ದಾರೆ ಎನ್ನಲಾಗಿದೆ.

ಮತ್ತೊಂದೆಡೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆದ ಶಾಂಗ್ರೀಲ ಹೋಟೆಲ್ ಮುಂದೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಮತ್ತು ಸಾವಿರಾರು ಬೆಂಬಲಿಗರು ಜಮಾಯಿಸಿ ತಮ್ಮ ತಮ್ಮ ನಾಯಕನ ಪರ ಘೋಷಣೆ ಕೂಗಿದರು. ಸಿದ್ದರಾಮಯ್ಯ ಬೆಂಬಲಿಗರು ಅವರ ಭಾವಚಿತ್ರವಿರುವ ಪೋಸ್ಟರ್, ಹಾಗೂ ಡಿಕೆಶಿ ಪೋಸ್ಟರ್ ಅನ್ನು ಅವರ ಬೆಂಬಲಿಗರು ಪ್ರದರ್ಶಿಸಿ ಘೋಷಣೆ ಕೂಗುತ್ತಿದ್ದರು. ಈ ಪ್ರದೇಶದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದ್ದರು.

ಪ್ರವೀಣ್ ಸೂದ್ ನೇಮಕ

ಮಾಡಿಕೊಂಡಿದ್ದರು. ಪ್ರವೀಣ್ ಸೂದ್ 2020ರ ಫೆ.1ರಂದು ಕರ್ನಾಟಕದ ಡಿಜಿ ಮತ್ತು ಐಜಿಪಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. ದೆಹಲಿಯ ಐಐಟಿ ವಿದ್ಯಾರ್ಥಿಯಾದ ಇವರು, ಕಾನೂನು ಮತ್ತು ಸುವ್ಯವಸ್ಥೆಯ ಸವಾಲುಗಳನ್ನು ನಿಭಾಯಿಸಲು ಮತ್ತು ಜನಸಾಮಾನ್ಯರಿಗೆ ಸುಲಭವಾಗಿ ಪೊಲೀಸ್ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಪೊಲೀಸ್ ತರಬೇತಿ ಕೇಂದ್ರಗಳಲ್ಲಿ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿದ್ದವರು. ಬೆಂಗಳೂರು ಸಂಚಾರ ದಟ್ಟಣೆ ತಗ್ಗಿಸಲು ತಂತ್ರಜ್ಞಾನವನ್ನು ಬಳಸಿಕೊಳ್ಳುವಲ್ಲಿ ಇವರ ಕೊಡುಗೆ ಅಪಾರ. ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಪ್ರವೀಣ್ ಸೂದ್ ಅವರು, ತಾವು ಸಿಬಿಐ ನಿರ್ದೇಶಕರಾಗಿ ಮುಂದಿನ ತಿಂಗಳು ಅಧಿಕಾರ ವಹಿಸಿಕೊಳ್ಳಲಿರುವುದಾಗಿ ತಿಳಿಸಿದರು.

ಒಕ್ಕಲಿಗ ಮಠಾಧೀಶರ ಆಗ್ರಹ

ನೋವು ಕೊಟ್ಟಷ್ಟು ಬೇರೆ ಯಾರಿಗಾದರೂ ಕೊಟ್ಟಿದ್ದರೆ ಅವರು ಭೂಮಿಯ ಮೇಲೆ ಇರುತ್ತಿರಲಿಲ್ಲ ಅನ್ನಿಸುತ್ತದೆ. ಡಿ.ಕೆ.ಶಿವಕುಮಾರ್ ಎಲ್ಲಾ ನೋವುಗಳನ್ನೂ ಉಂಡಿದ್ದಾರೆ. ಮುಖ್ಯಮಂತ್ರಿ ಸ್ಥಾನಕ್ಕೆ ಅರ್ಹರಾಗೂ ಇದ್ದಾರೆ. ಇಷ್ಟೆಲ್ಲಾ ತ್ಯಾಗ ಮಾಡಿರುವ ಅವರಿಗೆ ಯಾಕೆ ಮುಖ್ಯಮಂತ್ರಿ ಸ್ಥಾನ ಕೊಡಬಾರದು ಎಂಬುದು ನಮ್ಮ ಪ್ರಶ್ನೆ. ಡಿಕೆಶಿ ಅವರನ್ನು ಮುಖ್ಯಮಂತ್ರಿ ಮಾಡಬೇಕು. ಇದು ಈ ಸಭೆಯ ನಿರ್ಣಯ. ಈ ನಿರ್ಣಯವನ್ನು ಶಾಸಕ ಬಾಲಕೃಷ್ಣ ಅವರು ಶಾಸಕಾಂಗ ಸಭೆಯಲ್ಲಿ ತಿಳಿಸಬೇಕು ಎಂದರು.

ಕಲೆ, ಸಾಹಿತ್ಯ, ಸಂಗೀತಕ್ಕೆ ಪುನಶ್ಚೇತನ ನೀಡಿದ್ದು ಮೈಸೂರಿನ ಅರಸರು

ಸಂಗೀತಶಾಸ್ತ್ರಜ್ಞೆ ಡಾ.ಮೀರಾ ರಾಜಾರಾಂ ಪ್ರಾಣೇಶ್



ಮೈಸೂರು, ಮೇ 14(ಎಂಕೆ)– ಟಿಪ್ಪು ಸುಲ್ತಾನನ ಆಡಳಿತಾವಧಿಯಲ್ಲಿ ಪ್ರೋತ್ಸಾಹವಿಲ್ಲದೆ ಕಣ್ಮರೆಯಾಗಿದ್ದ ನಾಡಿನ ಕಲೆ, ಸಾಹಿತ್ಯ, ಸಂಗೀತಕ್ಕೆ ಪುನಶ್ಚೇತನ ನೀಡಿದ್ದು ಮೈಸೂರು ಅರಸರು ಎಂದು ಸಂಗೀತ ಶಾಸ್ತ್ರಜ್ಞೆ ಡಾ.ಮೀರಾ ರಾಜಾರಾಂ ಪ್ರಾಣೇಶ್ ಸ್ಮರಿಸಿದರು.

ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ 'ಸಂಗೀತ ಪೋಷಕರಾದ ಒಡೆಯರ್‌ಗಳು' ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಅವರು, ಟಿಪ್ಪು ಸುಲ್ತಾನನ ಕಾಲದಲ್ಲಿ ಪ್ರೋತ್ಸಾಹ ದೊರಕದ ಹಿನ್ನೆಲೆ ಅನೇಕ ಸಂಗೀತಗಾರರು ಬೇರೆ ಬೇರೆ ಕಡೆಗೆ ಹೊರಟು ಹೋದರು. ನಂತರದ ದಿನಗಳಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಲೆ, ಸಾಹಿತ್ಯ ಹಾಗೂ ಸಂಗೀತವನ್ನು ಪೋಷಣೆ ಮಾಡುವ ಮೂಲಕ ಸಂಗೀತಕ್ಕೆ ಪುನಶ್ಚೇತನ ನೀಡಿದರು ಎಂದು ತಿಳಿಸಿದರು.

ಸ್ವತಃ ಸಂಗೀತ ವಿದ್ವಾಂಸರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು, 'ಚಾಮುಂಡಿ' ಅಂಕಿತದಲ್ಲಿ ಸಂಗೀತ ಸಂಯೋಜನೆ ಮಾಡುತ್ತಿದ್ದರು. ಸಂಗೀತ ಚಾವಡಿಗಳನ್ನು ರಚಿಸುತ್ತಿದ್ದರು. ಶೃಂಗಾರದಿಂದ ಕೂಡಿರುವ ಚಾವಡಿಗಳನ್ನು ವೈರಾಗ್ಯ ಪ್ರತಿಪಾದಕವಾಗಿ ರಚಿಸುತ್ತಿದ್ದರು. ಸ್ವರದ ವಿಶಿಷ್ಟತೆ ಅರಿತು ರಾಗ ಸಂಯೋಜನೆ ಮಾಡುತ್ತಿದ್ದರು. ಅವರ ಆಲೋಚನೆ, ಆಸಕ್ತಿ ವಿಶಿಷ್ಟವಾಗಿರುತ್ತಿದ್ದವು ಎಂದು ಹೇಳಿದರು.

ಅಕ್ಬರ್ ತಲೆಮರೆಸಿಕೊಂಡು ತಾನ್‌ಸೇನ್ ಸಂಗೀತ ಕೇಳಲು ಹೋಗುತ್ತಿದ್ದಂತೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಕೂಡ ಸಾಮಾನ್ಯರಂತೆ ಸಂಗೀತ ಕಛೇರಿಗಳಿಗೆ ಭೇಟಿ ನೀಡುತ್ತಿದ್ದರು. ಬಳಿಕ ಸಂಗೀತಗಾರರಿಗೆ ಬಹುಮಾನ ನೀಡಿ ಅಭಿನಂದಿಸುತ್ತಿದ್ದರಲ್ಲದೆ ಅವರನ್ನು ಆಸ್ಥಾನ ವಿದ್ವಾಂಸರನ್ನಾಗಿ ನೇಮಿಸಿಕೊಳ್ಳುತ್ತಿದ್ದರು. ಅವರದ್ದು ಸದಾ ಸೃಜನಶೀಲ ಚಿಂತನೆಯಾಗಿತ್ತು ಎಂದು ಬಣ್ಣಿಸಿದರು.

ನಂತರ ಬಂದ 10ನೇ ಚಾಮರಾಜ ಒಡೆಯರ್ ಕಡಿಮೆ ಕಾಲಾವಧಿಯಲ್ಲಿದ್ದರೂ ಸಂಗೀತ ಕಲೆಗೆ ಹೆಚ್ಚಿನ ಆದ್ಯತೆ ನೀಡಿದರು. ಬಿಡಾರಂ ಕೃಷ್ಣ ಸೇರಿದಂತೆ ಹಲವು ವಿದ್ವಾಂಸರಿಗೆ ಆಶ್ರಯ ನೀಡಿ ಸಂಗೀತದ ಉಳಿವಿಗೆ ತಮ್ಮದೇ ಕೊಡುಗೆ ನೀಡಿದರು. ಅಂದು ಹೊರದೇಶಗಳಿಂದ ಬರುತ್ತಿದ್ದ ಸಂಗೀತಗಾರರು ನಾಡಹಬ್ಬ ದಸರಾ ಹಾಗೂ ವರ್ಧಂತಿ ಉತ್ಸವದಲ್ಲಿ ಕಾರ್ಯಕ್ರಮ ನೀಡುತ್ತಿದ್ದರು ಎಂದು ತಿಳಿಸಿದರು.

ರಾತೋರಾತ್ರಿ ಗೀತೆ ರಚನೆ: ಬ್ರಿಟಿಷರು ಮೈಸೂರು ಸಂಸ್ಥಾನಕ್ಕೆ ಅಧಿಕಾರ ಹಸ್ತಾಂತರಿಸುವಾಗ ನಿಮ್ಮ ಸಾಮ್ರಾಜ್ಯದ ಗೀತೆ(anthem) ರಚಿಸಿಕೊಳ್ಳುವಂತೆ ತಿಳಿಸಿದ ಹಿನ್ನೆಲೆ ಬಸಪ್ಪ ಶಾಸ್ತ್ರಿಗಳಿಂದ 'ಕಾಯೌ ಶ್ರೀ ಗೌರಿ' ಮೈಸೂರು ಸಾಮ್ರಾಜ್ಯದ ರಾಜ್ಯ ಗೀತೆಯನ್ನು ರಚಿಸಲಾಯಿತು. ಈ ಗೀತೆ ಇಂದಿಗೂ ಪ್ರಸಿದ್ಧಿಯನ್ನು ಪಡೆದಿದೆ ಎಂದರು.

ಸುವರ್ಣ ಯುಗ: ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲವನ್ನು ಸುವರ್ಣ ಯುಗ ಎಂದು ಕರೆಯಬಹುದು. ಸಂಗೀತದ ಎಲ್ಲಾ ವಾದ್ಯಗಳನ್ನು ನುಡಿಸುತ್ತಿದ್ದ ಅವರು, ಒಂದೇ ಒಂದು ಅಪಸ್ವರ ನುಡಿಸಿದರು ಗಮನಿಸುತ್ತಿದ್ದರು. ಆರತಿ ಸಂಪ್ರದಾಯಗಳ ಮೇಲೆ ಅಸ್ಥಾನ ವಿದ್ವಾಂಸರಿಂದ ಹಾಡುಗಳನ್ನು ರಚನೆ ಮಾಡಿಸುತ್ತಿದ್ದರು. ಅವರು ಅರ್ಧ ಗಂಟೆ ಕುಳಿತು ಸಂಗೀತ ಕೇಳಿದರೆಂದರೆ ಆ ಸಂಗೀತ ಕಾರ್ಯಕ್ರಮ ಯಶಸ್ವಿಯಾದಂತೆಯೇ ಎನ್ನುವಂತಿತ್ತು. ಹಾಗೆಯೇ ನಾಟಕ ಸೇರಿದಂತೆ ಸಂಗೀತದ ಎಲ್ಲಾ ಕಲಾಪ್ರಕಾರಗಳ ಪೋಷಣೆ ಮಾಡಿದರು ಎಂದು ತಿಳಿಸಿದರು. ಇದಕ್ಕೂ ಮುನ್ನ ಉಪನ್ಯಾಸ ಕಾರ್ಯಕ್ರಮವನ್ನು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಉದ್ಘಾಟಿಸಿದರು.

ರಂಗಭೂಮಿ ಕೇವಲ ಮನರಂಜನೆಗೆ ಸೀಮಿತವಲ್ಲ

ಹಿರಿಯ ರಂಗಕರ್ಮಿ ಪ್ರೊ.ಎಸ್.ಆರ್.ರಮೇಶ್ ಅಭಿಮತ



ಮೈಸೂರು,ಮೇ 14(ಪಿಎಂ)– ರಂಗಭೂಮಿ ಕೇವಲ ಮನರಂಜನೆಗೆ ಇರುವ ಏಕೈಕ ಸಾಧನವಲ್ಲ. ಅದೊಂದು ಸಮಾಜದ ಪ್ರತಿಬಿಂಬ. ಮುಖ್ಯವಾಗಿ ಈ ಅಂಶವನ್ನು ಒಬ್ಬ ನಟ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ ಎಂದು ಹಿರಿಯ ರಂಗಕರ್ಮಿ ಪ್ರೊ.ಎಸ್.ಆರ್.ರಮೇಶ್ ತಿಳಿಸಿದರು.

ಮೈಸೂರಿನ ಕೃಷ್ಣಮೂರ್ತಿಪುರಂನ ನಮನ ಕಲಾ ಮಂಟಪದಲ್ಲಿ ಪರಿವರ್ತನ ರಂಗ ಸಮಾಜ ಮತ್ತು ನಮನ ಕಲಾ ವೇದಿಕೆ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿರುವ 10 ದಿನಗಳ ಅಭಿನಯ ಕಾರ್ಯಾಗಾರಕ್ಕೆ ಭಾನುವಾರ ಚಾಲನೆ ನೀಡಿ, ಅವರು ಮಾತನಾಡಿದರು.

ರಂಗಭೂಮಿ ಕೇವಲ ಮನರಂಜನೆಗೆ ಸೀಮಿತವಲ್ಲ. ಸಮಾಜಕ್ಕೆ ಮಾಹಿತಿ ನೀಡುವುದು, ಅರಿವು ಮೂಡಿಸುವುದೂ ಇಲ್ಲಿ ಮುಖ್ಯವಾಗುತ್ತದೆ. ಹಾಗಾಗಿ ಸಮಾಜದ ಪ್ರತಿಬಿಂಬವಾಗಿ ರಂಗಭೂಮಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಸಮಾಜದ ವರ್ತನೆಗಳನ್ನು ರಂಗಭೂಮಿಗೆ ಅಳವಡಿಸಿ, ಸಮಾಜಕ್ಕೆ ಪ್ರತಿಬಿಂಬವಾಗಿ ನೀಡುವ ಕೆಲಸ ಮಾಡಬೇಕಾಗುತ್ತದೆ. ಈ ಉದ್ದೇಶ ಮತ್ತು ಜವಾಬ್ದಾರಿಯನ್ನು ಒಬ್ಬ ನಟ ಅರಿತುಕೊಳ್ಳುವುದು ಮುಖ್ಯ ಎಂದು ಹೇಳಿದರು.


ಅಭಿನಯಕ್ಕೆ ಸಂಭಾಷಣೆ ಮತ್ತು ದೈಹಿಕ ಭಾಷೆ ಅತ್ಯಂತ ಮುಖ್ಯ. ಹೀಗಾಗಿ ಕಾರ್ಯಾಗಾರದಲ್ಲಿ ಈ ಎರಡು ಅಂಶಗಳನ್ನು ಹೆಚ್ಚು ಕೇಂದ್ರೀಕರಿಸಲಾಗುವುದು. ರಂಗಭೂಮಿಯ ಕನಿಷ್ಠ ಜ್ಞಾನ ಇದ್ದರೆ ಅಭಿನಯ ಸುಲಭವಾಗಲಿದೆ. ಹಾಗಾಗಿ ಅಭಿನಯದ ಜೊತೆಗೆ ಅಭಿನಯದ ಸುತ್ತ ಇರುವ ಹತ್ತು ಹಲವು ಅಂಶಗಳನ್ನು ನಟನಾದವನು ಅರಿತುಕೊಳ್ಳಬೇಕು. ಇತ್ತೀಚೆಗೆ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ. ಇದಕ್ಕೆ ಕಾರಣ ರಂಗಭೂಮಿ ಬಗೆಗಿನ ಉತ್ಸಾಹ ಇರಬೇಕು ಎಂದು ತಿಳಿಸಿದರು.

ಹಿರಿಯ ರಂಗಕರ್ಮಿ ಅನುರಾಧ ನಂದಕುಮಾರ್ ಮಾತನಾಡಿ, ಮಾನವನಲ್ಲಿ ಸಂಹವನ ಪ್ರಕ್ರಿಯೆ ಹೆಚ್ಚು ಮಹತ್ವದ್ದು. ಇದು ಶೇ.7ರಷ್ಟು ಮಾತ್ರವೇ ಮೌಖಿಕವಾಗಿರುತ್ತದೆ. ಉಳಿದಂತೆ ಶೇ.93ರಷ್ಟು ದೈಹಿಕ ಭಾಷೆಯೇ ಸಂವಹನ ನಡೆಸುವಲ್ಲಿ ಹೆಚ್ಚಿನ ಪಾತ್ರ ವಹಿಸುತ್ತದೆ ಎಂದೇ ಹೇಳಲಾಗಿದೆ. ಈ ಅಂಶವನ್ನು ನಟರಾದವರು ಪರಿಗಣಿಸಿದರೆ ಅಭಿಯನ ಪರಿಪಕ್ವವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಪ್ರತಿದಿನ ಸಂಜೆ 6ರಿಂದ ರಾತ್ರಿ 8.30ರವರೆಗೆ ಕಾರ್ಯಾಗಾರ ನಡೆಯಲಿದ್ದು, 10 ಮಂದಿ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದಾರೆ. ಕಾರ್ಯಾಗಾರದ ನಿರ್ದೇಶಕಿ ಆರ್.ಯಶಸ್ವಿನಿ, ಪರಿವರ್ತನ ರಂಗ ಸಮಾಜದ ಕಾರ್ಯದರ್ಶಿ ಮಾಧವ ಖರೆ ಮತ್ತಿತರರು ಹಾಜರಿದ್ದರು.

ರೈತ ವಿರೋಧಿ ಬಿಜೆಪಿಗೆ ಈ ಚುನಾವಣೆ ತಕ್ಕ ಪಾಠ

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ



ಮೈಸೂರು,ಮೇ 14(ಪಿಎಂ)– ರೈತ ವಿರೋಧಿ ಬಿಜೆಪಿಗೆ ಈ ಚುನಾವಣೆಯಲ್ಲಿ ರಾಜ್ಯದ ರೈತರು ಸೇರಿದಂತೆ ಜನತೆ ತಕ್ಕ ಪಾಠ ಕಲಿಸಿದ್ದಾರೆ ಎಂದು ಅಭಿಪ್ರಾಯಪಟ್ಟಿರುವ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಅಧಿಕಾರದ ಚುಕ್ಕಾಣಿ ಹಿಡಿಯುತ್ತಿರುವ ಕಾಂಗ್ರೆಸ್ ಮಾತಿನಂತೆ ನಡೆದುಕೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ರೈತ ವಿರೋಧಿ ಪಕ್ಷಗಳು ಗುಟಾರ ಸೇರುತ್ತವೆ ಎಂಬುದಕ್ಕೆ ಈ ಚುನಾವಣೆ ಸಾಕ್ಷಿ. ರೈತ ವಿರೋಧಿ ಕಾನೂನುಗಳನ್ನು ಜಾರಿಗೊಳಿಸಿದ ಬಿಜೆಪಿ ಬುಡವನ್ನು ರಾಜ್ಯದ ರೈತರು ಸೇರಿದಂತೆ ಮತದಾರರು ಕಿತ್ತು ಹಾಕಿದ್ದಾರೆ. 1980ರಲ್ಲಿ ರೈತರ ಮೇಲೆ ಗುಂಡು ಹಾರಿಸಿದ್ದ ಗುಂಡೂರಾವ್ ಸರ್ಕಾರವನ್ನು ರಾಜ್ಯದ ರೈತರು ಅಂದು ಕಿತ್ತು ಹಾಕಿದ್ದರು ಎಂಬುದನ್ನು ನೆನಪಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಸಂವಿಧಾನವನ್ನು ಗಾಳಿಗೆ ತೂರಿ, ತನ್ನದೇ ಸಿದ್ಧಾಂತ ಹೇರಲು ಹೊರಟ ಬಿಜೆಪಿ, ಆರ್‌ಎಸ್‌ಎಸ್‌ಗೆ ರಾಜ್ಯದ ಮತದಾರರು ತಕ್ಕ ಪಾಠ ಕಲಿಸಿ, ಪ್ರಜಾಪ್ರಭುತ್ವ ಉಳಿಸಿದ್ದಾರೆ. ರಾಜ್ಯದ ಮತದಾರರ ಈ ತೀರ್ಮಾನಕ್ಕೆ ರೈತ ಸಂಘ ಗೌರವಪೂರ್ವಕ ಕೃತಜ್ಞತೆ ಸಲ್ಲಿಸುತ್ತದೆ. ಕಳೆದ ರಾಜ್ಯ ಬಿಜೆಪಿ ಸರ್ಕಾರದ ರೈತ ವಿರೋಧಿ ಭೂ ಸುಧಾರಣೆ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ, ಜಾನುವಾರು ಹತ್ಯೆ ನಿಷೇಧ ಮತ್ತು ಸಂರಕ್ಷಣಾ ಕಾಯ್ದೆಯನ್ನು ಕಾಂಗ್ರೆಸ್ ಸರ್ಕಾರ ತಕ್ಷಣವೇ ವಾಪಸ್ ಪಡೆದು ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ಜನತೆ ಆಶಯದಂತೆ ದರ್ಶನ್ ಪುಟ್ಟಣ್ಣಯ್ಯ ನಡೆ: ಮೇಲುಕೋಟೆ ಕ್ಷೇತ್ರದಲ್ಲಿ ದರ್ಶನ್ ಪುಟ್ಟಣ್ಣಯ್ಯರನ್ನು ಗೆಲ್ಲಿಸಿ ರಾಜ್ಯದ ರೈತ ಸಮುದಾಯಕ್ಕೆ ಕ್ಷೇತ್ರದ ಮತದಾರರ ಕೊಡುಗೆ ನೀಡಿದ್ದಾರೆ. ಇದಕ್ಕಾಗಿ ಸರ್ವೋದಯ ಕರ್ನಾಟಕ ಪಕ್ಷದ ಅಧ್ಯಕ್ಷ ಚಾಮರಸ ಮಾಲೀ ಪಾಟೀಲ್, ಪ್ರಧಾನ ಕಾರ್ಯದರ್ಶಿ ಪ್ರಸನ್ನ ಎನ್.ಗೌಡ ಕ್ಷೇತ್ರದ ಮತದಾರರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಶಾಸಕರಾಗಿ ಆಯ್ಕೆಯಾದ ದರ್ಶನ್ ಪುಟ್ಟಣ್ಣಯ್ಯ ಜನತೆಯ ಆಶಯಗಳಿಗೆ ಚ್ಯುತಿ ಬಾರದಂತೆ ನಡೆದುಕೊಳ್ಳಲಿದ್ದಾರೆ ಎಂದು ಅವರು ಭರವಸೆ ನೀಡಿದ್ದಾರೆಂದು ಬಡಗಲಪುರ ನಾಗೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾಸ್ಪತ್ರೆಯಲ್ಲಿ ಶುಶ್ರೂಷಕರ ದಿನಾಚರಣೆ



ಮೈಸೂರು, ಮೇ 14(ಎಂಟಿವೈ)– ವಿಶ್ವ ಶುಶ್ರೂಷಕರ ದಿನದ ಅಂಗವಾಗಿ ಮೈಸೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶುಶ್ರೂಷಕರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಮೈಸೂರಿನ ಕೆ.ಆರ್.ರಸ್ತೆಯಲ್ಲಿರುವ ಜಿಲ್ಲಾ ಆಸ್ಪತ್ರೆ ಸಭಾಂಗಣದಲ್ಲಿ ಫ್ಲಾರೆನ್ಸ್ ನೈಟಿಂಗೇಲ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಶುಶ್ರೂಷಕರ ದಿನವನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಶುಶ್ರೂಷಕರ ಸಂಘದ ಮಾಜಿ ಅಧ್ಯಕ್ಷೆ ಶಿವಮ್ಮ, ಹಾಲಿ ಅಧ್ಯಕ್ಷೆ ಹೇಮಲತಾ ಅವರನ್ನು ಸನ್ಮಾನಿಸಲಾಯಿತು. ಅಲ್ಲದೆ, ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುವ 35 ಶುಶ್ರೂಷಕರಿಗೆ ಫ್ಲಾರೆನ್ಸ್ ನೈಟಿಂಗೇಲ್ ಭಾವಚಿತ್ರವುಳ್ಳ ಸ್ಮರಣಿಕೆ ನೀಡಿ ಪ್ರೋತ್ಸಾಹಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಅಮರನಾಥ್ ಮಾತನಾಡಿ, ಪ್ರತಿಯೊಂದು ಆಸ್ಪತ್ರೆಯಲ್ಲೂ ಶುಶ್ರೂಷಕರ ಪಾತ್ರ ಬಹುಮುಖ್ಯವಾಗಿದೆ. ರೋಗಿಗಳನ್ನು ಗುಣಪಡಿಸಲು ವೈದ್ಯರೊಂದಿಗೆ ದಾದಿಯರ ಸೇವೆಯೂ ಮುಖ್ಯವಾಗಿರುತ್ತದೆ. ವೈದ್ಯರು ಆಸ್ಪತ್ರೆಯ ಮೆದುಳಿನಂತೆ ಇದ್ದರೆ, ಶುಶ್ರೂಷಕರು ಆಸ್ಪತ್ರೆಯ ಹೃದಯ ಹಾಗೂ ದೇಹವಿದಂತೆ. ಆಸ್ಪತ್ರೆಯಲ್ಲಿ ದಾಖಲಾಗಿರುವ ರೋಗಿಗಳ ಸೇವೆಯಲ್ಲಿ ದಿನದ 24 ಗಂಟೆಗಳಲ್ಲೂ ನಿರತರಾಗಿರುತ್ತಾರೆ. ವೈಯಕ್ತಿಕವಾಗಿ ಸಾಕಷ್ಟು ನೋವುಗಳಿದ್ದರೂ ಸೇವೆ ವೇಳೆ ಅವುಗಳನ್ನೆಲ್ಲಾ ಬದಿಗೊತ್ತಿ ಹಸನ್ಮುಖಿಗಳಾಗಿರುವ ಮೂಲಕ ದಾದಿಯರು ಸೇವೆ ಸಲ್ಲಿಸುತ್ತಾರೆ. ಶುಶ್ರೂಷಕರಿಲ್ಲದಿದ್ದರೆ ಆರೋಗ್ಯ ಕ್ಷೇತ್ರದಲ್ಲಿ ಪ್ರಗತಿಸಾಧ್ಯವಿಲ್ಲ. ಶುಶ್ರೂಷಕರ ರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯವೂ ಆಗಿದೆ. ದಾದಿಯರ ಮಹತ್ವ ಸಾರುವುದಕ್ಕಾಗಿ ಪ್ರತಿವರ್ಷ ವಿಶ್ವ ಶುಶ್ರೂಷಕರ ದಿನವನ್ನು ಆಚರಿಸಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಸಹಾಯಕ ಆಡಳಿತಾಧಿಕಾರಿ ಡಾ.ಮಹದೇಶ್ವರ ಪ್ರಸಾದ್, ಸಹಾಯಕ ಆಡಳಿತಾಧಿಕಾರಿ ದಾಸನಾಯಕ್, ಪ್ರಭಾರ ಶುಶ್ರೂಷ ಅಧೀಕ್ಷಕರು ಸೆಲೀನ, ಆಸ್ಪತ್ರೆಯ ವೈದ್ಯಾಧಿಕಾರಿಗಳು, ಶುಶ್ರೂಷಾಧಿಕಾರಿಗಳು, ಹಾಗೂ ಎಲ್ಲಾ ಸಿಬ್ಬಂದಿಗಳು ಹಾಜರಿದ್ದರು.

ವಚನ ಸಾಹಿತ್ಯ, ಕರ್ನಾಟಕ ಸಂಗೀತ ಕಾರ್ಯಕ್ರಮ



ಮೈಸೂರು, ಮೇ 14(ಸಿಎನ್)–ಸುಂದರಾಚಾರ್ ಹಾಗೂ ಸರಸ್ವತಿ ರಾವ್ ಸ್ಮರಣಾರ್ಥ ಕನ್ನಡ ವಚನ ಸಾಹಿತ್ಯ ಹಾಗೂ ಸಂಗೀತ ಕಾರ್ಯಕ್ರಮ, ಮಾಗ್ಸೆಸ್ಸೆ ಪ್ರಶಸ್ತಿ ಪುರಸ್ಕೃತ ವಿದ್ವಾನ್ ಹೆಚ್.ಟಿ.ಕೃಷ್ಣ ಅವರ ನೇತೃತ್ವದಲ್ಲಿ ಯಶಸ್ವಿಯಾಗಿ ನೆರವೇರಿತು.

ನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ರಾಮಾಗೋವಿಂದ ಕಲಾಮಂದಿರದಲ್ಲಿ ಗಾನಭಾರತಿ ಸಂಸ್ಥೆಯಿಂದ ವಚನ ಸಾಹಿತ್ಯ ಮತ್ತು ಕರ್ನಾಟಕ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿತ್ತು. ಟಿ.ಎಂ.ಕೃಷ್ಣ ಅವರು ಶರಣೆ ಆಯ್ದಕ್ಕಿ ಮಲ್ಲಮ್ಮರ 'ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ' ವಚನ ಸೇರಿ ಬಸವಣ್ಣ, ಅಲ್ಲಮಪ್ರಭು, ನಾಡಿನ ಹಲವು ಶರಣರ ವಚನಗಳನ್ನು ಕರ್ನಾಟಿಕ್ ಸಂಗೀತ ಶೈಲಿಯಲ್ಲಿ ಹಾಡುವ ಮೂಲಕ ನೆರೆದಿದ್ದ ಪ್ರೇಕ್ಷಕರನ್ನು ರಂಜಿಸಿದರು.

ಬಸವಣ್ಣರ ಅದ್ಭುತ ವಚನಗಳಲ್ಲಿ ಒಂದಾದ 'ಉಳ್ಳವರು ಶಿವಾಲಯ ಮಾಡಿಹರು ನಾನೇನು ಮಾಡುವೆ ಬಡವನಯ್ಯ' ಅಲ್ಲಮಪ್ರಭುಗಳ 'ತತ್ವವ ನುಡಿವ ಹಿರಿಯರೆಲ್ಲರೂ ತುತ್ತ ಅನ್ನವನ್ನಿಕ್ಕುವರು ಬಾಗಿಲಲ್ಲಿ' ವಚನ ಹಾಡುತ್ತಿದ್ದಂತೆ ಎಲ್ಲೆಡೆ ಕರತಾಡನ ಮೊಳಗಿದವು. ಸಂಗೀತ ಕಾರ್ಯಕ್ರಮದಲ್ಲಿ ಟಿ.ಎಂ.ಕೃಷ್ಣ, ಪಿಟೀಲು ವಾದಕ ಹೆಚ್.ಎಂ.ಭಾಸ್ಕರ್, ಮೃದಂಗ ವಾದಕ ವಿದ್ವಾನ್ ಅರುಣ್‌ಪ್ರಕಾಶ್, ಘಟ ಸಹಕಾರ ಗಿರಿಧರ್ ರೂಪ, ತಂಬೂರಿ ವಾದನ ಡಾ.ವೇದ, ರಜತ್, ವಿದ್ವಾನ್ ಜಗನ್ನಾಥ್ ಶೆಣೈ, ಹಿರಿಯ ವಿದ್ವಾಂಸರು ಸೇರಿದಂತೆ ಮತ್ತಿತರು ಭಾಗಿಯಾಗಿದ್ದರು.



ಮೈಸೂರಿನ ಕೃಷ್ಣರಾಜ ಕ್ಷೇತ್ರದ ನೂತನ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷರಾದ ನಂ.ಶ್ರೀಕಂಠ ಕುಮಾರ್, ಶಂಕರನಾರಾಯಣ, ಕೆ.ಆರ್.ಯೋಗಾನರಸಿಂಹನ್, ಡಾ.ಲಕ್ಷ್ಮೀದೇವಿ, ಸೌಭಾಗ್ಯ ಮೂರ್ತಿ ಅಭಿನಂದಿಸಿದರು.

ಸಕ್ಕರೆ ಕಾರ್ಖಾನೆ ಮಾಲೀಕರಾಗಿರುವ ಶಾಸಕರಿಗೆ ಸಂಪುಟದಲ್ಲಿ ಸ್ಥಾನ ಬೇಡ

ರೈತ ಸಂಘಟನೆಗಳ ಒಕ್ಕೂಟ ಒತ್ತಾಯ



ಮೈಸೂರು,ಮೇ 14(ಜಿಎ)–ನೂತನವಾಗಿ ಶಾಸಕರಾಗಿರುವ ಸಕ್ಕರೆ ಕಾರ್ಖಾನೆ ಮಾಲೀಕರನ್ನು ಸಂಪುಟಕ್ಕೆ ಸೇರಿಸಿಕೊಳ್ಳಬೇಡಿ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಒತ್ತಾಯಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ 30 ಲಕ್ಷ ಕಬ್ಬು ಬೆಳೆಗಾರ ರೈತರ ಹಿತದೃಷ್ಟಿಯಿಂದ ನೂತನ ಸರ್ಕಾರದಲ್ಲಿ ಸಕ್ಕರೆ ಕಾರ್ಖಾನೆ ಮಾಲೀಕರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಬಾರದು. ಸರ್ಕಾರದಲ್ಲಿ ಕಾನೂನು ಮಾಡಿ ಆದೇಶ ಜಾರಿಗೊಳಿಸಿ ಅದನ್ನು ಉಲ್ಲಂಘಿಸುವುದು ಸಕ್ಕರೆ ಕಾರ್ಖಾನೆ ಮಾಲೀಕರು ಮಾಡುತ್ತಿರುವುದರಿಂದ ರಾಜ್ಯದಲ್ಲಿ ಕಬ್ಬು ಬೆಳೆಗಾರರಿಗೆ ನ್ಯಾಯ ಸಿಗುತ್ತಿಲ್ಲ ಈ ಬಗ್ಗೆ ನೂತನ ಸರ್ಕಾರದ ಮುಖ್ಯಮಂತ್ರಿಯವರು ಗಂಭೀರ ಚಿಂತನೆ ನಡೆಸಬೇಕು ಎಂದರು.

ಚುನಾವಣಾ ಪೂರ್ವದಲ್ಲಿಯೂ ರೈತರ ಪ್ರಣಾಳಿಕೆಯಲ್ಲಿ ರಾಜಕೀಯ ಪಕ್ಷಗಳಿಗೆ ಈ ಬಗ್ಗೆ ಗಮನ ಸೆಳೆದಿದ್ದೇವೆ. ಈ ಸಂಬಂಧ ರಾಜ್ಯಪಾಲರ ಭೇಟಿಗೆ ಅವಕಾಶ ಕೇಳಿದ್ದು, ನೂತನ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಲು ಸದ್ಯದಲ್ಲಿಯೇ ರಾಜ್ಯಪಾಲರನ್ನು ಭೇಟಿ ಮಾಡಿ ಅವರಿಗೆ ಈ ಬಗ್ಗೆ ಮನವರಿಕೆ ಮಾಡಿಕೊಡುತ್ತೇವೆ ಎಂದು ತಿಳಿಸಿದರು.

ಕೃಷಿ ಪಂಪ್ ಸೆಟ್‌ಗಳಿಗೆ ರೈತರು ಆಧಾರ್ ಲಿಂಕ್ ಮಾಡುವುದು ಕಡ್ಡಾಯ ಮಾಡುವುದನ್ನು ವಿರೋಧಿಸುತ್ತೇವೆ. ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಮತ್ತು ಸಬ್ಸಿಡಿ ನಿಲ್ಲಿಸುವ ಕುತಂತ್ರ ಮಾಡಲು ಈಗಾಗಲೇ ಕೇಂದ್ರ ಸರ್ಕಾರ ಯತ್ನಿಸಿ, ಖಾಸಗೀಕರಣದ ಬಾಗಿಲು ತೆರೆದಿದೆ. ರೈತರು ಆಧಾರ್ ಲಿಂಕ್ ಮಾಡುವುದಿಲ್ಲ. ನೂತನ ಸರ್ಕಾರ ಇದಕ್ಕೆ ತಡೆಹಾಕಬೇಕು ಎಂದು ಆಗ್ರಹಿಸಿದರು.

ಬೆಳಗಾವಿ ವಿಧಾನಸಭಾ ಅಧಿವೇಶನದಲ್ಲಿ ಸಿದ್ದರಾಮಯ್ಯ ನಮದು ಕಬ್ಬಿಗೆ ಎಫ್‌ಆರ್‌ಪಿ ಹೆಚ್ಚುವರಿ ದರ ನಿಗದಿಗೆ ಒತ್ತಾಯಿಸಿದ್ದರು. ರೈತರು 39 ದಿನಗಳ ಹೋರಾಟ ಮಾಡಿದ ಪರಿಣಾಮ ಪ್ರತಿ ಟನ್‌ಗೆ 150 ರೂ. ನಿಗದಿಪಡಿಸಿತು. ಆದರೆ, ಅದಕ್ಕೂ ನ್ಯಾಯಾಲಯದಲ್ಲಿ ತಡೆಯಾಜ್ಞೆ ತರಲಾಗಿದೆ ನೂತನ ಸರ್ಕಾರ ತಕ್ಷಣವೇ ತಡೆಯಾಜ್ಞೆ ತೆರವುಗೊಳಿಸಿ ಕಬ್ಬು ಬೆಳೆಗಾರರಿಗೆ ಕಾರ್ಖಾನೆಗಳಿಂದ ಹಣ ಕೊಡಿಸಬೇಕು ಎಂದರು.

ಹಿಂದಿನ ಸರ್ಕಾರ ಜಾರಿಗೊಳಿಸಿದ ಎಪಿಎಂಸಿ ಕಾಯ್ದೆ ತಿದ್ದುಪಡಿ, ಭೂ ಸುಧಾರಣೆ ಕಾಯ್ದೆ ತಿದ್ದುಪಡಿ ಮಸೂದೆ ರದ್ದು ಮಾಡಬೇಕು. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತ್ರಿಗೊಳಿಸಿ ನೂತನ ಮುಖ್ಯಮಂತ್ರಿಗಳು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಈ ಬಾರಿ ನಡೆದ ಚುನಾವಣೆಯಲ್ಲಿ ಭಾರೀ ಅಕ್ರಮ ವ್ಯವಹಾರಗಳು ನಡೆದಿದ್ದು, ಚುನಾವಣಾ ಆಯೋಗವು ನಿಯಂತ್ರಣ ಮಾಡುವಲ್ಲಿ ವಿಫಲವಾಗಿದೆ. ಚುನಾವಣೆ ನಂತರವೂ ಬೆಟ್ಟಿಂಗ್ ಭರಾಟೆ ಸಾಮಾಜಿಕ ಜಾಲತಾಣದಲ್ಲಿ ಬಹಿರಂಗವಾಗಿದೆ. ಅಂಥವರ ವಿರುದ್ಧ ಕಠಿಣ ಕ್ರಮ ಕೈಗೊಂಡಿಲ್ಲ. ಇದು ಮುಂದಿನ ಚುನಾವಣೆಗಳಲ್ಲಿ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದ್ದು, ಚುನಾವಣಾ ಆಯೋಗವೇ ಬಹಿರಂಗ ಜೂಜಿಗೆ ಅವಕಾಶ ಮಾಡಿಕೊಟ್ಟಂತಾಗಿ ಹಳ್ಳಿಗಳಲ್ಲಿ ದ್ವೇಷದ ವಿಷ ಬಿತ್ತಲು ಕಾರಣವಾಗುತ್ತದೆ. ಪ್ರಜಾಪ್ರಭುತ್ವ ಚುನಾವಣೆ ದುರ್ಬಲವಾದರೆ ಮತ್ತಷ್ಟು ಸಮಾಜಘಾತಕ ಶಕ್ತಿಗಳು ಚುನಾವಣೆಗೆ ನಿಲ್ಲುವಂತಾಗುತ್ತದೆ ಈ ಬಗ್ಗೆ ಆಯೋಗ ಕಠಿಣ ಚಿಂತನೆ ನಡೆಸಬೇಕು ಎಂದರು.

ಮೇಲುಕೋಟೆ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಬೆಂಬಲಿತ ರೈತ ಸಂಘದ ದರ್ಶನ್ ಪುಟ್ಟಣ್ಣಯ್ಯ ರೈತರ ಬೆಂಬಲದಿಂದ ಆಯ್ಕೆಯಾಗಿರುವುದಕ್ಕೆ ಅಭಿನಂದನೆ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ಮೈಸೂರು ಜಿಲ್ಲೆ ಮಹಿಳಾ ಅಧ್ಯಕ್ಷೆ ಕಮಲಮ್ಮ, ತಾಲೂಕು ಅಧ್ಯಕ್ಷ ಲಕ್ಷ್ಮೀಪುರ ವೆಂಕಟೇಶ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಸೋಮವಾರ 15 ಮೇ 2023

ಸಿದ್ದರಾಮಯ್ಯ, ಮಹದೇವಪ್ಪ ಗೆಲುವು ಸಾಧಿಸಿದ ಹಿನ್ನೆಲೆ

ಹೆಳವರಹುಂಡಿ, ತಿ.ನರಸೀಪುರದಲ್ಲಿ ವಿಜಯೋತ್ಸವ





ತಿ.ನರಸೀಪುರ ಮೇ 14– ವರುಣದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ತಿ.ನರಸೀಪುರದಲ್ಲಿ ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ವರುಣ ಕ್ಷೇತ್ರ ವ್ಯಾಪ್ತಿಯ ಹೆಳವರಹುಂಡಿಯಲ್ಲಿ ಹಾಗೂ ತಿ.ನರಸೀಪುರದ ವಿಜಯ್ ಭಗವಾನ್ ಚಿತ್ರಮಂದಿರದ ಬಳಿ ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ಹೆಳವರಹುಂಡಿ: ಗ್ರಾಮದಲ್ಲಿ ಸಂಭ್ರಮಾಚರಣೆ ನಡೆಸಿ ಮಾತನಾಡಿದ ಕಾಂಗ್ರೆಸ್ ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್, ಸಿದ್ದರಾಮಯ್ಯ ಅವರನ್ನು ಸೋಲಿಸಲು ಬಿಜೆಪಿ ನಡೆಸಿದ ಷಡ್ಯಂತ್ರವನ್ನು ಜನತೆ ಬೆಂಬಲಿಸದೇ ಜನೋಪಯೋಗಿ ಕಾರ್ಯಕ್ರಮದ ಮೂಲಕ ಜನತೆಯ ಮನದಲ್ಲಿ ನೆಲೆಯೂರಿದ್ದ ಸಿದ್ದರಾಮಯ್ಯರಿಗೆ ಜನಾದೇಶ ನೀಡಿದ್ದಾರೆ. ಹಣದಿಂದ ಜನರ ಮನಸ್ಸನ್ನು ಗೆಲ್ಲಲು ಸಾಧ್ಯವಿಲ್ಲ ಎಂಬುದನ್ನು ಕ್ಷೇತ್ರದ ಜನತೆ ತೋರಿಸಿ ಕೊಟ್ಟಿದ್ದಾರೆ. ಸಿದ್ದರಾಮಯ್ಯ ಅವರು ಎಲ್ಲಾ ವರ್ಗಗಳ ನಾಯಕರಾಗಿದ್ದು, ಮುಖ್ಯಮಂತ್ರಿಯಾಗಿ ರಾಜ್ಯವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ಮುಖಂಡರಾದ ಕೆ.ಗಣೇಶ್, ಎಂ.ಕೆ.ಸಹದೇವ್, ಫ್ರಾನ್ಸಿ ವಿಷಕಂಠ, ನಾಗರಾಜು, ಮಿಥುನ್, ಅಮಾಸೆಗೌಡ, ರಘು, ಚೌಹಳ್ಳಿ ಮಲ್ಲೇಶ್, ನಾಗರಾಜು ಮತ್ತಿತರರಿದ್ದರು.

ತಿ.ನರಸೀಪುರ: ಪಟ್ಟಣದ ಭಗವಾನ್ ಚಿತ್ರಮಂದಿರದ ಬಳಿ ಕಾಂಗ್ರೆಸ್ ಯುವ ಮುಖಂಡ ಮಣಿಕಂಠ ನೇತೃತ್ವದಲ್ಲಿ ಜಮಾಯಿಸಿದ ಕಾರ್ಯಕರ್ತರು ವಾಲ್ಮೀಕಿ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು.

ಪಟ್ಟಣದ 20ನೇ ವಾರ್ಡ್ ಕಾಂಗ್ರೆಸ್ ಯುವ ಮುಖಂಡ ಮಣಿಕಂಠ ಮಾತನಾಡಿ, ಕ್ಷೇತ್ರದ ಜನತೆ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸುವ ಮೂಲಕ ಪ್ರಜಾಪ್ರಭುತ್ವದ ಆಶಯಕ್ಕೆ ಪೂರಕವಾಗಿದ್ದಾರೆ. ಡಾ.ಹೆಚ್.ಸಿ. ಮಹದೇವಪ್ಪರವರು ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡುವ ಧೀಮಂತ ನಾಯಕರಾಗಿದ್ದು, ಅವರನ್ನು ಗೆಲ್ಲಿಸುವ ಮೂಲಕ ಜನರು ಉತ್ತಮ ನಿರ್ಧಾರ ತೆಗೆದುಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವ ಆರಂಭವಾಗುವುದರಲ್ಲಿ ಸಂಶಯವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ರಾಜ್ಯದ ಮುಖ್ಯಮಂತ್ರಿಯಾಗಲಿದ್ದು, ಮಹದೇವಪ್ಪ ಅವರು ಪ್ರಭಾವಿ ಖಾತೆ ಸಚಿವರಾಗುವುದರಿಂದ ಕ್ಷೇತ್ರ ಹಿಂದೆಂದೂ ಕಾಣದಂತ ಅಭಿವೃದ್ಧಿ ಕಾಣಲಿದೆ ಎಂದರು. ಕಾಂಗ್ರೆಸ್ ಪಕ್ಷ ಗೆಲ್ಲಿಸುವ ಮೂಲಕ ಕ್ಷೇತ್ರದ ಜನತೆ ಸರಿಯಾದ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು.

ಈ ವೇಳೆ ಪುರಸಭಾ ಸದಸ್ಯ ಬಾದಾಮಿ ಮಂಜು, ಸಂದೇಶ ಸ್ವಾಮಿನಾಥ್, ಎಲ್.ಎಸ್. ಸುಹಾಸ್ ನಾಯಕ, ಮಾಜಿ ಅಧ್ಯಕ್ಷ ಕನಕ ಪಾಪು, ತರಕಾರಿ ದಿಲೀಪ್, ಅನುಪ್ ಗೌಡ, ಗುರುಮಲ್ಲಪ್ಪ, ಸಂತೋಷ್, ಉಮೇಶ್, ಅಂದಾನಿ ಗೌಡ, ಮೊಟ್ಟೆ ಮಹೇಶ್, ಮಾದೇಶ, ನಾಗ, ರೆಡ್ಡಿ ರಾಮ ಇನ್ನಿತರರಿದ್ದರು.

ಭಾರೀ ಮಳೆಗೆ ಬಾಳೆ, ತೆಂಗಿನ ಫಸಲು ನಾಶ



ಹೆಚ್.ಡಿ.ಕೋಟೆ, ಮೇ 14– ಭಾರೀ ಗಾಳಿ ಮಳೆಗೆ ಬಾಳೆ ಹಾಗೂ ತೆಂಗಿನ ಫಸಲು ನಾಶವಾಗಿರುವ ಘಟನೆ ಶನಿವಾರ ಸಂಜೆ ತಾಲೂಕಿನ ಭೀಮನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರೈತ ಪಂಡಿತರಾಧ್ಯ ಅವರಿಗೆ ಸೇರಿದ ಬಾಳೆ ಹಾಗೂ ತೆಂಗಿನ ಫಸಲು ನಾಶವಾಗಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ.

ಲಕ್ಷಾಂತರ ರೂ. ಸಾಲ ಮಾಡಿ ಬೆಳೆಯಲಾಗಿದ್ದ ಬೆಳೆಗಳು ಭಾರೀ ಗಾಳಿ ಮಳೆಗೆ ಸಿಲುಕಿ ನಾಶವಾಗಿದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕಾಗಮಿಸಿ ಪರಿಶೀಲಿಸಿ ಸೂಕ್ತ ಪರಿಹಾರ ದೊರಕಿಸಿಕೊಡಬೇಕು ಎಂದು ಗ್ರಾಮದ ಮುಖಂಡ ಮಹೇಶ್ ಒತ್ತಾಯಿಸಿದ್ದಾರೆ.

ಜನರ ನಂಬಿಕೆ, ವಿಶ್ವಾಸದಿಂದ ಮುಕ್ತನಾಗಿದ್ದೇನೆ



ಹುಣಸೂರು, ಮೇ 14– ತಾಲೂಕಿನ ಜನರ ನಂಬಿಕೆ, ವಿಶ್ವಾಸದಿಂದ ಮುಕ್ತನಾಗಿದ್ದೇನೆ ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣೆಯಲ್ಲಿ ನನ್ನನ್ನು ಬೆಂಬಲಿಸಿದ ಕಾರ್ಯಕರ್ತರು, ಮುಖಂಡರು ಹಾಗೂ ಹಿತೈಷಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ನೂತನ ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಶುಭಾಶಯ ಕೋರಿದ ಅವರು, ಪಕ್ಷದ ಕಾರ್ಯಕರ್ತರು ಟೀಕೆ ಟಿಪ್ಪಣಿಗಳಿಗೆ ಕಿವಿಗೊಡದೇ ತಾಳ್ಮೆಯಿಂದ ಇರಬೇಕು ಎಂದು ಮನವಿ ಮಾಡಿದರು. ರಾಜ್ಯದ ಜನತೆ ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವಾದ ಮಾಡಿದ್ದಾರೆ. ನಾನು ಶಾಸಕನಾಗಿ ಆಯ್ಕೆಯಾಗಿದ್ದರೇ ಈ ಬಾರಿ ಸಚಿವನಾಗುತ್ತಿದ್ದೆ. ಆದರೆ ನನಗೆ ಸಚಿವನಾಗುವ ಭಾಗ್ಯವಿಲ್ಲ. ನನ್ನ ಸೋಲಿನ ಸಂಪೂರ್ಣ ಜವಾಬ್ದಾರಿಯನ್ನು ನಾನೇ ಹೊರುತ್ತೇನೆ ಎಂದರು.



ವರುಣ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಸಿಎಂ ಸಿದ್ದರಾಮಯ್ಯ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ತಿ.ನರಸೀಪುರದ ವಿದ್ಯೋದಯ ಕಾಲೇಜು ಸರ್ಕಲ್‌ನಲ್ಲಿ ಸಿಹಿ ಹಂಚಿ ಸಂಭ್ರಮಾಚರಣೆ ಮಾಡಿದರು. ಈ ವೇಳೆ ಒಕ್ಕಲಿಗರ ಯುವ ಸೇನೆ ಮುಖಂಡ ಸಂದೇಶ್ ಸ್ವಾಮಿ, ರಮೇಶ್, ವಿಷಕಂಠ, ಮುರಳಿ, ಯೋಗೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಮಹೇಶ್, ಉಮೇಶ್, ಚಂದ್ರಶೇಖರ್, ಡಿ.ಆರ್.ಮೂರ್ತಿ, ತಾಲೂಕು ಕುರುಬರ ಸಂಘದ ನಿರ್ದೇಶಕ ಸಂಜು ಮತ್ತಿತರಿದ್ದರು.

ಕೋಟೆಯಲ್ಲಿ ಅನಿಲ್, ನಂಜನಗೂಡಲ್ಲಿ ದರ್ಶನ್ ಗೆಲುವು

ಸರಗೂರಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಂದ ವಿಜಯೋತ್ಸವ

ಸರಗೂರು, ಮೇ 14– ಹೆಚ್.ಡಿ.ಕೋಟೆಯಲ್ಲಿ ಅನಿಲ್ ಚಿಕ್ಕಮಾದು ಹಾಗೂ ನಂಜನಗೂಡಲ್ಲಿ ದರ್ಶನ್ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆದಿಕರ್ನಾಟಕ ಸಮಾಜದ ಕಾಂಗ್ರೆಸ್ ಕಾರ್ಯಕರ್ತರು ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರಿಗೆ ಗೌರವ ಸಲ್ಲಿಸುವ ಮೂಲಕ ವಿಜಯೋತ್ಸವ ಆಚರಿಸಿದರು.



ಅಂಬೇಡ್ಕರ್ ಟ್ರಸ್ಟ್ ಮಾಜಿ ಅಧ್ಯಕ್ಷ ಭೀಮಯ್ಯ ಮಾತನಾಡಿ, ದಿ.ಆರ್.ಧ್ರುವನಾರಾಯಣ್ ಸರ್ವ ಸಮುದಾಯದ ಅಭಿವೃದ್ಧಿಗೆ ಒತ್ತು ನೀಡಿದವರು. ಬಿಜೆಪಿ ದುರಾಡಳಿತದಿಂದ ಬೇಸತ್ತ ಜನತೆ ಕಾಂಗ್ರೆಸ್‌ಗೆ ಬಹುಮತ ನೀಡಿ ಇತಿಹಾಸ ಸೃಷ್ಟಿಸಿದ್ದಾರೆ. ಅನಿಲ್ ಚಿಕ್ಕಮಾದು ಅವರು 2ನೇ ಬಾರಿಗೆ ಶಾಸಕರಾಗಿದ್ದು, ಸಚಿವರಾಗಿ ನಮ್ಮ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಸಹಕಾರಿಯಾಗಲಿದೆ ಎಂದರು.

ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ಇದೀಯಪ್ಪ ಮಾತನಾಡಿ, ಕ್ಷೇತ್ರಕ್ಕೆ ಆರ್.ಧ್ರುವನಾರಾಯಣ್ ಕೊಡುಗೆ ಅಪಾರ. ತಂದೆ ತಾಯಿ ಕಳೆದುಕೊಂಡ ದರ್ಶನ್ ಧ್ರುವನಾರಾಯಣ್ ಅವರಿಗೆ ಕಾರ್ಯಕರ್ತರೇ ತಂದೆ. ಕಾಂಗ್ರೆಸ್ ಪಕ್ಷವೇ ತಾಯಿ ಇದ್ದಂತೆ. ತಮ್ಮ ತಂದೆಯಂತೆ ಜನ ಸೇವೆ ಮಾಡಲು ಎಲ್ಲರೂ ದರ್ಶನ್ ಅವರಿಗೆ ಸಹಕಾರ ನೀಡಬೇಕು. ದರ್ಶನ್‌ಗೆ ಆಶೀರ್ವಾದ ಮಾಡಿ ಹೆಚ್ಚು ಮತ ನೀಡಿದ ನಂಜನಗೂಡು ಕ್ಷೇತ್ರದ ಜನತೆಗೆ ಅಭಿನಂದನೆ ಸಲ್ಲಿಸಿದರು.

ಇದೇ ವೇಳೇ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಅಂಬೇಡ್ಕರ್ ಟ್ರಸ್ಟ್ ಮಾಜಿ ಅಧ್ಯಕ್ಷ ಶಿವನಂಜ, ಗೌರವಾಧ್ಯಕ್ಷ ರಂಗಸ್ವಾಮಿ, ಲೋಡರ್ಸ್ ಸಂಘದ ಮಾಜಿ ಅಧ್ಯಕ್ಷ ಗೋಪಾಲಯ್ಯ, ಗಾರೆ ಸಂಘದ ಮಾಜಿ ಅಧ್ಯಕ್ಷ ಮಹದೇವ, ಕಾಂಗ್ರೆಸ್ ಕಾರ್ಯಕರ್ತರಾದ ಗೋಪಾಲಯ್ಯ, ಬಿಲ್ಲೇಶ್, ಶಿವಶಂಕರನ್, ಭೋಗಪ್ಪ, ಗೋಪಾಲ್, ಕೂಸಣ್ಣ, ಸಣ್ಣಸ್ವಾಮಿ, ಜವರಯ್ಯ, ಮಲ್ಲಿಕಾರ್ಜನ,ಕೃಷ್ಣ, ಶೇಷ, ದಾಸಿ ಇತರರಿದ್ದರು.

ಶ್ರೇಯಸ್‌ಗೌಡಗೆ ಅತ್ಯುನ್ನತ ಶ್ರೇಣಿ

ತಿ.ನರಸೀಪುರ, ಮೇ 14– ತಾಲೂಕಿನ



ಟಿ.ದೊಡ್ಡಪುರ ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕ ಟಿ.ಎನ್.ನಾಗೇಂದ್ರ ಅವರ ಪುತ್ರ ಹಾಗೂ ಕೆ.ಎಂ.ದೊಡ್ಡಿಯ ಹನುಮಂತನಗರದ ಭಾರತಿ ಪ್ರೌಢಶಾಲೆ ವಿದ್ಯಾರ್ಥಿ ಟಿ.ಎನ್.ಶ್ರೇಯಸ್‌ಗೌಡ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 594 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ.

ವ್ಯಕ್ತಿ ನಾಪತ್ತೆ

ಮೈಸೂರು, ಮೇ 14– ಮೈಸೂರಿನ ಸುಭಾಷ್‌ನಗರದ ನಿವಾಸಿ ಸಿ.ಸೋಮಶೇಖರ್(38) ನಾಪತ್ತೆಯಾಗಿದ್ದಾರೆ.

ಈ ಬಗ್ಗೆ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ನಾಪತ್ತೆ ದೂರು ದಾಖಲಿಸಿರುವ ಸೋಮಶೇಖರ್ ತಂದೆ ಚಿಕ್ಕಲಿಂಗಯ್ಯ, ಅವಿವಾಹಿತ ಸೋಮಶೇಖರ್‌ಗೆ ಮಾನಸಿಕ ಸಮಸ್ಯೆಯಿರುವ ಕಾರಣ ಆತನನ್ನು ನಾನು ಹಾಗೂ ನನ್ನ ಪತ್ನಿಯೇ ನೋಡಿಕೊಳ್ಳುತ್ತಿದ್ದೇವೆ. ಏಪ್ರಿಲ್ 4ರಂದು ಹೊರಹೋದವನು ಈವರೆಗೂ ವಾಪಸ್ಸಾಗಿಲ್ಲ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಮಾಹಿತಿ ಸಿಕ್ಕವರು ಎನ್.ಆರ್. ಠಾಣೆ (0821–2418312) ಅಥವಾ ನಗರ ಕಂಟ್ರೋಲ್(2418339) ರೂಂ ಸಂಪರ್ಕಿಸುವಂತೆ ಪೊಲೀಸರು ಮನವಿ ಮಾಡಿದ್ದಾರೆ.



ಹುಣಸೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಗಾವಡಗೆರೆ ಹೋಬಳಿಯ ಗಾವಡಗೆರೆ, ಜಾಬಗೆರೆ, ಹಿರೀಕ್ಯಾತನಹಳ್ಳಿ, ಮರೂರು, ಹರವೆ, ಕಟ್ಟೆ ಮಳಲವಾಡಿ ಸೇರಿದಂತೆ ಇನ್ನಿತರ ಗ್ರಾಮಗಳಲ್ಲಿ ಜೆಡಿಎಸ್ ಕಾರ್ಯಕರ್ತರು, ಅಭಿಮಾನಿಗಳು ಸಂಭ್ರಮಾಚರಣೆ ನಡೆಸಿದರು. ಈ ವೇಳೆ ಮುಖಂಡರಾದ ಹೊನ್ನಪ್ಪರಾವ್ ಕಾಳಿಂಗೆ, ನಾಗರಾಜ ರಾವ್ ಮಶಾಲೆ, ಹರೀಶ್, ತಿಮ್ಮನಾಯಕ, ಗಣೇಶ್, ಮಹದೇವ, ಚಂದ್ರ ನಾಯಕ ಇನ್ನಿತರರಿದ್ದರು.



ಹೆಚ್.ಡಿ.ಕೋಟೆ ಕ್ಷೇತ್ರದ ಶಾಸಕರಾಗಿ 2ನೇ ಬಾರಿಗೆ ಆಯ್ಕೆಯಾದ ಅನಿಲ್ ಚಿಕ್ಕಮಾದು ಅವರು ಚುನಾವಣಾಧಿಕಾರಿ ಕುಮುದಾ ಶರತ್ ಅವರಿಂದ ಪ್ರಮಾಣ ಪತ್ರ ಪಡೆದರು. ಈ ವೇಳೆ ಮೈಮುಲ್ ನಿರ್ದೇಶಕ ಕೆ.ಈರೇಗೌಡ, ಸತೀಶ್‌ಗೌಡ, ರವಿ, ನಾಗರಾಜು, ಪ್ರದೀಪ್, ರಾಜನಾಯಕ, ಜೈರಾಮ್ ಇತರರಿದ್ದರು.

ಸೋಲಿನಿಂದ ಧೃತಿಗೆಡುವ ಅಗತ್ಯವಿಲ್ಲ: ಹರ್ಷವರ್ಧನ್

ನಂಜನಗೂಡು, ಮೇ 14– ಚುನಾವಣಾ ಸೋಲಿನಿಂದ ಬಿಜೆಪಿ ಕಾರ್ಯಕರ್ತರು ಧೃತಿಗೆಡುವ ಅಗತ್ಯವಿಲ್ಲ. ಪಕ್ಷವನ್ನು ತಳಮಟ್ಟದಿಂದ ಮತ್ತಷ್ಟು ಸಂಘಟಿಸಿ ಮುಂಬರುವ ಜಿಲ್ಲಾ ಹಾಗೂ ತಾಪಂ, ಲೋಕಸಭಾ ಚುನಾವಣೆಯನ್ನು ಸಮರ್ಥವಾಗಿ ಎದುರಿಸಲು ಸನ್ನದ್ಧರಾಗಬೇಕು ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಭಾನುವಾರ ಕಾರ್ಯಕರ್ತರನ್ನು ಭೇಟಿ ಮಾಡಿ ಚುನಾವಣಾ ಸೋಲಿನ ಬಗ್ಗೆ ಪರಾಮರ್ಶೆ ನಡೆಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಡೀ ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳ ಬಗ್ಗೆ ಶ್ವೇತಪತ್ರ ಹೊರಡಿಸಿ ಚುನಾವಣೆ ಎದುರಿಸಿದ ಏಕೈಕ ಶಾಸಕ ನಾನು. ನನ್ನ 823 ಕೋಟಿ ರೂ.ಗಳ ಅಭಿವೃದ್ಧಿ ಕಾರ್ಯ ನೋಡಿ ಮತದಾರರು ಕೈ ಹಿಡಿಯಲಿಲ್ಲ. ಪ್ರತಿಸ್ಪರ್ಧಿ ಮೇಲಿದ್ದ ಅನುಕಂಪ ಹಾಗೂ ಜೆಡಿಎಸ್ ಬೆಂಬಲದಿಂದಾಗಿ ಕಾಂಗ್ರೆಸ್ ಗೆಲುವು ಸಾಧಿಸಿದೆ. ಹಾಗಂತ ಸೋಲಿನಿಂದ ಕಾರ್ಯಕರ್ತರು ಧೃತಿಗೆಡುವ ಅಗತ್ಯವಿಲ್ಲ. ಸೋಲನ್ನೇ ಸವಾಲಾಗಿ ಸ್ವೀಕರಿಸಿ ಮುಂಬರುವ ಚುನಾವಣೆಗಳನ್ನು ಎದುರಿಸಲು ಪಕ್ಷ ಸಂಘಟಿಸೋಣ. ನಿಮ್ಮೊಂದಿಗೆ ನಾನು ಸದಾ ಇರುತ್ತೇನೆ ಎಂದು ವಾಗ್ದಾನ ನೀಡಿದರು.

ಇಡೀ ರಾಜ್ಯದಲ್ಲೇ ಬಿಜೆಪಿಯ ದೊಡ್ಡದೊಡ್ಡ ನಾಯಕರು ಪರಾಭವಗೊಂಡಿದ್ದಾರೆ. ನಾವು ಈ ರೀತಿಯ ಫಲಿತಾಂಶವನ್ನು ನಿರೀಕ್ಷೆ ಮಾಡಿರಲಿಲ್ಲ. ಬಸವರಾಜ ಬೊಮ್ಮಾಯಿ ಸರ್ಕಾರ ಮಂಡಿಸಿದ ಬಜೆಟ್ ಯೋಜನೆಗಳನ್ನು ಜನರಿಗೆ ತಲುಪಿಸಿ ಮತ ಸೆಳೆಯುವಲ್ಲಿ ನಾವು ವಿಫಲರಾಗಿದ್ದೇವೆ. ಕೇಂದ್ರ ಸರ್ಕಾರದ ಬೆಲೆ ಏರಿಕೆ, ಸಿಲಿಂಡರ್



ಏರಿಕೆ, ಜಿಎಸ್‌ಟಿ ತೆರಿಗೆಯಿಂದ ಮಧ್ಯಮ ಜನರ ಆಕ್ರೋಶಕ್ಕೆ ಕಾರಣವಾಗಿದೆ. ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಕಾರ್ಡ್‌ಗೆ ಮತದಾರರು ಮಾರು ಹೋಗಿದ್ದಾರೆ. ಇದೀಗ ಕಾಂಗ್ರೆಸ್ ಪೂರ್ಣ ಬಹುಮತದ ಸರ್ಕಾರ ರಚಿಸಲು ಅವಕಾಶ ದೊರೆತಿದೆ. ಗ್ಯಾರಂಟಿ ಕಾರ್ಡ್ ಯೋಜನೆಗಳನ್ನು ಪ್ರತಿಯೊಬ್ಬ ಫಲಾನುಭವಿಗಳು ತಲುಪಿಸಲು ಕಾಂಗ್ರೆಸ್ ಸರ್ಕಾರ ಮುಂದಾಗಲಿ. ನಾವು ಕೂಡ ಅವರೊಂದಿಗೆ ಕೈಜೋಡಿಸಿ ಜನರ ನೆರವಿಗೆ ನಿಲ್ಲುತ್ತೇವೆ ಎಂದರು.

ಇನ್ನು ಬಿಜೆಪಿ ರಾಜ್ಯದಲ್ಲಿ ಸಂಪೂರ್ಣ ಹಿನ್ನಡೆ ಅನುಭವಿಸಲು ನಮ್ಮ ಕೆಲವು ತಪ್ಪು ನಿರ್ಧಾರ ಕೂಡ ಕಾರಣ. ಬಿ.ಎಸ್.ಯಡಿಯೂರಪ್ಪ ಅವರನ್ನು ಅವಧಿ ಮುಗಿಯುವರೆಗೂ ಮುಖ್ಯಮಂತ್ರಿಯಾಗಿ ಮುಂದುವರೆಸಿದ್ದರೆ ಈ ರೀತಿ ಹಿನ್ನಡೆ ಅನುಭವಿಸುತ್ತಿರಲಿಲ್ಲ ಎಂದರು.

ಕ್ಷೇತ್ರದ ಮತದಾರರ ತೀರ್ಪನ್ನು ನಾನು ಸ್ವಾಗತಿಸುತ್ತೇನೆ. ಸೋಲಿನ ಸಂಪೂರ್ಣ ಹೊಣೆಯನ್ನು ನಾನೇ ಹೊರುವೆ. ಮುಂದಿನ ದಿನಗಳಲ್ಲಿ ಬಿಜೆಪಿಗೆ ಉತ್ತಮ ಭವಿಷ್ಯವಿದೆ. ಪ್ರಧಾನಿ ಮೋದಿಯಂತಹ ಸಮರ್ಥ ನಾಯಕ ನಮ್ಮ ಬೆನ್ನಿಗಿದ್ದಾರೆ. ಹಾಗಾಗಿ ಕಾರ್ಯಕರ್ತರು ಆತಂಕ ಪಡುವ ಅಗತ್ಯವಿಲ್ಲ ಎಂದು ಹೇಳಿದರು.

ಚುನಾವಣಾ ಪ್ರಚಾರ ವೇಳೆ ಸಿದ್ದರಾಮಯ್ಯ ಸದನದಲ್ಲಿ ಒಮ್ಮೆಯೂ ಹರ್ಷವರ್ಧನ್ ಪ್ರಶ್ನೆ ಕೇಳಿದ್ದನ್ನು ನೋಡಿಲ್ಲ ಎಂದಿದ್ದಾರೆ. ನಾನು ಶಾಸಕನಾಗಿದ್ದಾಗ ನಡೆದ 165 ದಿನಗಳ ಸದನದಲ್ಲಿ ನಾನು 161 ದಿನ ಹಾಜರಾಗಿದ್ದೇನೆ. ಇನ್ನು ಕ್ಷೇತ್ರದ ಬಗ್ಗೆ ಸದನದಲ್ಲಿ ಎತ್ತಿರುವ ಪ್ರಶ್ನೆಗಳ ಬಗ್ಗೆ ವಿಧಾನಸೌಧದಲ್ಲೇ ದಾಖಲೆ ಸಿಗಲಿದೆ. ಇದನ್ನು ಒಮ್ಮೆ ಪರಿಶೀಲಿಸಿಕೊಳ್ಳಲಿ ಎಂದು ಟಾಂಗ್ ನೀಡಿದರು.

ಕ್ಷೇತ್ರಕ್ಕೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದೇನೆ. ಇನ್ನು ಹಲವು ಯೋಜನೆಗಳು ಕಾರ್ಯಗತಗೊಳ್ಳುವ ಹಂತದಲ್ಲಿವೆ. ಅವುಗಳೆಲ್ಲವನ್ನೂ ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ನೂತನ ಶಾಸಕರು ಮುಂದಾಗಲಿ. ನುಗು ಏತ ನೀರಾವರಿ ಯೋಜನೆ ಪ್ರಗತಿಯಲ್ಲಿದ್ದು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿ ರೈತರ ನೆರವಿಗೆ ನಿಲ್ಲಲಿ. ಶ್ರೀಕಂಠೇಶ್ವರ ಸ್ವಾಮಿ ಬೆಳ್ಳಿರಥ ನಿರ್ಮಾಣ ಹಂತದಲ್ಲಿದೆ. 75 ಕೊಠಡಿಗಳ ಅತಿಥಿಗೃಹ ನಿರ್ಮಾಣಕ್ಕೆ ಎಲ್ಲಾ ಅನುಮೋದನೆ ದೊರೆತಿದ್ದು, ಕಾಮಗಾರಿ ಕೈಗೆತ್ತುಕೊಳ್ಳಲಿ. ಹೀಗೆ ನನ್ನ ಅವಧಿಯಲ್ಲಿ ಜಾರಿ ಹಂತದಲ್ಲಿರುವ ಯೋಜನೆಗಳೆಲ್ಲವನ್ನೂ ಕಾರ್ಯಗತಗೊಳಿಸುವ ಮೂಲಕ ಜನರಿಗೆ ನೆರವಾಗಲಿ. ನಮ್ಮ ಸಂಪೂರ್ಣ ಸಹಕಾರವಿರಲಿದೆ ಎಂದು ಹರ್ಷವರ್ಧನ್ ಹೇಳಿದರು.

ಈ ವೇಳೆ ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ರಾಜ್ಯ ಮುಖಂಡ ಸುಬ್ಬಣ್ಣ, ಜಿಪಂ ಮಾಜಿ ಸದಸ್ಯರಾದ ಸಿ.ಚಿಕ್ಕರಂಗನಾಯಕ, ಎಸ್.ಎಂ.ಕೆಂಪಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಕೆಂಡಗಣ್ಣಪ್ಪ, ಪರಶಿವಮೂರ್ತಿ, ತಾಪಂ ಮಾಜಿ ಸದಸ್ಯ ಶಿವಣ್ಣ, ಮುಖಂಡರಾದ ಸೋಮಣ್ಣ, ಸಿದ್ದರಾಜು, ಶ್ರೀನಿವಾಸರೆಡ್ಡಿ ಸೇರಿದಂತೆ ಹಲವರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಗಾರ್ಡಿಯನ್ಸ್ ಆಫ್ ಗ್ಯಾಲಕ್ಸಿ ವಾಲ್ಯೂಂ 3 (3ಡಿ)(ಇಂ): ಬೆ.10.10ಕ್ಕೆ, ಮ.1.10ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.55ಕ್ಕೆ.

ಸ್ಕ್ರೀನ್ 2 ರಾಘವೇಂದ್ರ ಸ್ಟೋರ್ಸ್ (ಕ): ಬೆ.11.05ಕ್ಕೆ, ರಾ.7.35ಕ್ಕೆ, ಪೊನ್ನಿಯಿನ್ ಸೆಲ್ವನ್ –2 (ತ): ಮ.1.15ಕ್ಕೆ, ಸಂ.4.25ಕ್ಕೆ, ಪಚುವುಮ್ ಅತ್ಭುತ ವಿಲಕ್ಕುಮ್ (ಮ): ರಾ.9.55ಕ್ಕೆ.

ಸ್ಕ್ರೀನ್ 3 ಇವಿಲ್ ಡೆಡ್ ರೈಸ್ (ಇಂ): ಬೆ.11.20ಕ್ಕೆ, ರಾಮಬಾಣಂ (ತೆ): ಮ.1.30ಕ್ಕೆ, ರಾ.9.55ಕ್ಕೆ, ಉಗ್ರಂ (ತೆ): ಸಂ.4.20ಕ್ಕೆ, ಪೊನ್ನಿಯಿನ್ ಸೆಲ್ವನ್ –2(ತ): ಸಂ.6.45ಕ್ಕೆ.

ಸ್ಕ್ರೀನ್ 4 2018 ಎವರಿವೊನ್ ಇಸ್ ಎ ಹೀರೋ (ಮ): ಬೆ.11ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ಮ.1.55ಕ್ಕೆ, ರಾ.10ಕ್ಕೆ, ದಿ ಕೇರಳ ಸ್ಟೋರಿ (ಹಿಂ): ಸಂ.4.15ಕ್ಕೆ, ರಾ.7.15ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1 ಗುರುದೇವ್ ಹೊಯ್ಸಳ (ಕ): ಬೆ.10.20ಕ್ಕೆ, ವೀರಂ (ಕ): ಮ.1.05ಕ್ಕೆ, ರಾ.7.15ಕ್ಕೆ, ರಾವಣಾಸುರ (ತೆ): ಸಂ.4.20ಕ್ಕೆ, ರಾ.10.30ಕ್ಕೆ.

ಸ್ಕ್ರೀನ್ 2 ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಬೆ.10.25ಕ್ಕೆ, ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಮ.12.45ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾಮಾಚಾರಿ 2.0(ಕ): ಮ.2.55ಕ್ಕೆ, ದಸರಾ (ತೆ): ರಾ.10ಕ್ಕೆ.

ಸ್ಕ್ರೀನ್ 3 ವೀರಂ (ಕ): ಬೆ.10.10ಕ್ಕೆ, ರಾವಣಾಸುರ (ತೆ): ಮ.1.25ಕ್ಕೆ, ಗುರುದೇವ ಹೊಯ್ಸಳ (ಕ): ಸಂ.4.20ಕ್ಕೆ, ರಾ.9.50ಕ್ಕೆ, ನಮ್ ನಾಣಿ ಮದುವೆ ಪ್ರಸಂಗ (ಕ): ರಾ.7.05ಕ್ಕೆ.

ಸ್ಕ್ರೀನ್ 4 ಪ್ರವೀಣ (ಕ): ಬೆ.11.10ಕ್ಕೆ, ಗುರುದೇವ ಹೊಯ್ಸಳ (ಕ): ಮ.1.45ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.4.30ಕ್ಕೆ, ರಾ.10.20ಕ್ಕೆ, ಪೆಂಟಗನ್ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139


ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಠಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಠಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಚಾಂದಿನಿ ಬಾರ್ (ಕ) 2 ಪ್ರದರ್ಶನಗಳು, ವಿರೂಪಾಕ್ಷ (ತೆ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಘವೇಂದ್ರ ಸ್ಟೋರ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಛತ್ರಪತಿ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಿರೂಪಾಕ್ಷ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಕಸ್ಟಡಿ (ತೆ)	4 ಪ್ರದರ್ಶನಗಳು
ರಾಜ್‌ಕಮಲ್	
ಕೇರಳ ಸ್ಟೋರಿ (ಹಿ)	4 ಪ್ರದರ್ಶನಗಳು
ಸಂಗಂ	
ರಾಮಬಾಣಂ (ತೆ)	4 ಪ್ರದರ್ಶನಗಳು
ಲಿಡೋ	
ಪಿಎಸ್–2 (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ವಿರೂಪಾಕ್ಷ (ತೆ)	4 ಪ್ರದರ್ಶನಗಳು
ಪ್ರಭಾ	
ಹೊಯ್ಸಳ(ಕ)	4 ಪ್ರದರ್ಶನಗಳು

ಆರ್‌ಸಿಬಿ, ಕೆಕೆಆರ್‌ಗೆ ಭರ್ಜರಿ ಜಯ



ಜೈಪುರ, ಚೆನ್ನೈ, ಮೇ 14– ಭಾನುವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು, ರಾತ್ರಿ ನಡೆದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಕೋಲ್ಕತ್ತಾ ನೈಟ್ ರೈಡರ್ಸ್ ಜಯ ಸಾಧಿಸಿದೆ.

ಆರ್‌ಸಿಬಿಗೆ ಜಯ: ಇಲ್ಲಿನ ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 171ರನ್ ಗಳಿಸಿತು. ತಂಡದ ಪರ ವಿರಾಟ್ ಕೊಹ್ಲಿ 18, ಡುಪ್ಲೆಸಿಸ್ 55, ಮ್ಯಾಕ್ಸ್‌ವೆಲ್ 54, ಅನುಜ್ ರಾವತ್ 29ರನ್ ಗಳಿಸಿತು. ರಾಜಸ್ಥಾನ್ ಪರ ಆಡಂ ಜಂಪಾ, ಕೆ.ಎಂ.ಆಸೀಫ್ ತಲಾ 2, ಸಂದೀಪ್ ಶರ್ಮಾ 1 ವಿಕೆಟ್ ಪಡೆದರು.

172 ರನ್ ಗೆಲುವಿನ ಗುರಿ ಬೆನ್ನತ್ತಿದ ರಾಜಸ್ಥಾನ್ ಕೇವಲ 10.3 ಓವರ್‌ಗಳಲ್ಲಿ 59ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಶಿಮ್ರಾನ್ ಹೆಟ್ಮೆಯರ್ 35, ಜೋ ರೂಟ್ 10 ರನ್ ಗಳಿಸಿದರು. ಆರ್‌ಸಿಬಿ ಪರ ವೇಯ್ನ್ ಪರ್ನೆಲ್ 3, ಬ್ರೆಸ್‌ವೆಲ್, ಕರಣ್ ಶರ್ಮಾ ತಲಾ 2, ಗ್ಲೇನ್ ಮ್ಯಾಕ್ಸ್‌ವೆಲ್, ಮೊಹಮ್ಮದ್ ಸಿರಾಜ್ ತಲಾ ಒಂದೊಂದು ವಿಕೆಟ್ ಪಡೆದರು. ವೇಯ್ನ್ ಪರ್ನೆಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಕೋಲ್ಕತ್ತಾಗೆ ಗೆಲುವು: ಇಲ್ಲಿನ ಎಂ.ಎ. ಚಿದಂಬರಂ ಮೈದಾನದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 144 ರನ್ ಗಳಿಸಿತು. ತಂಡದ ಪರ ಋತುರಾಜ್ ಗಾಯಕ್ವಾಡ್ 17, ಡ್ವೇನ್ ಕಾನ್ವೆ 30, ಅಜಿಂಕ್ಯಾರಹಾನೆ 16, ಶಿವಂ ದುಬೆ 48, ರವೀಂದ್ರ ಜಡೇಜಾ 20 ರನ್ ಗಳಿಸಿದರು. ಕೆಕೆಆರ್ ಪರ ಸುನೀಲ್ ನರೇನ್, ವರುಣ್ ಚಕ್ರವರ್ತಿ ತಲಾ 2, ವೈಭವ್ ಅರೋರ, ಶಾರ್ದೂಲ್ ಠಾಕೂರ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

145ರನ್ ಗೆಲುವಿನ ಗುರಿ ಬೆನ್ನತ್ತಿದ ಕೆಕೆಆರ್ 18.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 147ರನ್ ಗಳಿಸುವ ಮೂಲಕ ಗೆಲುವಿನ ನಗೆ ಬೀರಿತು. ತಂಡದ ಪರ ನಿತೀಶ್ ರಾಣಾ 57, ರಿಂಕು ಸಿಂಗ್ 54, ಜೇಸನ್ ರಾಯ್ 12 ರನ್ ಗಳಿಸಿದರು. ಸಿಎಸ್‌ಕೆ ಪರ ದೀಪಕ್ ಚಹರ್ 3 ವಿಕೆಟ್ ಪಡೆದರು. ರಿಂಕು ಸಿಂಗ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಬಿಜೆಪಿ ಕೋರ್ ಕಮಿಟಿ ಸಭೆ ಕರೆದು ಪಕ್ಷದ ಸೋಲಿನ ಬಗ್ಗೆ ಆತ್ಮಾವಲೋಕನ

ಪ್ರಹ್ಲಾದ್ ಜೋಷಿ

ಹುಬ್ಬಳ್ಳಿ, ಮೇ 14– ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಈ ಬಾರಿ ಪಕ್ಷದ ಸೋಲನ್ನು ವಿನಮ್ರತೆಯಿಂದ ಒಪ್ಪಿಕೊಂಡಿರುವ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಕಾಂಗ್ರೆಸ್ ಪಕ್ಷವು ಜನರಿಗೆ ನೀಡಿದ ಎಲ್ಲಾ ಭರವಸೆಗಳನ್ನು ಈಡೇರಿಸುತ್ತದೆ ಎಂದು ಬಿಜೆಪಿ ಆಶಿಸುತ್ತಿದೆ ಎಂದು ಹೇಳಿದರು.

ರಾಜ್ಯದಲ್ಲಿ ನೂತನ ಸರ್ಕಾರ ರಚನೆಯಾಗಲಿದ್ದು, ಅದರ ಸರ್ವಾಂಗೀಣ ಅಭಿವೃದ್ಧಿಗೆ ಕೇಂದ್ರ ಸರ್ಕಾರ ನಿಕಟವಾಗಿ ಸಹಕಾರ ನೀಡಲಿದೆ ಎಂದರು. ಬಿಜೆಪಿಯ ಕೋರ್ ಕಮಿಟಿಯು ಪಕ್ಷಕ್ಕೆ ಎಲ್ಲಿ ತಪ್ಪಾಗಿದೆ ಮತ್ತು ಅದರ ತಂತ್ರವು ಹೇಗೆ ವಿಫಲವಾಗಿದೆ ಎಂಬುದನ್ನು ವಿಶ್ಲೇಷಿಸಲು ಸಭೆ ನಡೆಸಲಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಆತ್ಮಾವಲೋಕನದ ನಂತರ ಪಕ್ಷವನ್ನು ಪುನರ್ ಸಂಘಟಿಸಿ ತಳಹದಿಯನ್ನು ಮತ್ತಷ್ಟು ಬಲಪಡಿಸಲು ಕ್ರಮ ಕೈಗೊಳ್ಳಲಾಗುವುದು. ಪಕ್ಷದ ಸೋಲಿಗೆ ಆಡಳಿತ ವಿರೋಧಿ ಅಲೆ ಒಂದು ಕಾರಣವಾಗಿರಬಹುದು ಎಂದು ಹೇಳಿದ ಕೇಂದ್ರ ಸಚಿವರು, ಹಿನ್ನಡೆಗೆ ಇತರ ಕಾರಣಗಳು ಕೋರ್ ಕಮಿಟಿ ಸಭೆಯ ನಂತರವೇ ತಿಳಿಯಲಿದೆ ಎಂದು ಹೇಳಿದರು.





ಗೌರವಾನ್ವಿತ 6ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಹಿ.ಶ್ರೇ) ಮೈಸೂರು

ಜಾರಿ ನಂ. 145/2016

ಡಿಕ್ರಿದಾರರು :ಮಂಗಳಗೌರಿ ಕೋಂ ಜ್ಞಾನದೇವಯ್ಯ, ಸುಮಾರು 62ವರ್ಷ, ವಾಸ: #235/5, 1ನೇ ಹಂತ, ಹೆಬ್ಬಾಳು, ಮೈಸೂರು

ವಿರುದ್ಧ

ತೀರ್ಪುಋಣಿ :ತಾರು ಬೇಗಂ, 1ನೇ ತೀರ್ಪುಋಣಿದಾರರು 2. ತನ್ವೀರ್ ಅಹಮ್ಮದ್, ಬಿನ್ ಮೊಹಮ್ಮದ್ ಇಸ್ಮಾಯಿಲ್, ವಯಸ್ಸು 47 ವರ್ಷ, ವಾಸ: ಇಡಬ್ಲ್ಯೂಎಸ್–106, ಪಿ.ಹೆಚ್. ಕಾಲೋನಿ, ಹುಡ್ಕೋ, ಬಡೇ ಮಕಾನ್ ಎಕ್ಸ್‌ಟೆನ್ಷನ್, ಎನ್.ಆರ್.ಮೊಹಲ್ಲಾ, ಮೈಸೂರು

"ಪತ್ರಿಕಾ ಪ್ರಕಟಣೆಗಾಗಿ"

ಡಿಕ್ರಿದಾರರು 1ನೇ ತೀರ್ಪುಗಾರುಣೆದಾರರ ವಿರುದ್ಧ ಕರಾರು ಪತ್ರದ ದಿನಾಂಕ: 07–09–2003 ಕ್ಕೆ ಸಂಬಂಧಿಸಿದಂತೆ ದಾವೆ ಹೂಡಿದ್ದು, ಸದರಿ ದಾವೆಯಲ್ಲಿ ನ್ಯಾಯಾಲಯವು 1ನೇ ತೀರ್ಪುಋಣಿದಾರರ ವಿರುದ್ಧ ಡಿಕ್ರಿ ಮಾಡಿದ್ದು, ಈ ದಾವೆಯು ಚಾಲ್ತಿಯಲ್ಲಿರುವಾಗ ನೀವು ಮನೆ. ನಂ.106, ಬಡೆಮಕಾನ್, ಹುಡ್ಕೋ ಲೇಔಟ್, ಎನ್.ಆರ್. ಮೊಹಲ್ಲಾ, ಮೈಸೂರು, ಕಟ್ಟಡ ಮತ್ತು ನಿವೇಶನ ಸೇರಿ ಪೂರ್ವ ಪಶ್ಚಿಮ: 4.57 ಮೀಟರ್, ಉತ್ತರ ದಕ್ಷಿಣ: 9.14 ಮೀಟರ್ ಆಸ್ತಿಯನ್ನು 1ನೇ ತೀರ್ಪುಋಣಿದಾರರಿಂದ ಕ್ರಯಕ್ಕೆ ಪಡೆದಿರುತ್ತೀರಿ. ಇದಾದ ನಂತರ ಈ ಘನ ನ್ಯಾಯಾಲಯದಿಂದ ನಿಮ್ಮನ್ನು ಪಕ್ಷಗಾರರನ್ನಾಗಿ ಮಾಡಿ ನ್ಯಾಯಾಲಯವು ನ್ಯಾಯಾಲಯದ ಸಮನ್ಸ್ ಮತ್ತು ಆರ್.ಪಿ.ಎ.ಡಿ., ಮೂಲಕವು ಸಹ ಸಮನ್ಸ್‌ನ್ನು ಜಾರಿ ಮಾಡಿದ್ದರೂ ನೀವು ಇಲ್ಲಿಯವರೆಗೂ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಹಾಜರಾಗದೇ ಇದ್ದುದರಿಂದ ಮತ್ತು ಈ ಪ್ರಕರಣವು ಮುಂದಿನ ದಿನಾಂಕ: 01–07–2023 ರಂದು ಹಾಜರಾತಿಗಾಗಿ ಕಾಯ್ದಿರಿಸಲಾಗಿದ್ದು, ಈ ದಿನ ನೀವು ಮತ್ತು ನಿಮ್ಮ ಪರವಾಗಿ ವಕೀಲರ ಮುಖಾಂತರ ಮೇಲ್ಕಂಡ ಘನ ನ್ಯಾಯಾಲಯದ ಮುಂದೆ ಬೆಳಗ್ಗೆ 11.00 ಗಂಟೆಗೆ ಹಾಜರಾಗತಕ್ಕದ್ದು. ಮತ್ತು ನಿಮ್ಮ ತಕರಾರುಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು, ನೀವು ಗೈರು ಹಾಜರಾದ ಸಂದರ್ಭದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ಆದೇಶ ವಾಗುತ್ತದೆಂದು ತಿಳಿಯತಕ್ಕದ್ದು.

ನ್ಯಾಯಾಲಯದ ಆದೇಶದ ಮೇರೆಗೆ

ಗೌರವಾನ್ವಿತ 6ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಹಿ.ಶ್ರೇ) ಮೈಸೂರು


ಅರ್ಜಿದಾರರ ಪರ ವಕೀಲರು

ಸಹಿ/– **ಶ್ರೀ ಬಿ.ಭೈರಪ್ಪ,** ವಕೀಲರು, ನಂ.2/1, 12ನೇ ಕ್ರಾಸ್, 5ನೇ ಮೇನ್, ಎಫ್.ಟಿ.ಎಸ್. ಹತ್ತಿರ, ಎನ್.ಆರ್.ಮೊಹಲ್ಲಾ, ಮೈಸೂರು

ಸ್ಥಳ: ಮೈಸೂರು ದಿನಾಂಕ: 20–04–2023







ಕರ್ನಾಟಕ ಸರ್ಕಾರ

(ಔಷಧ ನಿಯಂತ್ರಣಾ ಇಲಾಖೆ)

ಸಂ: ಔನಿಇ/ಉಔನಿಮೈ/ಆವಿ/87 /2023–24

ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿ, ಸಿಎ–08, 2ನೇ ಘಟ್ಟ, 4ನೇ ಹಂತ, ವಿಜಯನಗರ, ಮೈಸೂರು–32, ದಿನಾಂಕ :15/05/2023

ಟೆಂಡರ್ ಪ್ರಕಟಣೆ

ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿ, ಮೈಸೂರು ಕಛೇರಿಯ ಅಧಿಕೃತ ಕೆಲಸ ಕಾರ್ಯಗಳಿಗೆ 2023–24 ಸಾಲಿಗೆ ಮಾಸಿಕ ಗುತ್ತಿಗೆ ಆಧಾರದ ಮೇಲೆ 2018ನೇ ವರ್ಷದ ನಂತರ ನೋಂದಣಿಯಾದ ಹವಾನಿಯಂತ್ರಿತ ಕಾರು ವಾಹನದ ಸೇವೆಯನ್ನು ಪಡೆಯಲು ನಿಗದಿತ ಕಾರು ಮಾಡಲಾದ ನಮೂನೆಯಲ್ಲಿ ಮೊಹರು ನೋಂದಾಯಿತ ಏಜನ್ಸಿಗಳಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಇಚ್ಛಿಸುವ ಏಜನ್ಸಿಯ ಮಾಲೀಕರು ನಿಗದಿತ ನಮೂನೆಯಲ್ಲಿ ಟೆಂಡರು ಫಾರಂಗಳನ್ನು ಪಡೆದು ಭರ್ತಿ ಮಾಡಿ ಸಲ್ಲಿಸುವುದು. ಟೆಂಡರ್ ಫಾರಂಗಳನ್ನು ದಿನಾಂಕ:15/05/2023 ರಿಂದ 26/05/2023ರ ವರೆಗೆ ಕಛೇರಿ ಕೆಲಸದ ವೇಳೆಯಲ್ಲಿ ವಿತರಿಸಲಾಗುವುದು. ಸದರಿ ಟೆಂಡರ್ ಫಾರಂಗಳನ್ನು ಮೊಹರು ಮಾಡಿದ ಟೆಂಡರ್ ದರಪಟ್ಟಿಗಳನ್ನು ಅವಶ್ಯವಿರುವ ದಾಖಲೆಗಳೊಂದಿಗೆ ಕಛೇರಿಯ ಕೆಲಸದ ವೇಳೆಯಲ್ಲಿ ದಿನಾಂಕ: 29/05/2023 ಅಪರಾಹ್ನ 4.00 ಗಂಟೆಯೊಳಗೆ ಸಲ್ಲಿಸಬೇಕು. ದಿನಾಂಕ: 30/05/2023ರ ಸಂಜೆ 04.00 ಗಂಟೆಗೆ ಟೆಂಡರ್ ತರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಈ ಮೇಲಿನ ಕಛೇರಿಯನ್ನು ಸಂಪರ್ಕಿಸುವುದು. ದೂರವಾಣಿ ಸಂ: 08212970295/0821 2678510

ಸಹಿ/– (ಬಿ.ಪಿ.ಅರುಣ್) ಉಪ ಔಷಧ ನಿಯಂತ್ರಕರು ಪ್ರಾದೇಶಿಕ ಕಛೇರಿ, ಮೈಸೂರು.

